(*a*) whether Arasikere Taluk come within the purview of the Central Malaria Control Scheme ;

(*b*) the number of persons affected by malaria in Arasikere Taluk in the year 1953-54 and this year, *i.e.*, 1954-55 ;

(*c*) when D.D.T. was last sprayed in this taluk ;

(*d*) whether attempt has been made to include Arasikere Taluk under the Central Malaria Control Scheme ?

A.—Sri T. CHANNIAH (Minister for Public Health and Local Self-Government).—

(*a*) No.

(*b*) 26,826 in 1953-54.
28,778 in 1954-55.

(*c*) During the period 19th June 1954 to 24th June 1954 in view of the incidence of malaria in the taluk in an epidemic form.

(*d*) There is no necessity to include this taluk in the scheme on a permanent basis.

PRIVILEGES MOTION.

The Editor's Sta'ement in "Deccan Herald".

Mr. SPEAKER.—Sri A. V. Narasimha Reddy has given notice of a motion under Rule 173(1) as follows :

> "To discuss the privilege of the Members of this House arising out of the action of the Hon'ble Speaker in permitting the publication of the full text of the letter in the *Deccan Herald* of today addressed to this House by the Editor, *Deccan Herald*."

Hon'ble Members will remember that on 10th March 1955 the Hon'ble Home Minister brought to the notice of the Chair a case of misreporting in the *Deccan Herald* of the 9th. On this I gave a ruling on the 12th to the effect that no action was called for. In giving that ruling, I read out extracts of a letter received from the Editor of the *Deccan Herald*. Thereafter the Editor wrote to me that the reading out of extracts was not fair to him and he wanted permission to publish the entire letter. I readily granted him the permission.

Sri Mulka Govinda Reddy also raised this matter yesterday after question hour. He wanted to know why the full statement was not read out to the House and added that the full text of the letter gives a different version from the version got from hearing only extracts.

I fail to see how any privilege of an Hon'ble Member is involved. There was on the 10th no motion before the House. There was no proposition on which the vote of the House was required. The reading of the letter or extracts therefrom could not therefore affect any opinion of the House as there was no matter before the House for recording its opinion. What was called for at that stage was a ruling of the Speaker and in giving my ruling I read out what I considered were relevant extracts from the letter. I did not consider it necessary to read the entire letter as, in my opinion, the parts I omitted were not relevant to the matter in issue. In fact when the Editor requested permission to publish the full letter I readily consented as I did not consider that there was any essential difference between the full letter and the extracts I read out so far as the matter in issue was concerned.

I must also state that this motion seeks to call in question the action of the Speaker. It is wellknown that where provison is made for making a substantive motion admitting of a distinctive vote of the House, it cannot be debated except on such a motion. The conduct of the Speaker is one such. His action cannot be Criticised incidentally in debate or upon any form of proceeding except on substantive motion.

I have therefore to rule the motion as out of order.

MOTION FOR ADJOURNMENT.

Re: New Message Rate System for Telephones.

Sri Mulka GOVINDA REDDY (Chitaldrug).—Sir, today I have tabled an adjournment motion regarding the new message rate system for telephones that has come into force from the morning of 16th March 1955. I have tabled an adjournment motion. If you will permit me, I will explain how it is of public importance. . . .

Mr. SPEAKER.—We will take it up tomorrow.

Statement by Minister.

Sri H. SIDDAVEERAPPA (Minister for Home and Industries).—Sir, yesterday, I made a small mistake when I gave out the ruling prices of commodities. For horse gram the prevailing rate is Rs. 20 to Rs. 21 per palla. But by mistake I mentioned it as Rs. 30 to Rs. 31 per palla. I beg to be excused for the same.

Members' right to free use of Telephones.

Mr. SPEAKER.—About the new message rate system, I find it concerns the Hon'ble Members immediately. If any arrangement has to be made for their convenience, I would like to know the same. I want to know if anything can be done before going through the procedure and all that.

Sri Mulka GOVINDA REDDY.—My adjournment motion is pertaining to the rules of the message rate system that has been introduced in Bangalore from the early hours of today. Formerly, before 1951, we were paying Rs. 10, as rental per month for a telephone, to the Mysore Government.

Mr. SPEAKER.—Government was paying.

*Sri Mulka GOVINDA REDDY.—The public that owned telephones in Bangalore were paying Rs. 10 per month as rental before 1951. After it was integrated with the Government of India, with the Post and Telegraphs Department, it was enhanced from Rs. 10 per month which we were paying. Now, from today, in addition to paying Rs. 10 per month. . . .

Mr. SPEAKER.—Before taking up this adjournment motion, I want to know whether any inconvenience has been caused to the Hon'ble Members, so that it can be set right. Tomorrow we will take up the adjournment motion.

Sri J. MOHAMED IMAM.—We have to pay for it. That is the most inconvenient thing.

Mr. SPEAKER.—Because it touches the pocket of the Hon'ble Members.

*Sri J. MOHAMED IMAM.—Under the rules we are entitled to free furnished lodging. The Speaker has to decide whether free furnished lodging will not also include telephones. We are entitled for free furnished quarters with all amenities including kitchen utensils and all essential amenities that are necessary for legislators. Telephone is also a necessity for every legislator to discharge his duty because he has to be in touch with so many prominent persons and officers and many public men also want to contact us. So, the service of a telephone is absolutely necessary for every legislator in order to enable him to discharge his duty better and more efficiently and also to serve the public more effectively. Further the definition of free furnished quarters also includes telephone.

*Sri A. BHEEMAPPA NAIK (Molakalmuru).—Does the supply of free are include free supply of radio to a Minister? Because, very recently in the Gazatte it was published that the Minister was entitled to fix a radio and all that at the cost of Government. So, this is also another kind of radio for which a member is entitled to free supply.

Mr. SPEAKER.—I understand the point. It is a matter of interpretation of the rules and we have to be guided by the present rules till they are amended. It is purely a matter of interpretation of the rules now in force and we will always try to interpret the rules in favour of the members, but we cannot by pass the rules.

Sri J. MOHAMED IMAM.—It is entirely a new rule.

Sri A. BHEEMAPPA NAIK.—Hitherto, a convention has been built up for the free supply of telephones and the members were using these telephones free of cost. Should not the convention be respected ?

Mr. SPEAKER.—I will have a talk with the Leader of the House.

Business of this House.

Sri J. MOHAMED IMAM (Jagalur).—Regarding the programme for the session, Sir, I find from the revised programme that the session has been extended up to 19th of April. But Sir, you were kind enough to promise that you would also consult the Leader of the Opposition. Now I am taken by surprise, as the new programme is in my hands.

Mr. SPEAKER.—I am sorry to say that the Hon'ble Leader of the Opposition was not present because we wanted to inform him earlier so that we could adjust the future programme. We waited for a day or two.

Sri J. MOHAMED IMAM.—My own idea is that we should have a break between the Budget Session and the Legislative Session. Another thing is, we have got other important subjects to be discussed. There is the Audit and Appropriation Report, the Report of the working of Public Service Commission as also the Report of the Race Course Committee, but no provision has been made for the discussion of these reports.

*Sri A. G. RAMACHANDRA RAO (Minister for Law and Education).—The discussion on these reports are not automatic. These are not bodies which are created by the Legislative Assembly or the Legislative Council. It is only those reports that come up for discussion. But other reports are placed on the Table for the sake of information so that the members can make use of that information and ask such questions as they like or use that information in such manner as they deem fit. Automatically they would not come up for discussion.

Sri Mulka GOVINDA REDDY (Chitaldrug).—I have already sent two motions.

Sri A. BHEEMAPPA NAIK (Molakalmuru).—The Audit and Appropriation Report can be taken into consideration if any member were to make a request to that effect.

Sri Mulka GOVINDA REDDY.—I have already sent two motions, one relating to Appropriation Accounts and Audit Report for 1953 and the other, the Report on the working of the Public Service Commission. What I would like to impress upon this House is that Government may allot some days for discussing these reports, but non-official days which are meant for non-official business should not be utilised for discussing these reports. That is my point of view.

Sri V. M. MASCARENHAS (St. John's Hill).—We had three days' discussion on States Re-organisation and hardly nine members have spoken out of a House of 105 members and the Government have allotted only two more days. I would request you to let me know what mathematics was involved when remaining 96 members have to speak in two days.

Mr. SPEAKER.—We will consider all these matters tomorrow or day after tomorrow, and I shall let you know after consulting with the Leader of the House.

Sri Mulka GOVINDA REDDY.—Regarding another Committee Report that is going to be published and placed before this House, that is, regarding Mineral Wealth Committee, I understand that the Committee have already submitted their report to Government and if that comes up before this Assembly, provision also may be made for the discussion of that report.

Mr. SPEAKER.—Now we will proceed with the Demands.

BUDGET FOR 1955-56.

Demand for Grants.

Mr. SPEAKER.—There are four Demands today, and I have allotted time in this way :—

Demand No. 16—

One hour.

Demand No. 17—

Half an hour.

Demand No. 23—

One hour and fifteen minutes because it concerns with the Rural Development Works and

Demand No. 24—

Three-fourths of an hour.

Demand No. 16—Police.

29. POLICE.

Mr. SPEAKER.—Motion moved :

"That a sum not exceeding Rs. 1,23,91,997 be granted to the Government to defray the charges which will come in course of payment during the year ending 31st day of March 1956, in respect of 'Police'."

Sri H. SIDDAVEERAPPA (Minister for Home and Industries).—Sir, what I have got to say in the matter has already been published in a brief note which I have submitted and circulated to the Hon'ble House. Therefore, I do not propose to say anything at this stage. If any points are raised in the course of discussion, I would like to reply.

Mr. SPEAKER.—I am given to understand that the following cut mo ions will be taken up according to the agreed decision. I will read the cut motions :—

"Cut motions Nos. 1, 3, 4, 8, 14, 24, 26, 30, 32, 34, 36, 43, 45, 48, 49, 57, 59 and 61."

I want to bring it to the notice of the Hon'ble Members whether all these cut motions can be moved and discussed. Therefore if they want to accommodate other Members, they should be brief in their speeches.

System of Police Training.

ಶ್ರೀ ಎಸ್. ಕರಿಯಪ್ಪ (ವಿರೂಪಾಕ್ಷಪುರ).—ಸ್ವಾಮಿ, ಈ ಪೋಲೀಸ್ Training School ಈ ಪೋಲೀಸ್ ಇಲಾಖೆ ಯಾವಾಗ ಜಾರಿಗೆ ಬಂತೋ ಆ ಕಾಲದಿಂದ ಇದೆ. ಆದರೆ ಇಲ್ಲಿ ಕೊಡತಕ್ಕ ಶಿಕ್ಷಣಕ್ರಮ ಸ್ವಲ್ಪ ಮಟ್ಟಿಗೂ ಬದಲಾವಣೆಯಾಗಿಲ್ಲ. ಆದರೆ ತಕ್ಕೀರುಗಳು ಹೊಸ ತರಹದಲ್ಲಿ ನಡೆಯುತ್ತಾ ಇವೆ. ಹೊಸ ಪರಿಸ್ಥಿತಿಗೆ ಹೊಂದುವ ಹಾಗೆ ಶಿಕ್ಷಣ ಕ್ರಮವನ್ನು ಬದಲಾವಣೆ ಮಾಡಬೇಕಾದುದು ತುಂಬ ಅವಶ್ಯಕ. ಆದರೆ ಈ ಕಡೆ ಸರ್ಕಾರದ ಗಮನ ಹೋಗದೆ ಇರತಕ್ಕದ್ದು ಬಹಳ ಶೋಚನೀಯವಾಗಿದೆ. ನಡ್ದದಲ್ಲಿ ನಡೆಯತಕ್ಕಂಥ ಶಿಕ್ಷಣಕ್ರಮದಲ್ಲಿ ಸ್ವಲ್ಪ drill ಮಾಡತಕ್ಕಂಥಾದ್ದು, ಹಾಗೆಯೇ ಕ್ರಿಮಿನಲ್ Procedure Code, Penal Code Evidence Act, ಇವುಗಳ ಸ್ವಲ್ಪ ಭಾಗವನ್ನೂ ಪೋಲೀಸ್ ಆಕ್ಟ್‌ನಲ್ಲಿ ಸ್ವಲ್ಪ ಭಾಗವನ್ನೂ ಮಾತ್ರ ಹೇಳಿಕೊಡುವುದಾಗಿದೆ. ಎಲ್ಲಿಯಾದರೂ ಭಾವಿಯಲ್ಲಿ ಹೆಣ ಬಿದ್ದಿದ್ದರೆ ಈಜಿಕೊಂಡು ಹೋಗಿ ಹೆಣ ತೆಗೆಯುವ ಶಕ್ತಿ ಪೋಲೀಸಿನವರಿಗೆ ಇಲ್ಲ. ಮರದ ಮೇಲೆ ನೇಣು ಹಾಕಿಕೊಂಡಿದ್ದರೆ ಇನ್ನೊಬ್ಬನನ್ನು ಕರೆದು ಆ ಹೆಣವನ್ನು ಬಿಡಿಸಬೇಕಾಗಿದೆ. ಯಾರಾದರೂ ಹಿಡಿದುಕೊಂಡರೆ ಅವರಿಂದ ಬಿಡಿಸಿಕೊಳ್ಳತಕ್ಕ ಶಕ್ತಿ ಅವರಿಗಿಲ್ಲ. ನಾನಾ ನಮೂನೆಯ ಪಟ್ಟುಗಳನ್ನೂ ಕುಸ್ತಿಗಳನ್ನೂ ಕಲಸದೆ ಇರುವುದು ಒಂದು ನೂನತೆ ಆಗಿದೆ. ಯಾರಾದರೂ ಬೈಸಿಕಲ್‌ನಲ್ಲಿ ಓಡಿ ಹೋಗುತ್ತಿದ್ದರೆ ಬೈಸಿಕಲ್ ಮೇಲೆ ಹೋಗಿ ಹಿಡಿಯತಕ್ಕಂಥ ಟ್ರೈನಿಂಗ್ ಅನೇಕರಿಗೆ ಇಲ್ಲ. Bootsನ್ನು ಹಾಕಿಕೊಳ್ಳುವುದಕ್ಕೆ ಗೊತ್ತಿಲ್ಲದೆ ಇರುವ ಅನೇಕ ಪೋಲೀಸಿನವರು ಇದ್ದಾರೆ. ಆದ್ದರಿಂದ ಈಗ ಹೊಸ ಪರಿಸ್ಥಿತಿಗೆ Training ಕ್ರಮವನ್ನು ಅಳವಡಿಸಿಕೊಳ್ಳುವುದು ಅಗತ್ಯವಾಗಿದೆ. ಈಗ ಪೋಲೀಸ್ ಇಲಾಖೆಯಲ್ಲಿ Promotion ಕೊಡಬೇಕಾದರೆ ಸಾಮಾನ್ಯವಾಗಿ Seniority ಮೇಲೆ ಕೊಡುವುದು ವಾಡಿಕೆಯಲ್ಲಿದೆ. Training ಆದ ಮೇಲೆ ವರ್ಷ ವರ್ಷವೂ ಕೂಡ ಏನೇನು ಪರೀಕ್ಷೆಗಳನ್ನು private ಆಗಿ ಕೂತು ಪಾಸ್ ಮಾಡಬಹುದು ಎಂಬುದನ್ನು ಗೊತ್ತು ಮಾಡಿದರೆ, ಆಗ ಅವರು ಆ ಪರೀಕ್ಷೆಗಳನ್ನು ಪಾಸ್ ಮಾಡಿಕೊಳ್ಳುತ್ತಾರೆ. ಹಾಗೆ ಪಾಸ್ ಮಾಡಿರತಕ್ಕಂಥ ದರ್ಜೆಗೆ ಅನುಸಾರವಾಗಿ ಅವರಿಗೆ promotion ಕೊಟ್ಟರೆ ಅದರಿಂದ ಪೋಲೀಸ್ ಇಲಾಖೆಯಲ್ಲಿ ದಕ್ಷತೆ ಹೆಚ್ಚುತ್ತದೆ. ಹೀಗೆ ನೀವು ಒಂದು ಶಿಕ್ಷಣ ಕ್ರಮವನ್ನು ಉತ್ತಮಗೊಳಿಸದೆ ಹೋದರೆ ದಕ್ಷತೆಗೆ ಭಂಗ ಬರುತ್ತದೆ. ಈಗಾಗಲೇ ನಾವು ದಕ್ಷತೆಯಲ್ಲಿ ಲೋಪವನ್ನು ಕಾಣುತ್ತಿದ್ದೇವೆ. ಪೋಲೀಸ್ ಇಲಾಖೆಯಲ್ಲಿ ದಕ್ಷತೆಯನ್ನು ಹೆಚ್ಚಿಸಬೇಕಾದರೆ ಶಿಕ್ಷಣ ಕ್ರಮವನ್ನು ಉತ್ತಮಪಡಿಸಬೇಕಾದುದು ತುಂಬ ಅವಶ್ಯಕವಾಗಿದೆ. ಶಿಕ್ಷಣ ಕ್ರಮವನ್ನು ಉತ್ತಮಪಡಿಸಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

Reorganization of Police Department.

*ಶ್ರೀ ಜಿ. ಶಿವಪ್ಪ (ಹೊಳಲ್ಕೆರೆ).—ಒಂದು ರಾಜ್ಯಾಡಳಿತ ಸಮರ್ಪಕವಾಗಿದೆಯೆಂದು ತೀರ್ಮಾನ ಮಾಡಬೇಕಾದರೆ. . . .

Mr. SPEAKER.—I want the mover of this cut motion also to be very short.

ಶ್ರೀ ಜಿ. ಶಿವಪ್ಪ.—ಬಾಗ್ಯತೆ ಮುಗಿಸುತ್ತೇನೆ. ಹಿಂದಿನಿಂದಲೂ ಕೂಡ ಸರ್ಕಾರ ಯಾವಾಗ ಸ್ಥಾಪನೆಯಾಯಿತೋ, ಆಗಿನಿಂದಲೂ Police ಇಲಾಖೆ ಒಂದಲ್ಲ ಒಂದು ರೀತಿ ಇದ್ದೇ ಇದೆ.

ಶ್ರೀ ಡಿ. ದೇವರಾಜ್ ಅರಸ್ (ಹುಣಸೂರು).—ಜಗತ್ತು ಹುಟ್ಟುವ ಮೊದಲು Police ಇಲಾಖೆ ಎಲ್ಲಿಂದ ಬಂತು?

ಶ್ರೀ ಜಿ. ಶಿವಪ್ಪ.—ನಾನು ಹೇಳಿದ ವಿಚಾರ ತಾವು ಅರ್ಥ ಮಾಡಿಕೊಂಡಿಲ್ಲ. ಸರ್ಕಾರ ಹಿಂದಿನಿಂದಲೂ ಇತ್ತು. ಅಶೋಕನ ಕಾಲದಲ್ಲಿಯೂ ಪೋಲೀಸ್ ಇಲಾಖೆ ಇತ್ತು. ಅವನ ಹಿಂದೆಯೂ ಇತ್ತು ಎಂದು ಅರ್ಥ. ಆಗ ಅವರನ್ನು ಪೊಲೀಸ್ ಎಂದು ಕರೆಯದೆ ಬೇರೆ ಹೆಸರಿನಿಂದ ಕರೆಯುತ್ತಿರಬಹುದು.

1-30 P.M.

ಈಗ ನಾವೆಲ್ಲರೂ ಭಾವಿಸಿರುವ ಪ್ರಕಾರ, ಪೋಲೀಸ್ ದಳ ಇರತಕ್ಕದ್ದು ದುಷ್ಟರನ್ನು ಶಿಕ್ಷಿಸತಕ್ಕದ್ದು ಶಿಷ್ಟರನ್ನು ಪರಿಪಾಲಿಸತಕ್ಕದ್ದಾಗಿದೆ. ಅಂಥಾದ್ದು, ಈಗ ನೋಡಿದರೆ, ತಿರುಗು ಮರುಗಾಗಿದೆ. ಅನೇಕ ಸಾರಿ ದುಷ್ಟರಿಗೇ ಅನುಕೂಲಗಳು, ಸಹಾಯಗಳು ದೊರಕುತ್ತಿರುತ್ತವೆ. ಹಿಂದೆ ಪಾನ ನಿರೋಧದ ಮೇಲೆ ಚರ್ಚೆ ನಡೆದಾಗಲೂ ನಾನು ಹೇಗೆ ಕುಡಿಯುವವರು, ಕಳ್ಳಬಟ್ಟಿ ವ್ಯಾಪಾರ ಮಾಡುವವರು ಪೋಲೀಸಿನವರ ಸಂಪರ್ಕವಿಟ್ಟುಕೊಂಡೇ ತಮ್ಮ ಕೆಲಸ ಮಾಡುತ್ತಿರುತ್ತಾರೆಂಬುದನ್ನು ಹೇಳಿದ್ದೇನೆ. ಇದು ಪಾಸ್ತವವಾಗಿ ನಡೆಯುತ್ತಿರುವಂಥಾದ್ದು. ಆದರೂ ಮಾನ್ಯ ಮಂತ್ರಿಗಳು ಉತ್ತರ ಹೇಳುವಾಗ ಬಹಳ ಚೆನ್ನಾಗಿ ಹೇಳುತ್ತಾರೆ. ಅವರೇನು ಉತ್ತರ ಹೇಳುತ್ತಾರೆಂಬುದು ನನಗಾಗಲೇ ಗೊತ್ತಿದೆ. ದೊಡ್ಡ ದೊಡ್ಡ ಅಂಕಿ ಅಂಶಗಳನ್ನು ನಮ್ಮ ಮುಂದಿಟ್ಟು ಅದರ ಮೇಲೆ ಸಾದಿಸಿ ತಕ್ಕೀರುಗಳ ಸಂಖ್ಯೆ ಕಡಮೆಯಾಗಿದೆಯೆಂದು ಹೇಳುತ್ತಾರೆ; ಇಲ್ಲವೇ, 'ನಿರ್ದಿಷ್ಟವಾದ ಉದಾಹರಣೆಯನ್ನು ಕೊಡಿ, ನಾನು ತನಿಖೆ ಮಾಡುತ್ತೇನೆ' ಎಂದು ಹೇಳುತ್ತಾರೆ. ಅವರ ಮಾತಿನಂತೆ ನಿರ್ದಿಷ್ಟವಾದ ಉದಾಹರಣೆಗಳನ್ನು ಕೊಡುವುದಕ್ಕೆ ನಾವಿಲ್ಲಿ ಬಂದಿಲ್ಲ. ಅದರಲ್ಲೂ ನಮ್ಮ ದೇಶದಲ್ಲಿರತಕ್ಕ ಪೋಲೀಸಿನವರ ಹತ್ತಿರ ಹೋಗಿ ಸಮಜೋಡಿಯಾಗಿ ವಾದಕ್ಕೆ ನಾವು ನಿಲ್ಲಬೇಕೆಂದರೆ ಮಾನ್ಯ ಮಂತ್ರಿಗಳು ನಮ್ಮನ್ನು ಯಾವ ದರ್ಜೆಗೆ ನೂಕುತ್ತಾರೆಂಬುದನ್ನು ಯೋಚನೆಮಾಡಿ ಎಷ್ಟೋ ಸಾರಿ ನಾನೇ ನೋಡಿದ್ದೇನೆ. ಚಾರ್ಜ್‌ಷೀಟ್ ಹಾಕಿ ಫಿರ್ಯಾದಿಯಿಂದ ಯಿದ್ದು ತೆಗೆದುಕೊಳ್ಳುತ್ತಾರೆ; ಇನ್ನು ಕೆಲವು ವೇಳೆ ಚಾರ್ಜ್‌ಷೀಟನ್ನು ವಾಪಸು ತೆಗೆದುಕೊಂಡು ಅಪರಾಧಿಯಿಂದ ದುಡ್ಡು ತೆಗೆದುಕೊಳ್ಳುತ್ತಾರೆ. ಇದೆಲ್ಲಾ ನಾವು ಹೇಳಿದರೆ ಮಾನ್ಯ ಮಂತ್ರಿಗಳು ಒಪ್ಪಿಕೊಳ್ಳುವುದಿಲ್ಲ. ಅಲ್ಲದೆ, ಈ ಸಭೆಯಲ್ಲಿ defend ಮಾಡಿಕೊಳ್ಳುವುದೂ ಅವರ ಕರ್ತವ್ಯ.

ಒಟ್ಟಿನಲ್ಲಿ ಹೇಳುವುದಾದರೆ, ಈ ಇಲಾಖೆಯಲ್ಲಿ ಪ್ರಾಮಾಣಿಕತೆ ಸರಿಯಾಗಿಲ್ಲ. ಪ್ರಾಮಾಣಿಕತೆಯನ್ನು ಉಳಿಸುವುದಕ್ಕೆ ಪ್ರಯತ್ನ ಮಾಡಬೇಕಾದದ್ದು ಅವಶ್ಯಕ. ಕಾನ್ಸ್‌ಟೇಬಲ್‌ಗಳ ಮೇಲೆ ದಫೇದಾರು, ದಫೇದಾರರ ಮೇಲೆ ಸಬ್ ಇನ್‌ಸ್ಪೆಕ್ಟರು, ಸಬ್ ಇನ್‌ಸ್ಪೆಕ್ಟರ ಮೇಲೆ ಇನ್‌ಸ್ಪೆಕ್ಟರು, ಇನ್‌ಸ್ಪೆಕ್ಟರ ಮೇಲೆ ಡಿ. ಎಸ್. ಪಿ., ಅವರ ಮೇಲೆ ಡಿ.ಐ.ಜಿ. ಮತ್ತು ಐ.ಜಿ.ಪಿ. ಗಳು, ಅವರ ಮೇಲೆ ಮಂತ್ರಿಗಳು, ಮಂತ್ರಿಗಳ ಮೇಲೆ ನಾವು, ನಮ್ಮ ಗಳ ಮೇಲೆ ಜನರು ಅಧಿಕಾರ ವಹಿಸಿದ್ದಾರೆ. ಹೀಗಿರುವಾಗ ಮಂತ್ರಿಗಳಾದ ನೀವು ನಮಗೆ ಜವಾಬುದಾರರಾಗಿ ಇದನ್ನು ಸರಿಪಡಿಸಬೇಕೇ ಹೊರತು, ನಾವು ಕಂಪ್ಲೇಂಟ್ ಕೊಟ್ಟು ಸರಿಪಡಿಸುವುದಕ್ಕೆ ಇಲ್ಲಿ ಬರಬೇಕಾಗಿಲ್ಲ. ಈ ಇಲಾಖೆಯಲ್ಲಿ ಹೇಗೆ ನಡೆಯುತ್ತಿರುತ್ತದೆಂಬುದಕ್ಕೆ ಒಂದು ಉದಾಹರಣೆಯನ್ನು ಕೊಡುತ್ತೇನೆ. ಒಂದು ಊರಿನಲ್ಲಿ ಒಂದು ವ್ಯಾಜ್ಯ ಬಿತ್ತು. ಪಾರ್ಟಿಗಳು ಯಾರು, ಏನು ಎಂಬುದನ್ನು ನಾನು ಹೇಳುವುದಿಲ್ಲ. ಎರಡು ಕಡೆಯವರೂ ನನಗೆ ಗೊತ್ತಾದವರೇ. ಒಬ್ಬರು ಅನುಕೂಲಸ್ಥರು. ಇನ್ನೊಂದು ಕಡೆಯವರು ಅಷ್ಟು ಅನುಕೂಲಸ್ಥರಲ್ಲ. ಅನುಕೂಲಸ್ಥರು ಹೋಗಿ ಸಬ್ ಇನ್‌ಸ್ಪೆಕ್ಟರನ್ನು ಸರಿಮಾಡಿದರು. ಆ ಸಂದರ್ಭದಲ್ಲಿ ಇನ್ನೊಂದು ಪಾರ್ಟಿಯವರು, ಅಷ್ಟು ಅನುಕೂಲಸ್ಥರಲ್ಲದವರು ನನಗೆ ಹೇಳಿಕೊಂಡರು, 'ಈ ರೀತಿಯಾಗಿ ಕೇಸಿನಲ್ಲಿ ವಿಷಯಗಳನ್ನು ಕೈ ಬಿಟ್ಟಿದ್ದಾರೆ, ನ್ಯಾಯ ದೊರಕುತ್ತಿಲ್ಲ; ದಯವಿಟ್ಟು ನೀವು ಬಂದು ಹೇಳಬೇಕು' ಎಂದು. ನಾನು ಹೇಳಿದೆ: 'ಪೋಲೀಸಿನವರ ಹತ್ತಿರ ನಾನು ಹೋಗುವುದಿಲ್ಲ. ಸಂಸ್ಕೃತರಾಗಿರುವವರು ಅವರ ಹತ್ತಿರ ಹೋಗುವುದಕ್ಕೆ ಹಿಂದು ಮುಂದೆ ನೋಡುತ್ತಾರೆ, ನೀವೇ ಏನಿದ್ದರೂ ಸರಿ ಮಾಡಿಕೊಳ್ಳಬೇಕು' ಎಂದು. ಅವರಿಗೆ ಇನ್ನೊಂದು ವಿಚಾರವನ್ನೂ ಸೂಚಿಸಿದೆ. ಡೆಪ್ಯುಟಿ ಕಮಿಷನರಿಗೆ ಒಂದು ಅರ್ಜಿ ಕೊಟ್ಟು ಈ ಸಬ್ ಇನ್‌ಸ್ಪೆಕ್ಟರು ಲಂಚ ತೆಗೆದುಕೊಳ್ಳುವುದಕ್ಕೆ ತಯಾರಾಗಿದ್ದಾರೆಂದು ತಿಳಿಸಿ, ಆಮೇಲೆ ಲಂಚ ಕೊಟ್ಟು ಬಂದು ಹೇಳಿ ಎಲ್ಲಾ ಸರಿ ಹೋಗುತ್ತದೆಂದು ಹೇಳಿದೆ. ಆದರೆ, ಅವರು ನಮ್ಮ ಮೇಲೆಯೂ ಚಾರ್ಜ್‌ಷೀಟ್ ಹಾಕಿಬಿಡುತ್ತಾರೆಂದು ಹೇಳಿ ಒಪ್ಪಲಿಲ್ಲ, ತಾವೇ ಹೋಗಿ ಹೇಗೋ ಸರಿ ಮಾಡಿಕೊಂಡರು. ಕೊನೆಗೆ ಸಬ್ ಇನ್‌ಸ್ಪೆಕ್ಟರು ಈ ಕಡೆಯೂ ಚಾರ್ಜ್‌ಷೀಟ್ ಕೊಟ್ಟರು. ಆ ಕಡೆಯೂ ಚಾರ್ಜ್‌ಷೀಟ್ ಕೊಟ್ಟರು.

ಈ ರೀತಿಯಾಗಿ ಈ ಇಲಾಖೆಯಲ್ಲಿ ಸರ್ಕಾರಿ ನೌಕರನಿಗೆ ಅತಿ ಮುಖ್ಯವಾಗಿರುವ ಪ್ರಾಮಾಣಿಕತೆ ಇರುವುದಿಲ್ಲ. ಇದರಿಂದಾಗಿ ಜನರೆಲ್ಲರೂ ಅಡಿಕೊಳ್ಳುವುದಕ್ಕೆ ಕಾರಣವಾಗಿದೆ. ಆದ್ದರಿಂದ ದಯವಿಟ್ಟು ತಮ್ಮಲ್ಲಿರುವ supervisory powersನ್ನು ಉಪಯೋಗಿಸಿಕೊಂಡು, ನಮ್ಮನ್ನು ಉದಾಹರಣೆಗಳನ್ನು ಕೊಡಿ ಎಂದು ಹೇಳದೆ ನೀವೇ ಸರಿಪಡಿಸಬೇಕೆಂದು ಹೇಳುತ್ತೇನೆ.

Scheduled Castes Police Officers.

*ಶ್ರೀ ಎಂ. ಮಾದಯ್ಯ (ನಂಜನಗೂಡು—ಅನುಸೂಚಿತ ಜಾತಿಗಳು).—ಅಧ್ಯಕ್ಷರೇ, ಸರ್ಕಾರದವರು ಪೋಲೀಸ್ ಇಲಾಖೆಯಲ್ಲಿರತಕ್ಕ ನಿಮ್ನ ತರಗತಿಯ ಕೆಲವು ಅಧಿಕಾರಿಗಳಿಗೆ ಇತ್ತೀಚೆಗೆ ಉತ್ತೇಜನಕೊಡುತ್ತಿದ್ದಾರೆ. ಅದಕ್ಕಾಗಿ ನಾನು ಅವರನ್ನು ಅಭಿನಂದಿಸಬೇಕಾಗಿದೆ. ಆದರೂ, ನಮ್ಮ ಸಂಸ್ಥಾನದಲ್ಲಿ ಈ ಇಲಾಖೆಯ ದೊಡ್ಡ ದೊಡ್ಡ ಅಧಿಕಾರಗಳನ್ನು ಪರಿಶೀಲನೆಮಾಡುವುದಾದರೆ, ಇಲ್ಲಿರುವ ಒಬ್ಬರು ಐ.ಜಿ.ಪಿ., ಮೂವರು ಡಿ.ಐ.ಜಿ.ಗಳು,

(ಶ್ರೀ ಎಂ. ಮಾದಯ್ಯ).

45 ಜನ ಡಿ.ಎಸ್.ಪಿ.ಗಳ ಪೈಕಿ ಡಿಪ್ರೆಸ್ಡ್ ಕ್ಲಾಸಿನವರ ಸಂಖ್ಯೆ ಬಹಳ ವಿರಳ. ಡಿ.ಎಸ್.ಪಿ., ಡಿ.ಐ.ಜಿ.ಗಳಾಗಿ ಒಬ್ಬರೂ ಇಲ್ಲ, ಎ.ಎಸ್.ಪಿ.ಗಳಾಗಿ ಒಬ್ಬರು ಮಾತ್ರ ಇದ್ದಾರೆ; ಇನ್ಸ್‌ಪೆಕ್ಟರುಗಳ ದರ್ಜೆಯಲ್ಲಿಯೂ ಕೂಡ ಕೇವಲ 6 ಜನ ಇದ್ದಾರೆ. ಈ ಪ್ರಕಾರ, ಈ ಇಲಾಖೆಯಲ್ಲಿ ಗೆಜೆಟೆಡ್ ಹುದ್ದೆಗಳಲ್ಲಿ ನಿಮ್ನ ತರಗತಿಯವರ ಪ್ರಾತಿನಿಧ್ಯ ಬಹಳ ಕಡಮೆಯಿದೆ. ಆದಷ್ಟು ಉತ್ತೇಜನಕೊಟ್ಟು ಇವರನ್ನು ಮುಂದಕ್ಕೆ ತರಬೇಕೆಂಬ ಹೇಳಿ ನಾನು ಸರ್ಕಾರದವರಲ್ಲಿ ಅಂಕೆ ಮಾಡಿಕೊಳ್ಳುತ್ತೇನೆ. ಈಗಾಗಲೇ ಸ್ವಲ್ಪಮಟ್ಟಿಗೆ ಉತ್ತೇಜನ ಕೊಟ್ಟಿದ್ದೀರಿ; ನಮ್ಮ ಜನಗಳ ಬಗ್ಗೆ ಪ್ರತಿನಿಧಿಗಳು ಬಂದು ಅವರ ಕುಂದುಕೊರತೆಗಳನ್ನು ನಿವೇದಿಸಿಕೊಂಡಿದ್ದರಮೇರೆ ಸಹಾನುಭೂತಿಯಿಂದ ಪರಿಶೀಲನೆ ಮಾಡಿ ಸಹಾಯ ಮಾಡಿದ್ದೀರಿ. ಆದರೂ ನಾವು ನಿರೀಕ್ಷಿಸಿದಷ್ಟು ಫಲ ಬಂದಿಲ್ಲ. ಇನ್ನು ನಮ್ಮವರ ಪ್ರಾತಿನಿಧ್ಯ ಬಹಳ ಕಡಮೆಯಿದೆ. ನಿಮ್ನ ತರಗತಿಯವರಲ್ಲೂ ದಕ್ಷರೂ, ಅರ್ಹರಾಗಿರುವವರೂ, ಪ್ರಾಮಾಣಿಕರಾಗಿರುವವರೂ ಆಗಿರುವ ಅಧಿಕಾರಿಗಳು ಈ ಇಲಾಖೆಯಲ್ಲಿ ಹೇರಳವಾಗಿದ್ದಾರೆಂದು ಹೇಳಿದರೆ ತಪ್ಪಾಗಲಾರದು. ಆದ್ದರಿಂದ ಇವರುಗಳನ್ನು ಮೇಲಿನ ಅಧಿಕಾರದ ಹುದ್ದೆಗಳಿಗೆ ನೇಮಿಸಬೇಕೆಂದು ಕೇಳಿಕೊಳ್ಳುತ್ತೇನೆ. ಈಗ ಎ.ಎಸ್.ಪಿ.ಯಾಗಿ seniormost ಅಧಿಕಾರಿಯಾಗಿ ಒಬ್ಬರು ಇದ್ದಾರೆ, ಸಂಸ್ಥಾನದಲ್ಲಿ ಎಲ್ಲಿ ಗಲಭೆಯುಂಟಾಗಿದ್ದರೂ, ಅಲ್ಲಿಗೆ ಇವರನ್ನು ಹಾಕಿದ್ದೀರಿ. K.G.F.ನಲ್ಲಿ ಗಲಾಟೆ ಬಂದಾಗ ಅಲ್ಲಿಗೆ ಹಾಕಿದ್ದರು. ಚಿತ್ರದುರ್ಗದಲ್ಲಿ ಗಲಾಟೆ ಬಂದಾಗ ಅವರ ಮನೆಯಲ್ಲಿ ತೊಂದರೆಯಿದ್ದರೂ ನೋಡದೆ ಶ್ರೀಮಾನ್ ನಾಗರಾಜರಾಯರು ಐ.ಜಿ.ಪಿ.ಯಾಗಿದ್ದಾಗ ಅವರನ್ನು ಚಿತ್ರದುರ್ಗಕ್ಕೆ ಕಳುಹಿಸಿಕೊಟ್ಟರು. ಹೀಗೆಯೇ ನಮ್ಮ ಜನರು ಇನ್ಸ್‌ಪೆಕ್ಟರಾಗಿರುವವರು ಎಷ್ಟೋ ದಕ್ಷತೆಯಿಂದ, ನಿಮ್ಮ ನಂಬಿಕೆಗೆ ಅರ್ಹರಾಗಿ ಕೆಲಸಮಾಡಿದ್ದಾರೆ. ಅಂಥವರಿಗೆ ಬಡ್ತಿಕೊಡುವುದರಲ್ಲಿ ಏನೋ ಕೆಲವು ತೊಂದರೆಗಳಿದೆಯೆಂದು ತಿಳಿದುಬಂದಿದೆ. ಒಬರು ಸೀನಿಯರ್ ಇನ್ಸ್‌ಪೆಕ್ಟರು ನಾಲ್ಕಾರು ವರ್ಷಗಳಿಂದಲೂ ಇನ್ಸ್‌ಪೆಕ್ಟರಾಗಿಯೇ ಉಳಿದಿರುತ್ತಾರೆ. ಅವರಿಗಿಂತ junior ಆಗಿರುವವರಿಗೆ promotion ಕೊಟ್ಟು, ಅವರ ವಿಷಯವನ್ನು ಕಡೆಗಾಣಿಸಿದಂತೆ ಕಾಣುತ್ತದೆ. ಹಾಗೆಯೇ ಇನ್ನೊಬ್ಬರು ಇನ್ಸ್‌ಪೆಕ್ಟರ್. ಅವರೂ ಅನೇಕ ಸೆಕ್ಷನ್‌ಗಳಲ್ಲಿ ದಕ್ಷತೆಯಿಂದ ಕೆಲಸಮಾಡಿ ಸಂಬಂಧಪಟ್ಟ ಮೇಲಿನ ಅಧಿಕಾರಿಗಳ ವಿಶ್ವಾಸಕ್ಕೆ ಪಾತ್ರರಾಗಿದ್ದಾರೆ. ಅಂಥವರಿಗೆ chance ಬಂದಾಗ ತಪ್ಪದೆ promotion ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಡಿ.ಎಸ್.ಪಿ.ಗಳ ಸ್ಥಾನಗಳಲ್ಲೂ ಮೂರು ಜಾಗಗಳು ಇನ್ನು ನಾಲ್ಕಾರು ತಿಂಗಳುಗಳಲ್ಲಿ ಖಾಲಿ ಬೀಳುತ್ತವೆಂದು ಕಂಡುಬಂದಿದೆ. ಆ ಸಂದರ್ಭದಲ್ಲಿ ನಿಮ್ನ ತರಗತಿಯವರೊಬರನ್ನು ದಕ್ಷರಾದವರನ್ನು promote ಮಾಡಿ ಅವರಿಗೆ ಅವಕಾಶ ಕೊಡಬೇಕೆಂದು ಹೇಳುತ್ತೇನೆ.

ಇನ್ನೊಂದು ವಿಷಯವೇನೆಂದರೆ, ಪೋಲೀಸ್ ಇಲಾಖೆಯಲ್ಲಿ ಕೆಲವುವೇಳೆ ಮೆಡಲುಗಳನ್ನು ಕೊಡುವ ಸಂದರ್ಭ ಇರುತ್ತದೆ. ಆ ಸಂದರ್ಭದಲ್ಲಿ ಯಾರಿಗೆ ಶಿಫಾರಸುಮಾಡಿ ಕೊಡಬೇಕೆಂದು ಕಳುಹಿಸುತ್ತಾರೋ ಅವರಿಗೆ ಮಾತ್ರ ಮೆಡಲುಗಳು ಸಿಕ್ಕುತ್ತವೆ. ಈ ವಿಷಯಗಳಲ್ಲಿ ಡಿಪ್ರೆಸ್ಡ್ ಕ್ಲಾಸ್‌ನವರಿಗೆ ಅಷ್ಟು ಉತ್ತೇಜನ ದೊರೆಯುತ್ತಿಲ್ಲ. ಸಾಮಾನ್ಯವಾಗಿ ಯಾವುದೇ ಕೇಸಿನಲ್ಲೂ ದಫೇದಾರರುಗಳು, ಸಬ್ ಇನ್ಸ್‌ಪೆಕ್ಟರು, ಇನ್ಸ್‌ಪೆಕ್ಟರು ಎಲ್ಲರೂ ಸೇರಿ ಕೆಲಸಮಾಡಿರುತ್ತಾರೆ. ಅಂಥಾದ್ದರಲ್ಲಿ ಮಿಕ್ಕವರೆಲ್ಲರನ್ನೂ ಬಿಟ್ಟು ಇನ್ಸ್‌ಪೆಕ್ಟರೊಬ್ಬರಿಗೇ ಕೊಟ್ಟರೆ ಮಿಕ್ಕವರಿಗೆಲ್ಲಾ ತುಂಬ ನಿರುತ್ಸಾಹವಾಗುತ್ತದೆ. ನಿಮ್ನ ತರಗತಿಯವರು ಎಂದು ಹೇಳಿ ಮಿಕ್ಕವರಿಗೆ ಕೊಡಲಿಲ್ಲವೋ ಎಂಬ ವ್ಯಸನವೂ ನಿರಾಶೆಯೂ ಅವರಿಗುಂಟಾಗುತ್ತದೆ. ಆದ್ದರಿಂದ meritorious service medal ಗಳನ್ನು ಕೊಡುವುದರಲ್ಲೂ ಅವರಿಗೂ ಉತ್ತೇಜನಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಉದಾಹರಣೆಗೆ ಹೇಳುವುದಾದರೆ, ಚಿತ್ರದುರ್ಗದ ಗಲಭೆಯಲ್ಲಿ ತಿಮ್ಮರಾಜೇ ಅರಸಿನವರಿಗೆ ಒಂದು ಮೆಡಲ್ ಕೊಟ್ಟರು. ಅವರು ಅರ್ಹರು; ಅವರಿಗೆ ಕೊಟ್ಟಿದ್ದು ಸಂತೋಷ. ಹಾಗೆಯೇ ಅವರೊಡನೆಯೇ ಕೆಲಸಮಾಡಿದ ಇನ್ನೂ ಅನೇಕ ಆಫೀಸರುಗಳ ಪಟ್ಟಿಯಿದೆ. ಅವರುಗಳಿಗೂ ಈ ರೀತಿ ಒಂದು ಮೆಡಲ್ ಕೊಟ್ಟಿದ್ದರೆ ಅವರಿಗೂ ಉತ್ತೇಜನ ಕೊಟ್ಟಂತಾಗುತ್ತಿತ್ತು. ಇದೊಂದು ಕೆಲಸದಲ್ಲಲ್ಲ. ಇನ್ನೂ ಅನೇಕಕಡೆ ಧೈರ್ಯದಿಂದ ಕೆಲಸಮಾಡಿರುವ ಸಂದರ್ಭಗಳಿವೆ. ಅವುಗಳನ್ನೂ ಪರಿಗಣನೆಗೆ ತೆಗೆದುಕೊಂಡು ಸಹಾಯಮಾಡಿದರೆ ಅವರಿಗೆ ಉತ್ತೇಜಕವಾಗಿರುತ್ತದೆ.

ಈ ಪ್ರಕಾರ ಡಿಪ್ರೆಸ್ಡ್ ಕ್ಲಾಸ್‌ನವರಿಗೆ ಪ್ರಮೋಷನ್ ಕೊಡುವುದರಲ್ಲೂ, ಕೆಲಸಗಳನ್ನು ಕೊಡುವುದರಲ್ಲೂ ಉತ್ತೇಜನ ಕೊಡುವುದಲ್ಲದೆ, ಪ್ರೊಬೇಷನರುಗಳನ್ನು ತೆಗೆದುಕೊಳ್ಳುವುದರಲ್ಲಿ ನಿಮ್ನ ತರಗತಿಯವರಿಗೆ ಹೆಚ್ಚಿಗೆ ಪ್ರಾತಿನಿಧ್ಯವಿರುವಂತೆ ಮಾಡಬೇಕು. ಈಗ ಸದ್ಯದಲ್ಲೇ ಸರ್ಕಾರದವರು ಪ್ರೊಬೇಷನರುಗಳನ್ನು ತೆಗೆದುಕೊಳ್ಳಬೇಕೆಂದು ನಿರ್ಣಯಿಸಿರುವಂತೆ ಕಾಣುತ್ತದೆ. ಈ ಸಂದರ್ಭದಲ್ಲಿ ಬಹಳಮಟ್ಟಿಗೆ ಹಳ್ಳಿಗಳಿಂದ ಬಂದವರಾಗಿ, ಹಳ್ಳಿಗಳವರ ಕಷ್ಟ ಸುಖಗಳನ್ನು ಅನುಭವಿಸಿರುವ ನಿಮ್ನ ತರಗತಿಯ ಉಮೇದುವಾರರಿಗೆ ಅವಕಾಶ ಕೊಡಬೇಕಾದದ್ದು ಯುಕ್ತ. ಇದರಿಂದ ಹಳ್ಳಿಗಳ ಕೆಲಸವನ್ನು ಅವರು ದಕ್ಷತೆಯಿಂದ ಮಾಡಬಲ್ಲವರಾಗಿರುತ್ತಾರಲ್ಲದೆ, ಡಿಪ್ರೆಸ್ಡ್ ಕ್ಲಾಸಿನವರಿಗೆ ಹೆಚ್ಚಿಗೆ ಪ್ರಾತಿನಿಧ್ಯವನ್ನೂ ಕೊಟ್ಟಹಾಗಾಗುತ್ತದೆ. I request the Government to encourage more.

Increased facilities to Non-gazetted Staff.

ಶ್ರೀ ಬಿ. ರಾಚಯ್ಯ (ಯಳಂದೂರು—ಪೆಡ್ಯೂಲ್ಡ್ ಕ್ಯಾಸ್ಟ್).—ಸ್ವಾಮಿ, ಪೋಲೀಸ್ ಇಲಾಖೆಯಲ್ಲಿ ಕೆಲಸಮಾಡತಕ್ಕ ನಾನ್ ಗೆಜೆಟೆಡ್ ಸಿಬ್ಬಂದಿಗಳಿಗೆ ಹೆಚ್ಚಿನ ರೀತಿಯಲ್ಲಿ ಸೌಲಭ್ಯಗಳನ್ನು ಒದಗಿಸಿಕೊಡಬೇಕು ಮತ್ತು ಸಾಧ್ಯವಾದಷ್ಟುಮಟ್ಟಿಗೂ ಕಾನ್ಸ್‌ಟೇಬಲ್‌ಗಳು, ಸಬ್ ಇನ್ಸ್‌ಪೆಕ್ಟರುಗಳು ಜಮೇದಾರರು ಇಂಥವರಿಗೆ ಸಂಬಳವನ್ನು ಸ್ವಲ್ಪಮಟ್ಟಿಗಾದರೂ ಜಾಸ್ತಿ ಮಾಡಬೇಕೆಂದು ಹೇಳಿ ನಾನು ಈ ಖೋತಾ ನಿರ್ಣಯವನ್ನು ತಂದಿದ್ದೇನೆ. ಈಗ ಸರ್ಕಾರದವರು ಕೊಡುತ್ತಿರತಕ್ಕ ಸಂಬಳವನ್ನು ನೋಡಿದರೆ ಬಹಳ ಶೋಚನೀಯವಾಗಿದೆ. ಒಂದು ತಾಲ್ಲೂಕಿನಲ್ಲಿ ಪೋಲೀಸಿಗೆ ಮುಖ್ಯಾಧಿಕಾರಿಗಳು ಸಬ್‌ಇನ್ಸ್‌ಪೆಕ್ಟರು. ಯಾವ ಕೇಸಿನಲ್ಲೂ investigating ಆಫೀಸರೇ ಅವರು. ಸಾರ್ವಜನಿಕರೊಡನೆ ನಿಕಟ ಸಂಪರ್ಕವಿರುವುದೂ ಅವರಿಗೇ. ಅವರು ನಿಷ್ಪೃಹತೆಯಿಂದ ದಕ್ಷತೆಯಿಂದ ದುಡಿಯಬೇಕಾದರೆ ಅವರಿಗೆ ತೃಪ್ತಿಕರವಾದ ಸಂಬಳಸಾರಿಗೆಗಳನ್ನು ಕೊಡಬೇಕಾದದ್ದು ನ್ಯಾಯವಾಗಿದೆ. ಈಚೆಗೆ

1950ನೆಯ ಇಸವಿಯಲ್ಲಿ ಅವರಿಗೊಂದು time scale ನ್ನು ಗೊತ್ತುಮಾಡಿ ಸಾದರುಮಾಡಿರುವಂತೆ ಕೇಳಿದ್ದೇನೆ. ಆದರೂ, ಕಾರಣಾಂತರದಿಂದ ಈ ಹೊತ್ತಿನ ವರೆಗೂ ಆ time scale ನ್ನು ಜಾರಿಗೆ ಕೊಟ್ಟಿಲ್ಲವೆಂದು ಕೇಳಿದ್ದೇನೆ. ಪ್ರತಿಸಾರಿಯೂ ಈ ಪ್ರಶ್ನೆ ಸಭೆಯ ಮುಂದೆ ಬಂದಾಗ್ಗೆ ಸರ್ಕಾರದವರು ತಾವು ನಾರ್ಗೆಜೆಟೆಡ್ ನೌಕರರ ವಿಷಯದಲ್ಲಿ ಬಹಳ ಸಹಾನುಭೂತಿಯುಳ್ಳವರಾಗಿದ್ದೇವೆಂದು ಹೇಳುತ್ತಾರೆ. ಅದರಲ್ಲೂ ಈ ಸಾರಿ ಮಾನ್ಯ ಮುಖ್ಯ ಮಂತ್ರಿಗಳು ಬಡ್ಜೆಟ್ ಭಾಷಣವನ್ನು ಮಾಡುವಾಗ ಹಣಕಾಸಿನ ಪರಿಸ್ಥಿತಿಯನ್ನು ಮನಸ್ಸಿನಲ್ಲಿಟ್ಟುಕೊಂಡು ಸಾಧ್ಯವಾದಮಟ್ಟಿಗೂ ಇವರುಗಳ ಸ್ಥಿತಿಗತಿಗಳನ್ನು ಉತ್ತಮಪಡಿಸುವುದಾಗಿ ಹೇಳಿದ್ದಾರೆ. ಇದು ಶ್ಲಾಘನೀಯವಾದ ವಿಚಾರ. ಇದರಂತೆ ಎಲ್ಲಾ ಇಲಾಖೆಯಲ್ಲಿರುವ ನಾರ್ಗೆಜೆಟೆಡ್ ನೌಕರರೆಲ್ಲರಿಗೂ ಸಂಬಳ ಜಾಸ್ತಿಮಾಡಬೇಕೆಂದರೆ ಸರ್ಕಾರಕ್ಕೆ ಬಹಳ ಹೊರೆ ಬೀಳುತ್ತದೆಂದು ಒಪ್ಪುತ್ತೇನೆ. ಎಲ್ಲ ಇಲಾಖೆಗಳಿಗಿಂತಲೂ ಹೆಚ್ಚಿಗೆ ದಕ್ಷತೆಯನ್ನು, ನಿಸ್ಪೃಹತೆಯನ್ನು ಅಪೇಕ್ಷಿಸುವುದು ಪೋಲೀಸ್ ಇಲಾಖೆಯಲ್ಲಿ. ಏಕೆಂದರೆ, ದೇಶದಲ್ಲಿ ತಕ್ಕೀರುಗಳು ನಡೆಯದಂತೆ ನೋಡಿಕೊಂಡು, ಕೇಸುಗಳನ್ನು ಸರಿಯಾಗಿ investigate ಮಾಡಿ ಎಲ್ಲ ಜನರ ಯೋಗಕ್ಷೇಮವನ್ನೂ ನೋಡಿಕೊಳ್ಳತಕ್ಕ ಇಲಾಖೆ ಅದು. ಇಂಥ ಜವಾಬ್ದಾರಿಯನ್ನು ಹೊತ್ತಂಥ ಈ ಇಲಾಖೆಯಲ್ಲಿ ಲಂಚರುಷುವತ್ತುಗಳಿಗೆ ಅವಕಾಶ ಬಹಳ ಪಾಗಿರುತ್ತದೆ. ಅಂಥದಕ್ಕೆ ಅವಕಾಶವಿಲ್ಲದಂತೆ ಸಾಧ್ಯವಾದಷ್ಟು ಮಟ್ಟಿಗೆ ತೃಪ್ತಿಕರವಾದ ಸಂಬಳ ಸಾರಿಗೆಗಳನ್ನು ಅವರಿಗೆ ಕೊಡಬೇಕಾದದ್ದು ಅವಶ್ಯಕ. ಒಬ್ಬ ಕಾನ್ಸ್ಟೇಬಲ್ಲಿಗೆ 22 ರೂಪಾಯಿಗಳ ಸಂಬಳ ಕೊಡುತ್ತಿದ್ದೀರಿ!! ಇದರಿಂದ ಅವನು ಹೇಗೆತಾನೆ ಜೀವನ ನಡೆಸಿಯಾನು? ಒಂದು overload case ಸಿಕ್ಕಿದರೆ, ಅವನ ಈ ಜೀವನದ ಕಷ್ಟ ದೆಶೆಯಲ್ಲಿ ಹೇಗೆ ನಿಸ್ಪೃಹತೆಯಿಂದ ಇದ್ದಾನು?

ದಕ್ಷತೆಯಿಂದ ಕೆಲಸ ಮಾಡತಕ್ಕಂಥ ಪೋಲೀಸ್ ಕಾನ್ಸ್ಟೇಬಲ್‌ಗಳ ಬಗ್ಗೆ ಉದಾಹರಣೆಗೆ ಹೇಳುವುದಾದರೆ, ಈ ಸಂದರ್ಭದಲ್ಲಿ ನಮ್ಮ ಮೈಸೂರಿನಲ್ಲಿ ಜಮಾದಾರ್ ಕುಟ್ಟಪ್ಪನೆಂಬತಕ್ಕವರೊಬ್ಬರಿದ್ದಾರೆ. ಇವರು ಯಾರ ದಾಕ್ಷಿಣ್ಯಕ್ಕೂ ಒಳಗಾಗದಂತೆ ದುಡಿಯುತಕ್ಕಂಥ ವ್ಯಕ್ತಿ. ಇಂಥವರಿಗೆ . . . .

Mr. SPEAKER.—I do not think the Hon'ble Member can recommend a particular case. I do not think it is necessary.

ಶ್ರೀ ಬಿ. ರಾಚಯ್ಯ.—ಹೀಗೆ ದಕ್ಷತೆಯಿಂದ ಕೆಲಸ ಮಾಡಿ ದುಡಿಯತಕ್ಕವರಿದ್ದಾರೆ ಎಂದು . . . .

Mr. SPEAKER.— You need not name the person.

ಶ್ರೀ ಬಿ. ರಾಚಯ್ಯ.—ಹೀಗೆ ದಕ್ಷತೆಯಿಂದ ದುಡಿಯುತಕ್ಕಂಥ ಜನರು ಇದ್ದಾರೆ. ಇಂಥವರಿಗೆ ಸರ್ಕಾರದವರಿಂದ ಸಾಕಷ್ಟು ಸಂಬಳ ಸಾರಿಗೆ ದೊರೆಯುತ್ತಿಲ್ಲ. ಈ ಒಬ್ಬ ನೌಕರರಿಗೆ ವಾಸದ ಗೃಹಗಳನ್ನು ಕಟ್ಟಿಸಿಕೊಡಲು ಸರ್ಕಾರದವರು 75 ಸಾವಿರ ರೂಪಾಯಿಗಳನ್ನು ಒದಗಿಸಿದ್ದಾರೆ. ಆದರೆ ಈಗ ಅನೇಕ ತಾಲ್ಲೂಕು ಹೆಡ್ ಕ್ವಾರ್ಟರುಗಳಲ್ಲಿ ಮತ್ತು ಔಟ್‌ಪೋಸ್ಟ್‌ಗಳಿರುವ ಕಡೆ ಈ ಪೋಲೀಸ್ ಕಾನ್ಸ್ಟೇಬಲ್‌ಗಳಿಗೆ ಸಂಬಳ ಸಾರಿಗೆಗಳು ಕಡಮೆ ಇರುವುದರಿಂದ ಇವರಿಗೆ ವಸತಿ ಸೌಕರ್ಯಗಳನ್ನಾದರೂ ಕಲ್ಪಿಸಿ ಕೊಡಬೇಕು. ಈಗ ಅನೇಕ ಸ್ಥಳಗಳಲ್ಲಿ ವಸತಿ ಸೌಕರ್ಯಗಳಿರುವುದಿಲ್ಲ. ಈ ದಿವಸ ಯಳಂದೂರ್ ತಾಲ್ಲೂಕು ಹೆಡ್‌ಕ್ವಾರ್ಟರ್ಸಿನಲ್ಲಿ ಕೂಡ ವಾಸಕ್ಕೆ ಒಂದು ಮನೆ ಸಿಕ್ಕುತ್ತಿಲ್ಲ. ಅಲ್ಲಿ 7 ಸಾವಿರ ರೂಪಾಯಿಗಳ ಅಂದಾಜಿನಲ್ಲಿ ಮನೆಗಳನ್ನು ಕಟ್ಟಿಸಲು ಅಂದಾಜು ತಯಾರಾಗಿದೆ; ಆದರೆ ಅದು ಇನ್ನೂ ಮಂಜೂರಾಗಿಲ್ಲ. ಸರ್ಕಾರದವರಿಗೆ ಈ ಕಡಮೆ ಸಂಬಳದ ನೌಕರರುಗಳಿಗೆ ತಕ್ಷಣಕ್ಕೆ ಸಂಬಳ ಸಾರಿಗೆಗಳನ್ನು ಹೆಚ್ಚು ಮಾಡಲು ಬಹಳ ಕಷ್ಟವೆಂದು ಹೇಳುತ್ತಿರುವುದರಿಂದ ಈ ವಸತಿ ಸೌಕರ್ಯಗಳು ಕಮ್ಮಿ ಇರುವಂಥ ತಾಲ್ಲೂಕು ಹೆಡ್‌ಕ್ವಾರ್ಟರ್ಸಿನಲ್ಲೂ ಮತ್ತು ಔಟ್‌ಪೋಸ್ಟ್‌ಗಳು ಇರುವ ಕಡೆಯಲ್ಲೂ ವಾಸದ ಮನೆಗಳನ್ನು ಕಟ್ಟಿಸುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ಪೋಲೀಸಿನವರಿಗೆ ಹಿಂದೆ ಕೊಡಲಾಗುತ್ತಿದ್ದಂಥ ಡ್ರೆಸ್ ಅಲೋಯೆನ್ಸನ್ನೂ ಸಹ ಕೊಡಬೇಕೆಂದು ಹೇಳುತ್ತೇನೆ.

Enhancement of Constable's Pay.

* **ಶ್ರೀ ಪಿ. ಆರ್. ರಾಮಯ್ಯ** (ಬಸವನಗುಡಿ).—ಸ್ವಾಮಿ, ನಾನು ಸೂಚಿಸಿರತಕ್ಕ ಪ್ರೋತ್ಸಾಹ ಸೂಚನೆ ಪೋಲೀಸ್ ಕಾನ್ಸ್ಟೇಬಲ್‌ಗಳಿಗೆ ಸಂಬಳ ಸಾರಿಗೆಗಳನ್ನು ಹೆಚ್ಚಿಸುವ ವಿಷಯಕ್ಕೆ ಸಂಬಂಧಪಟ್ಟದ್ದಾಗಿದೆ; ಅದನ್ನು ಈಗ ಈ ಸಭೆಯು ಪರ್ಯಾಲೋಚನೆ ಮಾಡಬೇಕಾಗಿದೆ. ನಮ್ಮ ಸಂಸ್ಥಾನದಲ್ಲಿ ಈಗ ಸುಮಾರು 9-10 ಸಾವಿರ ಪೋಲೀಸ್ ಕಾನ್ಸ್ಟೇಬಲ್‌ಗಳಿದ್ದಾರೆ. ಅವರಿಗೆ ಈಗ ಕೊಡುತ್ತಿರುವ ಸಂಬಳ 22 ರೂಪಾಯಿಗಳಿಂದ ಪ್ರಾರಂಭವಾಗಿ 32 ರೂಪಾಯಿಗಳಿಗೆ ಕೂನೆಯಾಗುತ್ತದೆ. ಆದರೆ ಅವರು ಮಾಡತಕ್ಕ ಕೆಲಸ ಬಹಳ ದೊಡ್ಡ ಕೆಲಸ. ಅದು ನಮ್ಮ ದೇಶವನ್ನು ನಾಗರಿಕರ ದೇಶವನ್ನಾಗಿಡತಕ್ಕಂಥ ಕೆಲಸ. ಒಂದು ದೇಶದ ನಾಗರಿಕತೆಯನ್ನು ಅಳೆಯಬೇಕಾದರೆ ಆ ದೇಶದಲ್ಲಿರತಕ್ಕ ಪೋಲೀಸ್ ಕಾನ್ಸ್ಟೇಬಲ್‌ಗಳ ಮಟ್ಟ ಯಾವರೀತಿ ಇದೆ ಅನ್ನುವುದರಿಂದ ಅದನ್ನು ತಿಳಿದುಕೊಳ್ಳಬಹುದು ಎಂದು ಹೇಳಿದ್ದಾರೆ. ಆದರೆ ಇಷ್ಟು ಕಡಮೆ ದರ್ಜೆಯ ಸಂಬಳದವರಿಂದ ಇಷ್ಟು ಉನ್ನತವಾದಂಥ ಕೆಲಸವನ್ನು ನಿರೀಕ್ಷಿಸಿರುವುದು ಸಾಧುವಾದುದಲ್ಲ. ಆದರೆ ಈ ದಿವಸ ಅವರಿಗೆ ದೊರೆಯುತ್ತಿರುವ ಸಂಬಳ ಸಾರಿಗೆಗಳು ಅವರ ಜೀವನಕ್ಕೆ ಸಾಲದೆ ಅವರು ಬೇರೆ ರೀತಿಗಳಲ್ಲಿ ಸಂಪಾದನೆಯನ್ನು ಹೆಚ್ಚಿಸಿಕೊಳ್ಳುತ್ತಿರುವುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಇದನ್ನು ನೋಡಿದರೆ ನಾವೇ ಒಂದು ರೀತಿಯಲ್ಲಿ ಅವರಿಗೆ ಪ್ರೋತ್ಸಾಹ ಕೊಟ್ಟಿದ್ದೇವೋ ಏನೋ ಅನ್ನುವಹಾಗಿದೆ. ಈ ಪೋಲೀಸಿನವರಿಗೆ ಬೆಂಗಳೂರಿನಲ್ಲಿ ಅವರಿಗೆ ಬರತಕ್ಕ ಈ 22 ರೂಪಾಯಿಗಳ ಅಥವಾ 32 ರೂಪಾಯಿಗಳ ಸಂಬಳ ಜೀವನ ಕ್ಕಾಗುವುದಿಲ್ಲ. ಅವರು ತಮ್ಮ ಜೀವನನ್ನು ಬಹಳ ಕಷ್ಟದಿಂದ ನಡೆಸುತ್ತಿದ್ದಾರೆ. ಈ ವಿಚಾರಗಳನ್ನೆಲ್ಲಾ ನಾವು ತೆರೆದ ಕಣ್ಣಿನಿಂದ ಪ್ರತಕ್ಕೆ ನೋಡಬಾರದು ಎಂದು ಕೇಳುತ್ತೇನೆ? ಅವರು ಈ ದಿವಸ ನಡೆಸುತ್ತಿರುವಂಥ ಅಕ್ರಮ ನಡವಳಿಕೆಗಳನ್ನು ತಪ್ಪಿಸಬೇಕಾಗಿದ್ದರೆ ಅವರಿಗೆ ನಾವು ಹೆಚ್ಚಿನ ಸಂಬಳಸಾರಿಗೆಗಳನ್ನು ಕೊಡಬೇಕು. ಆದರೆ ಈ ಪೋಲೀಸ್ ಇಲಾಖೆ ಬಹಳ ದೊಡ್ಡದು, ಖರ್ಚು ಬಹಳ ಬರುತ್ತದೆ ಎಂದು ತಾವು ಹೇಳಬಹುದು. ಅದಕ್ಕೆ ನಾನು ಸೂಚಿಸುವುದೇನೆಂದರೆ: ಈಗ ನಮ್ಮಲ್ಲಿ ಸುಮಾರು 10 ಸಾವಿರ ಪೋಲೀಸ್ ಸಿಬ್ಬಂದಿಯಿದೆ. ಇಷ್ಟೂ ನಮಗೆ ಅವಶ್ಯಕವೇ

(ಶ್ರೀ ಪಿ. ಆರ್. ರಾಮಯ್ಯ).

ಅಥವಾ ಅಲ್ಲವೇ ಅಥವಾ ನಮಗಿನ್ನೂ ಪಾಸ್ತಿ ಸಿಬ್ಬಂದಿ ಬೇಕಾಗಿದೆಯೇ ಅನ್ನುವುದನ್ನು ಪರಿಶೀಲಿಸಿ ನೋಡಬೇಕಾಗಿದೆ. ನಮ್ಮ ಸಂಸ್ಥಾನಕ್ಕೆ 6 ಸಾವಿರ ಪೋಲೀಸ್ ಶಿಬ್ಬಂದಿ ಆದರೆ ಸಾಕು ಎಂದು ಗೊತ್ತಾಗುತ್ತದೆ. ಪೋಲೀಸ್ ಸಿಬ್ಬಂದಿ ಅಂದರೆ ಪೋಲೀಸ್ ಕಾನ್ಸ್ಟೇಬಲ್‌ಗಳ ವಿಚಾರ ಹೇಳುತ್ತಿದ್ದೇನೆ. ಇಷ್ಟು ಜನರನ್ನಿಟ್ಟುಕೊಂಡು ಅವರಿಗೇನೆ ಹೆಚ್ಚಿನ ಸಂಬಳ ಸಾರಿಗೆಗಳನ್ನು ಕೊಟ್ಟು ನಾವು ಅವರಿಂದ ಉತ್ತಮ ದರ್ಜೆಯ ಕೆಲಸವನ್ನು ಪಡೆಯತಕ್ಕದ್ದು ಒಳ್ಳೆಯದೆಂದು ನನಗೆನ್ನಿಸುತ್ತಿದೆ. ಹೀಗೆ ಮಾಡಿದರೆ ಬಹಳ ಅನುಕೂಲವಾಗುತ್ತದೆ. ಆದರೆ ಈ ವಿಚಾರವಾಗಿ ನಾನಿನ್ನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಇದು ಬಹಳ ಪ್ರಾಮುಖ್ಯವಾದ ವಿಷಯ. ಈ ಹಿಂದೆ ಕೂಡ ಈ ವಿಷಯ ಇದೇ ಸಭೆಯ ಮುಂದೆ ಎಷ್ಟೋ ಸಲ ಚರ್ಚೆಗೆ ಬಂದಿರುತ್ತದೆ. ಆದರೆ ಈಗಲಾದರೂ ಸರ್ಕಾರದವರು ಈ ಪೋಲೀಸ್ ಕಾನ್ಸ್ಟೇಬಲ್‌ಗಳಿಗೆ ಹೆಚ್ಚಿನ ಸಹಾಯ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

Reorganization of Police Department.

* Sri S. SRINIVASA IYENGAR (T-Narasipur).—Mr. Speaker, Sir, I wish to place a few points about the organization of the Police Department as it is in the Mysore State. The Police Department is following an Act which was enacted somewhere in 1908 or so. It is an old Act. The Act needs revision. That is the first point.

The second point is, our system of division of the State is not quite suitable. It is very necessary to revise it. Bellary District is being run with 5 Inspectors, whereas in Mysore we have nearly 10-11 Inspectors per District. I think we have to introduce some system by which we could enlarge the scope or the work that would come under the control of the Inspector and make him a responsible officer. So far as the inspectorate is concerned, I think we have to reorganize our department. The most important officer is the Sub-Inspector and he is the investigating officer. Most of the cases are being investigated by the Sub-Inspector and it is very necessary that you should make him a more responsible officer and make the Inspector really an Inspector as the word implies. Under the present Act, the Assistant Superintendent of Police and the Deputy Inspector General of Police have no powers. The Assistant Superintendent of Police exercises such of those powers as are delegated by the District Superintendent of Police and therefore under the Statute or under the Police Act he has no independent power or even an independent place. Similarly, the same thing applies to the D.I.G. Instead of having officers who have no specific duty under the Act, rather dispense with them or amend the law in such a manner as to give them substantive power. I consider it very important. We are spending today on this Department more than what we are spending on medical services. If I may quote the figures, for the year 1953-54 the accounts show that for the Medical Department we have spent Rs. 90.14 lakhs, whereas for the Police Department Rs. 112.56 lakhs. Similarly, in 1955-56 we have provided more for the Police Department than for the Medical Department. I think we have to cut it down a little. It is possible.

I have noticed that the Fire Brigade Services are brought under the Police. We could profitably hand it over to the Corporation or the Insurance Department. We are spending Rs. 2 to 2½ lakhs on Fire Brigade. Get it reduced. By doing so we shall certainly entrust it to a department which looks after their service much better, say the Corporation.

Sri H. SIDDAVEERAPPA.—But the other department will have to spend.

Sri S. SRINIVASA IYENGAR.—The Corporation will spend out of their funds. So far as this department is concerned, we can take it out if it is practicable.

The other thing is about the Railway Police, for which we are spending Rs. 3,81,000 and we are getting Rs. 3,10,000 as contribution from the Centre. We are spending Rs. 70,000 over and above what is being got from the Centre. We can as well demand the full quota from the Centre for the maintenance of the Railway Police. Further, the Railway Police are not brought under the Central Services. They are getting the same salary as they were getting under the Mysore State Service. I think they must be brought under the Central scale of salary and the Government of India

entrusted with the payment of salaries to them.

As I have already said, reorganisation is very necessary. It is because we have one district in the Mysore State which is having officers with increased scales of salary. For instance, the constable in Bellary District is getting a scale of salary of Rs. 30 to 40, whereas the constable in Mysore is getting Rs. 20 to 22. We have to upgrade the position of the constable in Mysore to that of the constable in Bellary District. As regards the Inspectorate, I think the Inspector in Bellary District is getting a scale of Rs. 175-275. I think the Inspector in Mysore halts at Rs. 200. Similarly, in the I.P.S. cadre for the same work done, an officer who was getting a salary in the grade of Rs. 200 to 300, is getting more than what he was getting previously. For the same work we are paying more. I therefore submit that it is very necessary that we reorganise the whole Department and amend the Act in such a manner as to be suitable for the present day.

Enhanced Scales of Pay to Constables and Daffedars.

ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಸ್ವಾಮಿ, ನಮ್ಮ ದೇಶದಲ್ಲಿ ಈ ಪೋಲೀಸ್ ಕಾನ್ಸ್ಟೇಬಲ್‌ಗಳಿಗೆ ಕೊಡತಕ್ಕ ಸಂಬಳ ಬಹಳ ಕಡಮೆ ಎಂದು ನನಗೆ ಎನ್ನಿಸುತ್ತಿದೆ. ಮುಖ್ಯವಾಗಿ ಈಗಾಗಲೇ ಮಾತನಾಡಿರತಕ್ಕ ಮಾನ್ಯ ಸದಸ್ಯರು ಅನೇಕ ವಿಚಾರಗಳನ್ನು ತಿಳಿಸಿರುತ್ತಾರೆ. ಈ ಪೋಲೀಸಿನವರು ನಮ್ಮೆಲ್ಲರ ಮಾನ, ಪ್ರಾಣ, ಆಸ್ತಿಗಳನ್ನು ಕಾಪಾಡತಕ್ಕವರು. ಆದುದರಿಂದ ಇವರಿಗೆ ಸರಿಯಾಗಿ ಸಂಬಳ ಸಾರಿಗೆಗಳನ್ನು ಕೊಟ್ಟು, ಅವರುಗಳನ್ನು ಸರಿಯಾಗಿ ರೆಕ್ರುಯಿಟ್ ಮಾಡಿಕೊಂಡು, ಅವರು ಈಗಿನ ಕಾಲಕ್ಕೆ ಸರಿಯಾಗಿ ವರ್ತಿಸುವಂತೆ, ನಾಗರಿಕ ರೀತಿಯಿಂದ ಅವರು ಹೆಚ್ಚು ಆಸಕ್ತಿ ವಹಿಸಿ ದಕ್ಷತೆಯಿಂದ ಕೆಲಸಮಾಡುವಂತೆ ಮಾಡಬೇಕಾದುದು ತೀರ ಆವಶ್ಯಕ. ಈ ಹಿಂದೆ ಈ ಪೋಲೀಸ್ ಇಲಾಖೆಗೆ ಸುಮಾರು 23-24 ಲಕ್ಷ ರೂಪಾಯಿಗಳು ಖರ್ಚಾಗುತ್ತಿದ್ದುವು. ಈ ದಿವಸ ಅದೇ ಬಾಬಿಗಾಗಿ 123 ಲಕ್ಷ ರೂಪಾಯಿಗಳು ಖರ್ಚಾಗುತ್ತಿವೆ. ಅಂದರೆ ಈ ದಿವಸ ಈ ಪೋಲೀಸ್ ಖಾತೆಗೆ ನಾವು ಒಂದಕ್ಕೆ ಐದರಷ್ಟನ್ನು ಹೆಚ್ಚಿಗೆ ಖರ್ಚುಮಾಡುತ್ತಿದ್ದೇವೆ. ಇಷ್ಟೊಂದು ಹೆಚ್ಚಿಗೆ ಧನವನ್ನು ನಾವು ಈ ದಿವಸ ಖರ್ಚುಮಾಡುತ್ತಿದ್ದರೂ ಕೂಡ ಈ ಪೋಲೀಸ್ ಕಾನ್ಸ್ಟೇಬಲ್‌ಗಳಿಗೂ ಮತ್ತು ದಫೇದಾರರುಗಳಿಗೂ ಸಂಬಳವೇನೂ ಜಾಸ್ತಿಯಾಗಿಲ್ಲ ಅನ್ನುವುದು ಈ ಸಭೆಯ ಸದಸ್ಯರಿಗೆಲ್ಲಾ ಗೊತ್ತಿರತಕ್ಕ ವಿಚಾರವೇ ಆಗಿದೆ. ಸರ್ಕಾರದವರು ಈ ಇಲಾಖೆಗೆ ಸಂಬಂಧಪಟ್ಟ ಡಿಮ್ಯಾಂಡನ್ನು ಈ ಸಭೆಯ ಮುಂದೆ ತಂದಾಗ ನಾವು ಉದಾರವಾಗಿ ಈ ಬಾಬಿಗೆ ಹೆಚ್ಚು ಹಣವನ್ನು ಖರ್ಚುಮಾಡಲು ಅನುಮತಿ ಕೊಟ್ಟೆವು. ಹಾಗೆ ಅನುಮತಿ ಕೊಡುವಾಗ ಸರ್ಕಾರದವರು ಈ ಬಡನೌಕರರ ಸ್ಥಿತಿಗಳನ್ನು ಉತ್ತಮಗೊಳಿಸುತ್ತಾರೆ, ಇವರು ತಮ್ಮ ಸಂಸಾರವನ್ನು ಸರಿಯಾಗಿ ನಿರ್ವಹಣೆ ಮಾಡಿಕೊಂಡು ಹೋಗತಕ್ಕ ರೀತಿಯಲ್ಲಿ, ಅವರಿಗೆ ಅವರ ಮಕ್ಕಳು ಮರಿಗಳನ್ನು ವಿದ್ಯಾವಂತರನ್ನಾಗಿ ಮಾಡಲು ಅನುಕೂಲವಾಗತಕ್ಕ ರೀತಿಯಲ್ಲಿ ಒಂದು ಸುವ್ಯವಸ್ಥಿತವಾದ ಏರ್ಪಾಡನ್ನು ಮಾಡುತ್ತಾರೆಂದು ನಾವು ತಿಳಿದುಕೊಂಡಿದ್ದೆವು, ಆದರೆ ಈ ದಿವಸ ಸರ್ಕಾರದವರು ಮಾಡಿರತಕ್ಕದ್ದನ್ನು ನೋಡಿದರೆ "ರೊಟ್ಟಿ ಕೇಳಿದರೆ ಕಲ್ಲು ಕೊಟ್ಟರೆಂದು" ಹೇಳುವಹಾಗೆ ಮಾಡಿದ್ದಾರೆ. ದೊಡ್ಡ ದೊಡ್ಡ ನೌಕರರಿಗಾದರೆ ಯಾವ ವಿತರಣೆಯೂ ಇಲ್ಲ ಯಾವ ಅಡ್ಡಿಯೂ ಇಲ್ಲ. ಅವರಿಗೆ ಸಂಬಳ ಸಾರಿಗೆಗಳನ್ನು ಹೆಚ್ಚಿಸಿಕೊಂಡು ಹೋಗುತ್ತಿದ್ದಾರೆ. ಹೀಗೆ ಯಾರಿಗೆ ದೊಡ್ಡ ದೊಡ್ಡ ಸಂಬಳ ಸಾರಿಗೆಗಳಿವೆಯೋ ಅವರಿಗೇ ಸಂಬಳ ಸಾರಿಗೆಗಳನ್ನು ಜಾಸ್ತಿಮಾಡುತ್ತ, ಕಮ್ಮಿ ಸಂಬಳದವರಿಗೆ ಅದನ್ನು ತಗ್ಗಿಸುತ್ತ ಹೋಗುತ್ತಿದ್ದರೆ ಯಾವ ನೌಕರನಿಗೆ ಆಗಲಿ ಸರ್ಕಾರದ ಕೆಲಸಕಾರ್ಯಗಳನ್ನು ಮಾಡಲು ಇಷ್ಟವಿರುವುದಿಲ್ಲ. ಈ ದಿವಸ ನಮ್ಮ ಸರ್ಕಾರದಲ್ಲಿ ಈ ವ್ಯವಹಾರಗಳು ನಿಧಾನವಾಗುತ್ತಿರುವುದಕ್ಕೆ ಇದೇ ಮುಖ್ಯ ಕಾರಣ. ಹೀಗೆಲ್ಲಾ ಮಾಡುತ್ತಿರುವುದನ್ನು ನೋಡಿದರೆ ಇದು ತುಂಬ ನಾಚಿಕೆಗೇಡಾದಂಥ ವಿಚಾರವೆಂದು ಹೇಳಬೇಕಾಗಿದೆ. ಈಗ 3 ಜನ D.I.G. ಗಳನ್ನು ಮಾಡಿದ್ದಾರೆ. ಅನೇಕರನ್ನು ಹೊಸದಾಗಿ A.S.P. ಗಳನ್ನಾಗಿ ನೇಮಕ ಮಾಡಿದ್ದಾರೆ. ತಮ್ಮ ಮನಸ್ಸಿಗೆ ಬಂದಂತೆಲ್ಲಾ ತಮಗೆ ಬೇಕಾದವರಿದ್ದರೆ ಅವರಿಗೆ ನೌಕರಿಗಳನ್ನು ಕೊಡುವುದು, ತಮಗೆ ಬೇಡದವರಿದ್ದರೆ—ನೌಕರಿಗಳೇ ಖಾಲಿಯಿಲ್ಲ ಅನ್ನುವುದು ಹೀಗೆರಲ್ಲಾ ಮಾಡುವುದು ಸರಿಯಾದದ್ದಲ್ಲ . . . .

2 P.M.

ಎರಡನೆಯದಾಗಿ, ಮುನ್ನೂರು ರೂಪಾಯಿ ಸಂಬಳ ವಿದ್ದವರಿಗೆ ಆರುನೂರು ರೂಪಾಯಿ, ನಾನೂರೈವತ್ತಿದ್ದವರಿಗೆ ಒಂಭೈನೂರು ರೂಪಾಯಿ ಸಂಬಳ ಕೊಡುವಾಗ, ಕೇವಲ ಇಪ್ಪತ್ತು ಇಪ್ಪತ್ತೈದು ರೂಪಾಯಿ ಸಂಬಳ ಬರತಕ್ಕ ಒಂಭತ್ತು ಸಾವಿರ ಜನ ಕಾನ್ಸ್ಟೇಬಲುಗಳ ಮತ್ತು ಮೂವತ್ತೈದು ರೂಪಾಯಿ ಸಂಬಳದ ಮೇಲೆ ಕೆಲಸಮಾಡುವ ದಫೇದಾರರುಗಳ ಸ್ಥಿತಿಗತಿಗಳನ್ನೂ ಉತ್ತಮಪಡಿಸಬೇಕು. ಘೋರ ವಿಪತ್ತಿನಲ್ಲಿಯೂ ಪ್ರಾಣದ ಮೇಲಿನ ಆಸೆಯನ್ನೂ ಬಿಟ್ಟು ಇವರು ಕೆಲಸಮಾಡಬೇಕು. ಹಗಲು ರಾತ್ರಿ ಎನ್ನದೆ ಇವರು ಕೆಲಸಮಾಡಬೇಕು. ಇಂಥವರಿಗೆ ಸರಿಯಾದ ಪ್ರೋತ್ಸಾಹ ಕೊಟ್ಟರೆ ಇನ್ನೂ ಹೆಚ್ಚು ದಕ್ಷತೆ ತೋರಿಸುವುದಕ್ಕವಕಾಶವಾಗುತ್ತದೆ. ಇವರ ಸ್ಥಿತಿಗತಿಗಳನ್ನು ಉತ್ತಮಪಡಿಸದೆ ಏನುಮಾಡುವುದಕ್ಕೂ ಆಗುವುದಿಲ್ಲ. ಈ ರೀತಿ ಪೋಲೀಸ್ ಇಲಾಖೆಗೆ ಹೆಚ್ಚು ಖರ್ಚುಮಾಡುವಾಗ ಕನಿಷ್ಠ ದರ್ಜೆಯಲ್ಲಿ ಕೆಲಸಮಾಡುವ ಕಾನ್ಸ್ಟೇಬಲ್‌ಗಳ ಸಂಬಳವನ್ನು ಹೆಚ್ಚುಮಾಡಿದ್ದೇವೆ ಎಂದು ಹೆಮ್ಮೆ ತೋರಿಸಿದ್ದಿದ್ದರೆ ನಾವು ಸಂತೋಷಪಡುತ್ತಿದ್ದೆವು. ಇದು ಬಿಟ್ಟು ದೊಡ್ಡ ದೊಡ್ಡ ನೌಕರರಿಗೆ ಸಂಬಳವನ್ನು ಹೆಚ್ಚಿಸಿ ಅವರ ಸಂಖ್ಯೆಯನ್ನೂ ಹೆಚ್ಚಿಸಿದರೆ ಏನಾಯಿತು? ಬಡನೌಕರರಿಗೆ ಕೇವಲ ಒಂದು ರೂಪಾಯಿ ಐದು ರೂಪಾಯಿ ಖರ್ಚುಮಾಡು

(ಶ್ರೀ ಬಿ. ಹುಚ್ಚೇಗೌಡ.)

ಪುದಕ್ಕೆ ಬದಲು ಇವರಿಗೆ ಕನಿಷ್ಠ ಸಂಬಳವನ್ನು 50 ರೂಪಾಯಿ ಕೊಟ್ಟಿದ್ದಿದರೆ ಬಹಳ ಸಂತೋಷಪಡುತ್ತಿದ್ದೆವು. ಹೀಗೆ ಮಾಡಿದ್ದಿದ್ದರೆ ಅವರೂ ಕೂಡ ಹೆಚ್ಚು ದಕ್ಷತೆಯಿಂದ ಕೆಲಸಮಾಡಿ ಜನರ ಪ್ರೀತಿ ಅನುರಾಗಗಳನ್ನು ಸಂಪಾದನೆ ಮಾಡಿಕೊಂಡು ಜನರ ಕಷ್ಟ ನಿವಾರಣೆಗೂ ಅವಕಾಶವಾಗುತ್ತಿತ್ತು. ಈಗ ಅವರು ನಿರಾಶರಾಗಿದ್ದಾರೆ. ಅಲ್ಪಸ್ವಲ್ಪ, ನಾಲ್ಕಾಣೆ ಎಂಟಾಣೆ ತೆಗೆದುಕೊಂಡರೆ ಅದೇ ಸಾಕೆಂದು ತೆಗೆದು ಕೊಳ್ಳುತ್ತಾರೆ. ಅವರಿಗೆ ಬರುವುದು ದಿನಕ್ಕೆ ಹನ್ನೊಂದಾಣೆ ಸಂಬಳ. ಯಾವನಾದರೂ ಹೆಂಡ ಕುಡಿಯುವವನನ್ನು ಭಯಪಡಿಸಿ ಹಿಡಿದರೆ ಎಂಟಾಣೆ ಸಿಕ್ಕುತ್ತದೆ. ಹೀಗಿರುವಾಗ ನಿಜವಾಗಿ ನಿಸ್ಪೃಹನಾಗಿ ಕೆಲಸಮಾಡು, ಶ್ರದ್ಧೆಯಿಂದ ದುಡಿ ಎಂದರೆ ಹೇಗೆ ಸಾಧ್ಯ? ಹೊಟ್ಟೆಗೇ ಇಲ್ಲದೆ ಕೆಲಸಮಾಡು ಎಂದರೆ ಯಾರೂ ಮಾಡುವುದಿಲ್ಲ. ಯಾರೇ ಆಗಲಿ ಅವನು ಎಷ್ಟೇ ನಿಸ್ಪೃಹನಾದರೂ ತನ್ನ ಮಕ್ಕಳು ಹೊಟ್ಟೆಗಿಲ್ಲದೆ ಸಾಯುವ ಸ್ಥಿತಿಯಲ್ಲಿರುವ ಸಂದರ್ಭದಲ್ಲಿ ತಾನು ದಾರಿ ಬಿಟ್ಟು ಹೋಗಬೇಕಾಗುತ್ತದೆ. ಹೀಗಿರುವಾಗ ಸರ್ಕಾರದವರು ಇವರ ಸ್ಥಿತಿಗತಿಗಳನ್ನು ಸ್ವಲ್ಪವೂ ಯೋಚನೆಮಾಡದೇ ಇರುವುದು, ಉತ್ತಮಪಡಿಸಲು ಪ್ರಯತ್ನಮಾಡದೆಯಿರುವುದು, ಇದರಿಂದ ಬಹು ಮಟ್ಟಿಗೆ ಅವರಿಗೆ ನಿರಾಶೆಯನ್ನುಂಟು ಮಾಡಿದೆ. ಇದರಿಂದ ಮುಂದಾದರೂ crimes ಸಂಖ್ಯೆ ಹೆಚ್ಚುತ್ತದೆ. ಕಳೆದ ಐದು ವರ್ಷಗಳಲ್ಲಿ ನಡೆದಿರುವ ತಕ್ಕೀರುಗಳ ಸಂಖ್ಯೆಯನ್ನು ನಾವು ಕೇಳಿದ ಪ್ರಶ್ನೆಯೊಂದಕ್ಕೆ ಉತ್ತರವಾಗಿ ಒದಗಿಸಲಾಗಿದೆ. ಅದನ್ನು ನೋಡಿದರೆ ವರ್ಷ ವರ್ಷವೂ ಹೆಚ್ಚುತ್ತಿದೆ.

Sri H. SIDDAVEERAPPA.—No. No.

ಶ್ರೀ ಬಿ. ಹುಚ್ಚೇಗೌಡ.—ನಾನು ನೋಡಿದ್ದೇನೆ. It is on the increase. You have agreed during the last session.

Sri H. SIDDAVEERAPPA.—I will give you figures for 15 years. . . .

Sri B. HUTCHE GOWDA.—Yes, Sir Government have given figures during the last session. They have agreed that it is on the increase.

ಇದು ಹೇಗಾದರೂ ಇರಲಿ, ಈ ನೌಕರರು ಕಷ್ಟಪಡುವವರು, ತಿಂದಿತೀರ್ಥವಿಲ್ಲದಿರುವ ಜಾಗಗಳಲ್ಲಿ, ಕಾಡಿನಲ್ಲಿ ಕೂಡ ಹೋಗಿ ಕೆಲಸಮಾಡುವವರು. ಇದನ್ನೆಲ್ಲಾ ಪರಿಶೀಲಿಸಿ ಅವರಿಗೆ ಜೀವನ ನಿರ್ವಹಣೆಗೆ ಸಾಕಾದಷ್ಟಾದರೂ ಸಂಬಳಕೊಟ್ಟರೆ ಮೊದಲಿಗಿಂತ ಹೆಚ್ಚು ಉತ್ಸಾಹ ಮತ್ತು ದಕ್ಷತೆಯಿಂದ ಕೆಲಸ ಮಾಡುತ್ತಾರೆ. ಆದ್ದರಿಂದ ಇಷ್ಟಾದರೂ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

Increasing the Strength of the Police Constables in Yeswanthapur.

ಶ್ರೀ ಆರ್. ಮುನಿಸ್ವಾಮಯ್ಯ (ಬೆಂಗಳೂರು ಉತ್ತರ—ಅನುಸೂಚಿತ ಜಾತಿಗಳು).—ಸ್ವಾಮಿ, ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ ಯಶವಂತಪುರ ದೊಡ್ಡಗ್ರಾಮ ಮತ್ತು ಹೋಬಳಿ ಹೆಡ್‌ಕ್ವಾರ್ಟರ್ಸು. ಹಿಂದೆ ಇಲ್ಲಿ ಒಂದು ಪೋಲೀಸ್ ಔಟ್ ಪೋಸ್ಟ್ ಇತ್ತು; ಒಬ್ಬ ಸಬ್‌ಇನ್ಸ್‌ಪೆಕ್ಟರು, ಒಬ್ಬ ದಫೇದಾರ ನಾಲ್ಕು ಜನ ಕಾನ್ಸ್‌ಟೇಬಲ್‌ಗಳನ್ನು ಕೊಟ್ಟಿದ್ದರು. ಇದು ಹಾಗೆಯೇ ನಡೆದುಕೊಂಡುಬರುತ್ತಿದೆ. ಈಗ ಯಶವಂತಪುರ ಬಹಳ ವಿಸ್ತಾರವಾಗಿ ಬೆಳೆದು ಅಲ್ಲಿನ ಜನ ಸಂಖ್ಯೆ ಹತ್ತು ಸಾವಿರದವರೆಗೆ ಹೆಚ್ಚಿದೆ. ಇಪ್ಪತ್ತು ಸಾವಿರ ಜನ ಸಂಖ್ಯೆ ಇದೇ ರೇಂಜಿಗೆ ಸೇರಿದ ಬೇರೆ ಗ್ರಾಮಗಳಲ್ಲಿ ಇರುತ್ತದೆ. ಈ ಊರು ರೈಲ್ವೆ ಜಂಕ್ಷನ್ ಇರುವ ಸ್ಥಳ, ಬೆಂಗಳೂರು—ಹೊನ್ನಾವರ್ ರಸ್ತೆಯಲ್ಲಿದೆ; ಬೆಂಗಳೂರನ್ನು ಬಿಟ್ಟರೆ ಮೊದಲು ಸಿಕ್ಕುವ ಗ್ರಾಮವಾಗಿದೆ. Floating population ಸುಮಾರು ಮೂರು ಸಾವಿರದವರೆಗೆ ಇರಬಹುದು. ಆಂಧ್ರದಿಂದ ಬೆಂಗಳೂರಿಗೆ ಬರುವವರು ಬಹುಜನರು ಬಂದು ಇಳಿದು ಕೊಳ್ಳುವ ಸ್ಥಳ. ಅಲ್ಲಿ ಒಬ್ಬ ಸಬ್‌ಇನ್ಸ್‌ಪೆಕ್ಟರು, ಒಬ್ಬ ದಫೇದಾರ, ನಾಲ್ಕು ಜನ ಕಾನ್ಸ್‌ಟೇಬಲುಗಳನ್ನೇ ಈಗಲೂ ಇಟ್ಟಿದ್ದಾರೆ. ಈ ಕಾನ್ಸ್‌ಟೇಬಲ್‌ಗಳಲ್ಲಿ ಒಬ್ಬರು ಗುಮಾಸ್ತನ ಕೆಲಸ ಮಾಡುವುದು, ಇನ್ನೊಬ್ಬ ಟಪಾಲ್ ತೆಗೆದುಕೊಂಡು ಹೋದರೆ ಇನ್ನಿಬ್ಬರು ಸೆಂಟ್ರಿ ಇರುತ್ತಾರೆ. ಇವತ್ತೂ ಶ್ಯರಿತ ಕರೆಗಳ ದೆಸೆಯಿಂದ ಎಲ್ಲಿಯಾದರೂ ಹೋದರೆ ಸ್ಪೇರ್ಷನಲ್ಲಿ ಯಾರೂ ಇರುವುದಿಲ್ಲ. ಡಿಸ್ಟ್ರಿಕ್ ಪೋಲೀಸ್ ಸೂಪರಿಂಟೆಂಡೆಂಟರು ಇದನ್ನು ತಿಳಿದು ಅಲ್ಲಿಗೆ 20 ಜನ ಕಾನ್ಸ್‌ಟೇಬಲ್‌ಗಳನ್ನು ಕೊಡಬೇಕೆಂದು ಶಿಫಾರಸು ಮಾಡಿದ್ದಾರೆ. ಮಲ್ಲೇಶ್ವರ, ಬನಶಂಕರಿಗುಡಿ ಮುಂತಾದ ನಗರ ಪ್ರದೇಶದಲ್ಲಿರುವ ಒಂದೊಂದು ಸ್ಪೇಷನ್ನಿಗೆ 50 ಜನ ಕಾನ್ಸ್‌ಟೇಬಲ್‌ಗಳಿರುತ್ತಾರೆ. ಇದು ಅನಾವಶ್ಯಕವೆಂದು ಕಾಣುತ್ತದೆ. ಆದುದರಿಂದ ಪಟ್ಟಣ ಪ್ರದೇಶದಲ್ಲಿರುವ ಕಾನ್ಸ್‌ಟೇಬಲ್‌ಗಳ ಸಂಖ್ಯೆಯನ್ನು ಕಡಮೆ ಮಾಡಿ, ಗ್ರಾಮಾಂತರ ಪ್ರದೇಶಗಳಿಗೆ ಅವರಲ್ಲಿ ಕೆಲವರನ್ನು ವರ್ಗಮಾಡಿ, ಅಲ್ಲಿಗೆ ಹೆಚ್ಚು ಜನರನ್ನು ಕೊಟ್ಟರೆ ಅನುಕೂಲವಾಗುತ್ತದೆ. ಹೀಗೆ ಮಾಡಿ ಜನರನ್ನು ರಕ್ಷಣೆಮಾಡಲು ಅವಕಾಶ ಮಾಡಿಕೊಡಬೇಕೆಂದು ಪ್ರಾರ್ಥಿಸುತ್ತೇನೆ.

Quarters for Police Staff in Dibburahalli.

*ಶ್ರೀ ಜಿ. ಪಾಪಣ್ಣ (ಶಿಡ್ಲಘಟ್ಟ—ಚಿಕ್ಕಬಳ್ಳಾಪುರ).—ಸ್ವಾಮಿ, ಶಿಡ್ಲಘಟ್ಟ ತಾಲ್ಲೂಕು ದಿಬ್ಬೂರಹಳ್ಳಿ ಮಧ್ಯ ಗ್ರಾಮವಾಗಿದ್ದು ಅಲ್ಲೊಂದು ಪೋಲೀಸ್ ಸ್ಪೇರ್ಷ ಇದೆ. ಅದು ಸಣ್ಣ ಹಳ್ಳಿಯಾಗಿದ್ದು ಅಲ್ಲಿ ಪೋಲೀಸ್ ಸಿಬ್ಬಂದಿಗೆ ವಾಸಕ್ಕೆ ಮನೆಗಳಿಲ್ಲದೆ ಅಲ್ಲಿಗೆ ವರ್ಗವಾಗಿ ಬರತಕ್ಕ ಪೋಲೀಸ್ ನೌಕರರು ತಮ್ಮ ಮನೆಯವರನ್ನು ಜೇರೆಕಡೆ ಇಟ್ಟಿರಬೇಕಾಗಿದೆ. ಮೊದಲು ಅವರು ಯಾವ ಸ್ಥಳದಲ್ಲಿದ್ದರೋ ಅಲ್ಲೇ ಇಟ್ಟಿರಬೇಕಾಗಿದೆ. ಆದಕಾರಣ ಆ ಊರಿಗೆ ಯಾರು ಬಂದರೂ ಅಲ್ಲಿರುವುದಕ್ಕೆ ಇಷ್ಟವಿದಲೆ ಬೇರೆಕಡೆಗೆ ವರ್ಗ ಮಾಡಿಸಿಕೊಂಡು ಹೊರಟುಹೋಗುತ್ತಾರೆ. ಹೀಗೆ ವಾಸಕ್ಕೆ ಮನೆಗಳಿಲ್ಲದೆ ಆಗಿರುವ ಅನಾನುಕೂಲವನ್ನು ಸರಿಪಡಿಸಲು ಮನೆಗಳನ್ನು ಕಟ್ಟಿಸಿಕೊಡಬೇಕೆಂದು ಸಲಹೆ ಮಾಡುತ್ತೇನೆ.

Promotions.

*ಶ್ರೀ ಬಿ. ಎಸ್. ಬೋರಣ್ಣಗೌಡ (ಬೇಲೂರು).—ಸ್ವಾಮಿ, ಈ ಇರಾಖೆಯ ಪ್ರಾಮುಖ್ಯತೆ ಎಲ್ಲರಿಗೂ ಗೊತ್ತಿದೆ. ಇಲ್ಲಿ ನೌಕರಿಗೆ ತೆಗೆದುಕೊಳ್ಳುವಾಗ ನಿಶ್ಯಕ್ತರನ್ನು ನೇಮಿಸುತ್ತಾರೆ. ಕೃಶರಾಗಿರುವವ

ರಿಗೂ ಸರಿಯಾಗಿ ಕೆಲಸಮಾಡದೇ ಇರುವವರಿಗೂ ಪ್ರಮೋಷ್ಷ್ ಸಿಕ್ಕುತ್ತದೆ. ಬಿತ್ತಿಕೊಡುವಾಗ ಯಾರು ದಕ್ಷತೆಯಿಂದ ಹೆಚ್ಚು ಕೆಲಸ ಮಾಡಿದ್ದಾರೆಂಬುದನ್ನು ನೋಡುವುದಿಲ್ಲ. ಸೀನಿಯಾರಿಟಿಯ ಮೇಲೆ ಕೊಡುತ್ತೇವೆಂದು ಹೇಳುತ್ತಾರೆ. ಪೋಲೀಸ್ ಇಲಾಖೆಯಲ್ಲಿ ದಕ್ಷತೆ ಮತ್ತು ಪ್ರಾಮಾಣಿಕತೆ ಹೆಚ್ಚಿನ ಮಟ್ಟದಲ್ಲಿ ಬೇಕೆಂದು ಹೇಳುವಾಗ, ದಕ್ಷನಾಗಿ ಪ್ರಾಮಾಣಿಕನಾಗಿ ಯಾರು ಕೆಲಸ ಮಾಡುತ್ತಿದ್ದಾನೋ ಅವನಿಗೆ ಸೀನಿಯಾರಿಟಿಯನ್ನು ಪರಿಗಣಿಸದೆ ಪ್ರಮೋಷ್ಷ್ ಸಿಕ್ಕಬೇಕು. ಮಿಲಿಟರಿ ಇಲಾಖೆಯಲ್ಲಿ ಬೇರೆ ರೀತಿ ಪ್ರೊಮೋಷ್ಷ್ ಕೊಡುವುದು. ಆ ನೀತಿ ಸರಿಯಾಗಿದೆ. ಅದನ್ನು ಇಲ್ಲಿಯೂ ಅನುಸರಿಸಬಹುದು. ಡಕಾಯಿತಿಯಾದಾಗ ಅಲ್ಲಿಲ್ಲದೇ ಇದ್ದವರಿಗೆ ಮೆಡಲ್ ಕೊಟ್ಟು ಅಲ್ಲಿದ್ದು ಧೈರ್ಯದಿಂದ ಹೋರಾಡಿ ಹದಿನಾಲ್ಕು ಗುಂಡು ಹಾರಿಸಿ ಡಕಾಯಿತರನ್ನು ಹಿಡಿದವರಿಗೆ ಏನೂ ಕೊಡಲಿಲ್ಲವೆಂದು ಶ್ರೀಮಾನ್ ಮಾದಯ್ಯನವರು ಹೇಳಿದರು. ಎಷ್ಟು ಚೆನ್ನಾಗಿದೆ ಇದು! ಅವರಂತೂ ಹೇಳಿದರು. ಇದು ಹೇಗಾದರೂ ಇರಲಿ ವಿವಾದಾಸ್ಪದವಾದ ವಿಚಾರ. ದಕ್ಷತೆ, ನೀತಿ ಉಳ್ಳವರಾಗಿ ಚೆನ್ನಾಗಿ ಕೆಲಸ ಮಾಡುವವರಿಗೆ ಸರಿಯಾಗಿ ಬಡ್ತಿ ಮುಂತಾದ ಮನ್ನಣೆ ಕೊಡುವ ನೀತಿಯನ್ನನುಸರಿಸಬೇಕೆಂದು ಹೇಳುತ್ತೇನೆ.

Police in the Chitaldrug District.

ಶ್ರೀ ಜಿ. ದುಗ್ಗಪ್ಪ (ಹೊಳಲಕೆರೆ—ಅನುಸೂಚಿತ ಜಾತಿಗಳು).—ಸ್ವಾಮಿ, ನನ್ನ ಸ್ನೇಹಿತರಾದ ಶ್ರೀಮಾನ್ ಶಿವಪ್ಪನವರು ಪೋಲೀಸ್ ಇಲಾಖೆಯ ವಿಚಾರದಲ್ಲಿ ಕೆಲವು ವಿಷಯಗಳನ್ನು ಹೇಳಿದ್ದಾರೆ. ನಾನು ಇನ್ನು ಕೆಲವು ವಿಷಯಗಳನ್ನು ಹೇಳಬೇಕೆಂದಿದ್ದೇನೆ. ನಮ್ಮಾರು ಎರಡು ತಿಂಗಳ ಹಿಂದೆ 'ಅರ್ನಗೆಜೆಟೆಡ್ ಆಫೀಸರ್ಸ್ ಗೆಜೆಟ್' ಎಂದು ಒಂದು ಪತ್ರಿಕೆಯಲ್ಲಿ ರೆವಿನ್ಯೂ ಕಮಿಷನರ ಕಚೇರಿಗೆ ನಾನು ಹೋಗಿದ್ದಾಗ ಒಂದು ಸಮಾಚಾರವನ್ನು ನೋಡಿದೆ. ಚಿತ್ರದುರ್ಗದಲ್ಲಿ ಕೆಲಸಮಾಡುತ್ತಿದ್ದ ಒಬ್ಬ ಪೋಲೀಸ್ ದಫೇದಾರ ಆ ಪತ್ರಿಕೆಯನ್ನು ಓದುತ್ತಿದ್ದನೆಂಬ ಕಾರಣದಿಂದ ಅವನನ್ನು ಡಿಸ್‌ಮಿಸ್ ಮಾಡಿದರೆಂದು ಒಂದು ನುದ್ದಿ ಅದರಲ್ಲಿ ಪ್ರಕಟವಾಗಿತ್ತು. ನನಗೆ ಅನುಮಾನ ಬಂತು. ನಿಜಾಂಶ ತಿಳಿಯಬೇಕೆಂದು ಸಂಬಂಧಪಟ್ಟವರನ್ನು ವಿಚಾರಮಾಡಿದೆ. ಆದರೆ ಸರಿಯಾದ ಉತ್ತರ ಬರಲಿಲ್ಲ. ಆ ಇಲಾಖೆಯ ಹಿತದೃಷ್ಟಿಯಿಂದ ಹೇಳುವುದಾದರೆ, ಅದಕ್ಕೆ ನಿಜವಾದ ಕಾರಣವೇನೆಂಬುದನ್ನು ತಿಳಿಸಬೇಕಾಗಿತ್ತು. ಎ. ಜಿ. ಓ. ನೌಕರರ ಪತ್ರಿಕೆಯನ್ನು ಓದುತ್ತಿದ್ದನೆಂಬ ಒಂದೇ ಕಾರಣದಿಂದ ಆ ನೌಕರನನ್ನು ಡಿಸ್‌ಮಿಸ್ ಮಾಡಿದರು ಎಂದರೆ ಅದು ನಮಂಜಸವಾಗಿ ಕಾಣುವುದಿಲ್ಲ. ಈ ವಿಷಯದಲ್ಲಿ ಸರಿಯಾಗಿ ತನಿಖೆ ನಡೆಸಿ ಸರ್ಕಾರದವರು ಸೂಕ್ತಕ್ರಮವನ್ನು ತೆಗೆದುಕೊಳ್ಳಬೇಕು.

ಕೆಲವು ದಿನಗಳಿಂದ ಸಂಸ್ಥಾನಾದ್ಯಂತ ಹರಿಜನರ ದಿನಾಚರಣೆ ನಡೆಸುತ್ತಿದಾರೆ. ಇಂಥ ಕಾರ್ಯಕ್ರಮದಲ್ಲಿ ಹರಿಜನರ ಕೇರಿಗೆ ಹೋಗಿ ಅಲ್ಲಿ ನಾರ್ಮೆಲ್ಲವು ಜನ ಹೆಣ್ಣುಮಕ್ಕಳು ಸಾರ್ವಜನಿಕ ಬಾವಿಗೆ ಹೋಗಿ ಪೂಜೆ ಮಾಡುವುದು, ಸಭೆ ನಡೆಸುವುದು ಮುಂತಾದ್ದನ್ನು ಮಾಡುತ್ತಾರೆ. ಇಂಥ ಒಂದು ಸಭೆಯನ್ನು ನನ್ನ ಸ್ನೇಹಿತರಾದ ಶಿವಪ್ಪನವರೂ ನಾನೂ ನಡೆಸುತ್ತಿದ್ದೆವು. ಅಲ್ಲಿ ಮಾಟಿಂಗ್ ನಡೆಯುವಾಗ ಹುಡುಗರು ಗಲಾಟೆಮಾಡಿದರು. ಅವರಿಗೆ ತಿಳಿವಳಿಕೆಯಿಲ್ಲ, ಏನೋ ಮಾಡಿದರು, ಅವರ ಮೇಲೆ ಕ್ರಮತೆಗೆದು ಕೊಳ್ಳಬಾರದೆಂದಿದ್ದೆವು. ಆದರೆ ಹಿಂಬದಿಯಲ್ಲಿ ಯಾರದೋ ಕೈವಾಡವಿದೆ ಎಂದು ಗೊತ್ತಾದ ಮೇಲೆ ಸಂಬಂಧಪಟ್ಟ ಪೋಲೀಸ್ ಅಧಿಕಾರಿಗೆ ತಿಳಿಸಿದೆ. ನಾವು ಜವಾಬ್ದಾರಿ ಜನರು ತಿಳಿಸುತ್ತಿದ್ದೇವೆಂದು ಹೇಳಿ, ಕಾಗದ ಬರೆದರೂ ಕೂಡ ಅವರ ಮೇಲೆ ಕ್ರಮ ತೆಗೆದುಕೊಳ್ಳಲಿಲ್ಲ. ಹಿಂಬದಿಯಲ್ಲಿ ಯಾರೋ ಇದ್ದಾರೆ, ಇಂಥಾದ್ದಕ್ಕೆ ಅವಕಾಶಕೊಟ್ಟರೆ ಸಂಸ್ಥಾನದ ಜನರಲ್ಲಿ ಕೆಟ್ಟ ಮನೋಭಾವ ಬೆಳೆಯುತ್ತದೆಂದು ಹೇಳಿದರೂ ಸೂಕ್ತಕ್ರಮ ತೆಗೆದುಕೊಳ್ಳಲಿಲ್ಲ.

ಚಿತ್ರದುರ್ಗ ಜಿಲ್ಲೆಯಲ್ಲಿರುವ ನೌಕರರೊಬ್ಬರು ಒಳ್ಳೆಯ ಜವಾಬ್ದಾರಿ ಕಚೇರಿಯ ಕಡೆ ಹೋಗಿ ಅಲ್ಲಿರುವ ತಕ್ಕ ಕೆಲವು ಅಧಿಕಾರಿಗಳನ್ನು 'ನನಗೆ ಒಂದು ರಿಕಾರ್ಡು ಬೇಕು ಕೊಡು' ಎಂದು ಕೇಳಿ ದೌರ್ಜನ್ಯದಿಂದ ವರ್ತಿಸಿರುವುದು ಆ ಅಧಿಕಾರಿಯ (*Interruption*) . . . ದಕ್ಷತೆಯನ್ನು ತೋರಿಸಿದಂತಾಗಲಿಲ್ಲ. ಇದೂ ಅಲ್ಲದೆ, ಹೊಳಲಕೆರೆ ತಾಲ್ಲೂಕಿನಲ್ಲಿ ನಡೆದಿರುವ ಹಾಗೆ ಒಂದು ಊರಿದೆ. ನಮ್ಮ ಜಿಲ್ಲೆಯ ಜನರು ಪೆತ್ತನೆ ಜನರೆಂದು ಹೆಸರುವಾಸಿ ಪಡೆದವರು. ಇಂಥವರ ಮೇಲೆ ಸಬ್ ಇನ್‌ಸ್ಪೆಕ್ಟರು ಕೈವಾಡಿದರೆಂದರೆ, ಅತನು ಎಷ್ಟು ದೌರ್ಜನ್ಯದಿಂದ ವರ್ತಿಸಿರಬೇಕೆಂಬುದನ್ನು ಗೃಹಸಚಿವರೇ ತಿಳಿದುಕೊಳ್ಳಬೇಕು.

ನುಮಾರು ಜನವರಿ 26ನೆಯ ತಾರೀಖು ಒಂದು ಕ್ಷೌರದ ಅಂಗಡಿಗೆ ನಮ್ಮವರೊಬ್ಬರು ಕ್ಷೌರ ಮಾಡಿಸಿಕೊಳ್ಳುವುದಕ್ಕೆ ಹೋದರು. ಬೆಳಿಗ್ಗೆ ಹೋದವರು ಮಧ್ಯಾಹ್ನ ಮೂರು ಗಂಟೆಯವರೆಗೆ ಕಾದಿದ್ದರೂ ಮಾಡಲಿಲ್ಲ. ಪೋಲೀಸಿನವರಿಗೆ ಹೇಳಿದರೂ ಕೂಡ ಅವನ ಮೇಲೆ ಕ್ರಮ ತೆಗೆದುಕೊಳ್ಳಲಿಲ್ಲ. ಅಲ್ಲಿಗೆ ಹೋಗಿ ಹೇಳಿದ ಹುಡುಗರ ಮೇಲೆಯೇ ಕ್ರಮ ಕೈಗೊಂಡರು. ಏತಕ್ಕೆ ಈ ನಿದರ್ಶನವನ್ನು ಹೇಳುತ್ತಿದ್ದೇನೆಂದರೆ, ಅಧಿಕಾರಿಗಳು ಸರ್ಕಾರದ ಆಜ್ಞೆಗೆ ಅಷ್ಟಾಗಿ ಗಮನಕೊಡುವುದಿಲ್ಲ. ಅವರಲ್ಲಿ ಒಂದು ನಡಿಲಮನೋಭಾವವಿದೆ. ಅನೇಕ ಸಂದರ್ಭಗಳಲ್ಲಿ ಪೋಲೀಸ್ ಇಲಾಖೆ ಇದೆಯೋ ಇಲ್ಲವೋ ಎಂಬ ಸಂದೇಹ ಜನರಲ್ಲಿ ಮೂಡುತ್ತಿದೆ. ಆದರೆ ಪೋಲೀಸ್ ಇಲಾಖೆ ಇರುವುದು ಜನರ ಹಿತರಕ್ಷಣೆಗೆ ಎಂದು 'ವ್ಯಾಕ್' ಮೇಲೆ ಮಾತ್ರ ಬರೆದಿದ್ದಾರೆ.

ಇನ್ನೊಂದು ವಿಷಯ. ಜಗಳೂರು ಟಿ. ಬಿ. ಯಲ್ಲಿ ನಾರಾಯ ಮುಂತಾದ ಪಾನಗಳನ್ನು ಮಾರುವುದು ನಿತ್ಯದ ಕ್ರಮವಾಗಿದೆ. ಇಂಥ ವಿಚಾರಗಳನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಬೇಕು, ಇಲ್ಲೆಲ್ಲ ಏತಕ್ಕೆ ಹೇಳಬೇಕೆಂದು ಕೇಳಬಹುದು. ಆದರೆ ಸಂಬಂಧಪಟ್ಟ ಅಧಿಕಾರಿಗಳಿಗೆ ಹೇಳುತ್ತಿದ್ದರೂ ಅವರು ಏನೂ ಮಾಡದಿದ್ದರೆ ಏನು ಮಾಡುವುದು? ಗೃಹ ಸಚಿವರು ಈ ವಿಷಯಗಳಲ್ಲಿ ನಿಗಾಕೊಟ್ಟು ಸೂಕ್ತಕ್ರಮ ಕೈಗೊಳ್ಳಬೇಕು. ಇಂಥಾದ್ದು ನಮ್ಮ ಜಿಲ್ಲೆಯಲ್ಲಿ ಬಹಳ ನಡೆಯುತ್ತಿದೆ.

ಇನ್ನೊಂದು ವಿಷಯ. ವಿದ್ಯುಚ್ಛಕ್ತಿ ಇಲಾಖೆಯ ನೌಕರರ ಮುಷ್ಕರವಾಯಿತು. ಆಗ ಸ್ವಲ್ಪ ದಕ್ಷತೆಯಿಂದ ಪೋಲೀಸಿನವರು ಕೆಲಸಮಾಡಿದರು, ಒಪ್ಪಿಕೊಳ್ಳೋಣ. ನಾನು ಅವರನ್ನು ಸಂಪೂರ್ಣವಾಗಿ ಹಳಿಯುವುದಿಲ್ಲ. ಆದರೂ ಎಲ್ಲೆಲ್ಲಿ ದಕ್ಷತೆ ಕಡಮೆಯಾಗಿದೆಯೋ, ಎಲ್ಲೆಲ್ಲಿ ಜಾಸ್ತಿ ದೌರ್ಜನ್ಯ ತೋರಿಸಿ ಜನರನ್ನು ತೊಂದರೆ ಮಾಡುತ್ತಾರೋ ಅಂಥಾದನ್ನು ನೋಡಿ, ಯಾರು ತಪ್ಪಿ ತಸ್ಥರೋ ಅಂಥವರ ಮೇಲೆ ಸರಿ

(ಶ್ರೀ ಜಿ. ದುಗ್ಗಪ್ಪ)

ಯಾದ ಕ್ರಮ ತೆಗೆದುಕೊಂಡು ಬಂದೋಬಸ್ತು ಮಾಡ ಬೇಕೆಂದು ಹೇಳಿ ಮುಗಿಸುತ್ತೇನೆ.

Prevention of Animal Sacrifice.

ಶ್ರೀ ಟಿ. ಹನುಮಯ್ಯ (ಹಿರಿಯೂರು-ಅನುಸೂಚಿತ ಜಾತಿಗಳು).—ಸ್ವಾಮಿ, ಪ್ರಾಣಿ ವಧೆಯನ್ನು ನಿಷೇಧಿಸುವುದಕ್ಕೆ ಸಂಬಂಧಪಟ್ಟ animal sacrifice ಬಿಲ್ ಮೈಸೂರು ದೇಶದಲ್ಲಿ ಜಾರಿಗೆ ಬಂದಿರುವುದು ಪೋಲೀಸ್ ಇಲಾಖೆಗೆ ಗೊತ್ತಿದೆಯೋ ಅಥವಾ ಗೊತ್ತಿಲ್ಲವೋ ನನಗಂತೂ ಅರ್ಥವಾಗುವುದಿಲ್ಲ ಎಂದು ತಿಳಿದುಕೊಂಡಿದ್ದೇನೆ. ಜನರು ಕುಡಿಯುವುದನ್ನು ನಿಲ್ಲಿಸಿದರೆ ಸಾಕಾಗಿದೆ, ಪ್ರಾಣಿವಧೆ ಮಾಡುವುದನ್ನು ನಿಲ್ಲಿಸಲು ನಾವೆಲ್ಲಿ ಹೋಗೋಣವೆಂದು ಪೋಲೀಸ್ ಇಲಾಖೆಯವರು ಹೇಳುತ್ತಿದ್ದಾರೆ. ಜವಾಬ್ದಾರಿ ಸರ್ಕಾರ ಬರುವುದಕ್ಕೆ ಮುಂಚೆ ಜನಗಳಲ್ಲಿ ಪ್ರಾಣಿ ಹಿಂಸೆಯನ್ನು ದೇವೀ ಜಾತ್ರೆಯಲ್ಲಿ ಮಾತ್ರಕೂಡದೆಂದು ಪ್ರಚಾರ ಮಾಡಿದ್ದೇವೆ. ಇವತ್ತಿನ ದಿವಸ ಪ್ರಾಣಿಹಿಂಸೆ ಆಗುತ್ತಿದೆ. ದೇವೀ ಜಾತ್ರೆಯಲ್ಲಿ ಪ್ರಾಣಿಹಿಂಸೆ ಆಗುವುದನ್ನು ಸಬ್ ಇನ್‌ಸ್ಪೆಕ್ಟರೂ ಮತ್ತು ಥಹೇದಾರರೂ ಹೋಗಿ ನೋಡಿ 10-20 ರೂಪಾಯಿಗಳನ್ನು ತೆಗೆದುಕೊಂಡು ಜೇಬಿನಲ್ಲಿ ಹಾಕಿಕೊಂಡು ಎಲ್ಲೋ ಮನೆಯಲ್ಲಿ ಮಲಗಿಕೊಂಡು ಬೆಳಗೆ ಎದ್ದು ಹೋಗುತ್ತಾರೆ. ಆಗ 'ಏನು ಮಾಡಿದರೋ ಗೊತ್ತಿಲ್ಲ' ಎಂದು ಹೇಳುವುದು. ಇದನ್ನು ನೋಡಿದರೆ ಬಹಳ ವ್ಯಸನವಾಗುತ್ತದೆ. ದೇಶದಲ್ಲಿ ಒಂದು ಸುಲಲಿತವಾದ ಸ್ಥಿತಿಯನ್ನು ತರಬೇಕು. ದೇಶದಲ್ಲಿ ಕೆಟ್ಟ ಪದ್ಧತಿ ಇದ್ದುದನ್ನು ಕಾನೂನು ಬದ್ಧವಾಗಿ ನಿರ್ಮೂಲಮಾಡಬೇಕೆಂಬ ಉದ್ದೇಶದಿಂದ ಬಿಲ್‌ಗಳನ್ನೂ ಮನೂದೆಗಳನ್ನೂ ತಂದು ಪಾಸ್ ಮಾಡಿದರೂ ಕೂಡ ಇಲಾಖೆಯವರು ಸರಿಯಾಗಿ ಅದನ್ನು ಜಾರಿಗೆ ತರದೇ ಇದ್ದರೆ ದೇಶಕ್ಕೆ ಅದರಿಂದ ತುಂಬ ತೊಂದರೆಯಾಗುತ್ತದೆ ಎಂದು ಹೇಳುತ್ತೇನೆ. ಅನೇಕ ಕೂಲಿಗಾರರು ಕುಡಿಯುವುದನ್ನು ಅಭ್ಯಾಸ ಮಾಡಿದ್ದಾರೆ; ಅಲ್ಲದೆ ಪ್ರಾಣಿಹಿಂಸೆ ಜಾಸ್ತಿ ಆಗುತ್ತಲೇ ಇದೆ. ಶ್ರೀಮಾನ್ ದುಗ್ಗಪ್ಪನವರು ಹೇಳಿದ ರೀತಿಯಲ್ಲಿ ಪೋಲೀಸ್ ಇಲಾಖೆ ಇದೆಯೋ ಇಲ್ಲವೋ ನನಗೂ ಅನುಮಾನವಾಗುತ್ತಿದೆ. ಯಾವ ಗ್ರಾಮದಲ್ಲಿ ಜಾತ್ರೆ ಆಗಬೇಕಾದರೆ licence ತೆಗೆದುಕೊಳ್ಳಬೇಕು ಎಂದು ಕಾನೂನು ಇದೆ. ಆದರೆ licence ತೆಗೆದುಕೊಳ್ಳುತ್ತಾ ಇಲ್ಲ. ಇಂತಹ ಜಾತ್ರೆಗಳಲ್ಲಿ ಅನೇಕರು ಪ್ರಾಣಿಹಿಂಸೆಯನ್ನು ಮಾಡುತ್ತಾರೆ. ಪೋಲೀಸಿನವರು ಅಲ್ಲಗೆ ಹೋಗಿ ಒಂದೆರಡು ದಿವಸ ಅಲ್ಲಿ ಇದ್ದು ಬಿಟ್ಟು ಬಳೀ ಜೋಪಿಯವರು ಏನು ಮಾಡಬೇಕು ಎಂದು ಹೇಳುತ್ತಾರೋ ಹಾಗೆ ಮಾಡಿಬಿಟ್ಟು ರಾತ್ರಿ ಇದನ್ನು ತಪ್ಪಿಸಿಕೊಂಡು ಬರುತ್ತಾರೆ. ಆದ್ದರಿಂದ ಪೋಲೀಸ್ ಇಲಾಖೆಯವರು ಹೆಚ್ಚಿಗೆ ನಿಗಾ ತೆಗೆದುಕೊಂಡು ಈ ಪ್ರಾಣಿಹಿಂಸೆ ಖಂಡಿತವಾಗಿ ನಿಲ್ಲಿಸಬೇಕು. ಅದು ಬಹಳ ಜಾಸ್ತಿಯಾಗಿದೆ. ಪ್ರತಿಯೊಂದು ಗ್ರಾಮದಲ್ಲೂ ಇದನ್ನು ಮಾಡುತ್ತಿದ್ದಾರೆ. ಆದಕಾರಣ ಮಾನ್ಯ ಪೋಲೀಸ್ ಇಲಾಖೆಯವರಿಗೆ ಪ್ರಾಣಿವಧೆ ನಿಲ್ಲಿಸಲು ಹೆಚ್ಚಿಗೆ ನಿಗಾ ಕೊಡಬೇಕೆಂದು ಮಂತ್ರಿಗಳು ಆಜ್ಞೆ ಮಾಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ ಮತ್ತು ಈ ಜೋತಾ ನಿರ್ಣಯವನ್ನು ಈ ಸಭೆಯ ಮುಂದೆ ಮಂಡಿಸುತ್ತೇನೆ.

ಶ್ರೀ ಮಹಮ್ಮದ್ ಇಮಾಂ (ಜಗಳೂರು).—On a point of information, ಪ್ರಾಣಿ ಹಿಂಸೆಯಲ್ಲಿ ಕುರಿ, ಕೋಳಿ, ಮೀನು ಎಲ್ಲವೂ ಸೇರುತ್ತವೆಯೇ?

ಅಧ್ಯಕ್ಷರು.—ಇಲ್ಲ.

ಶ್ರೀ ಡಿ. ಎಂ. ಗೋವಿಂದರಾಜ್ (ನೆಲಮಂಗಲ).—ಮಾನ್ಯ ಅಧ್ಯಕ್ಷರೇ, ಮಾನ್ಯ ಸ್ನೇಹಿತರಾದ ಶ್ರೀ ಟಿ. ಹನುಮಯ್ಯನವರು ತಂದಿರುವ ಈ ಜೋತಾ ನಿರ್ಣಯವನ್ನು ನಾನು ಸಂಪೂರ್ಣವಾಗಿ ಸಮರ್ಥಿಸುತ್ತೇನೆ. ಈಗ ನಮ್ಮ ದೇಶದಲ್ಲಿ ಗೋಸಂರಕ್ಷಣಾ ಕಾನೂನು ಜಾರಿಯಲ್ಲಿದ್ದರೂ ಕೂಡ ಅದು ಸರಿಯಾಗಿ ಆಚರಣೆಯಲ್ಲಿಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ. ಈಗ ನಮ್ಮಲ್ಲಿ ಗೋವಧೆ ನಿರೋಧ ಕಾನೂನು ಜಾರಿಯಲ್ಲಿದ್ದರೂ ಕೂಡ. . . .

Mr. SPEAKER.—It only relates to animal sacrifice and Devi Jathra. Therefore, prohibition of cow slaughter does not arise.

ಶ್ರೀ ಡಿ. ಎಂ. ಗೋವಿಂದರಾಜು.—ಗೋವಧೆ ಬೇರೆ, ನಾನು ಹೇಳುವುದು ಬೇರೆ.

Mr. SPEAKER.—This refers to Devi Jathras. You are speaking about cow slaughter. There is no time.

*ಶ್ರೀ ವಿ. ಆರ್. ನಾಯ್ಡು (ಮಲ್ಲೇಶ್ವರ).—ಪೋಲೀಸಿನವರ ವಿಷಯದಲ್ಲಿ ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಮಾನ್ಯ ಸದಸ್ಯರು ಅವರ ಕಷ್ಟ ಏನು ಎಂದು ಹೇಳಿದ್ದಾರೆ. ದೇಶದಲ್ಲಿ ಶಾಂತಿ ಕಾಪಾಡಬೇಕಾದರೆ ಪೋಲೀಸಿನವರು ಮುಖ್ಯವೆಂದು ನನ್ನ ಅನುಭವ. 1942ನೇ ಇಸವಿಯಲ್ಲಿ ಅವರು ಮಾಡಿದ ತ್ಯಾಗದಿಂದ ನಾವು ಈ ಮಂತ್ರಿಮಂಡಲ ಮಾಡುವುದಕ್ಕೆ ಸಾಧ್ಯವಾಯಿತು. ಅವರ ಹೋರಾಟದಲ್ಲಿ ನಮ್ಮ ಜನಗಳ ಕಷ್ಟ ಹೇಳತೀರದು. ಮೊನ್ನೆ ತಾನೇ ಶ್ರೀರಾಮಪುರದಲ್ಲಿ ಒಬ್ಬ Constable ಮನೆಯ ಹೆಣ ಎತ್ತುವುದಕ್ಕೆ ದೊಡ್ಡು ಇರಲಿಲ್ಲ. ಹೀಗೆ ಅವರ ಬಡತನ ಬಹಳ ಜಾಸ್ತಿಯಾಗಿದೆ. Ministerಗೂ, ಅಧ್ಯಕ್ಷರಿಗೂ ಮತ್ತು ಇತರರಿಗೂ ಅವರಲ್ಲಿ ತುಂಬ ದಕ್ಷತೆ ಹೆಚ್ಚಿರುವುದು ಗೊತ್ತಿದೆ. ಎಲ್ಲಾದರೂ ಜಗಳವಾದರೆ ಅಥವಾ ಗಲಾಟೆಯಾದರೆ Police Constableನ್ನು ನಾವು ಉಪಯೋಗಿಸಿಕೊಳ್ಳುತ್ತೇವೆ. ನಮ್ಮ ಸಂಸ್ಥಾನದಲ್ಲಿ ಅವರಿಗಿರುವಷ್ಟು ಕಡಿಮೆ ಸಂಬಳ ಇನ್ನೆಲ್ಲಿಯೂ ಇಲ್ಲ. ದೇಶಭಕ್ತಿಯಿಂದ ಪೋಲೀಸಿನವರು ಕೆಲಸಮಾಡುತ್ತಾರೆ. ಇದಕ್ಕೆ ತಕ್ಕಂಥ Minister ನಮಗೆ ಸಿಕ್ಕಿದ್ದಾರೆ. ಏತಕ್ಕೆಂದರೆ, ಅವರು ಯಾವ ಪ್ರಶ್ನೆ ಕೇಳಿದರೂ ಪಾದರಸ ಇದ್ದ ಹಾಗೆ ಉತ್ತರ ಕೊಡುತ್ತಾರೆ. ಶ್ರೀ ದೇವನಹಳ್ಳಿಯವರ ಪ್ರೋತ್ಸಾಹವೂ ಇದೆಯೆಂದು ಒಪ್ಪಿಕೊಳ್ಳುತ್ತೇನೆ. ಆದರೆ ಪೋಲೀಸಿನವರಿಗೆ ಕೆಲಸ ಜಾಸ್ತಿ, ಸಂಬಳ ಕಡಿಮೆ ಆಗಿದೆ. ಶ್ರೀ ದೇವನಹಳ್ಳಿಯವರು ಮುತುವರ್ಜಿವಹಿಸಿ ಮೇಲ್ವಿಚಾರಣೆ ಮಾಡುತ್ತಾ ಇದ್ದರೂ ಕೆಲಸಕ್ಕೆ ತಕ್ಕಷ್ಟು ಸಂಬಳ ಕೊಡದೇ ಇರುವುದರಿಂದ ಪೋಲೀಸ್‌ನವರು ಒಂದೇ ರೀತಿ ಕೆಲಸ ಮಾಡುವುದಕ್ಕಾಗುತ್ತಾ ಇಲ್ಲ. ಆದ್ದರಿಂದ ಸಚಿವರು ಅವರಿಗೆ ಸುಮಾರು ಐದು ರೂಪಾಯಿ ಆದರೂ ಸಂಬಳ ಜಾಸ್ತಿ ಮಾಡಿದರೆ ಅದರಿಂದ ದೇಶಕ್ಕೆ ಕ್ಷೇಮ.

ಕೆಲವು ಪೋಲೀಸಿನವರು ಘೋಷಾ ಇರುವ ಸಂದರ್ಭದಲ್ಲಿ ಹೋಗುವುದಕ್ಕೆ ನಾಚಿಕೆ ಪಡುತ್ತಾರೆ. ಹೋಗುವುದಕ್ಕೆ ಸ್ವಲ್ಪ ಬೇಜಾರೂ ಆಗುತ್ತದೆ. ಮೊನ್ನೆ ಸಿದ್ಧಗಂಗಾ ಜಾತ್ರೆಗೆ ನಾನು ಹೋದಾಗ

ಎಷ್ಟೋ ಹೆಂಗಸರು ಚೈನು ಮುಂತಾದ್ದನ್ನು ಅಪಹಾರ ಮಾಡಿದ್ದಾರೆ. ಗಂಡಸರಂತೆ C. I. D. ಕೆಲಸ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಸ್ತ್ರೀ ಪೋಲೀಸ್ ದಳವನ್ನು ಏರ್ಪಡಿಸುವುದು ಬಹಳ ಅಗತ್ಯ. Our Mysore Police are appreciated by high and low throughout the world. ಪ್ರತಿಯೊಬ್ಬರೂ ಮೈಸೂರು ಸ್ಟೇಟಿನಲ್ಲಿ ಪೋಲೀಸಿನವರ ದಕ್ಷತೆಯನ್ನು ಹೊಗಳಿದ್ದಾರೆ. ಅವರಲ್ಲಿ ವಿಶ್ವಾಸ ಏಟ್ಟು ಅವರ ಕಷ್ಟ ಸುಖಗಳನ್ನು ನಿವಾರಣೆಮಾಡಿದರೆ ಅವರಲ್ಲಿ ದಕ್ಷತೆ ಇನ್ನೂ ಹೆಚ್ಚಾಗುತ್ತದೆಂದು ಹೇಳಿ ನನಗೆ ತಾವು ಅವಕಾಶ ಕೊಟ್ಟಿದ್ದಕ್ಕಾಗಿ ನಿಮ್ಮನ್ನು ಅಭಿನಂದಿಸುತ್ತೇನೆ.

*ಶ್ರೀ ಎಸ್. ಗೋಪಾಲಗೌಡ (ಸಾಗರ—ಹೊಸನಗರ).—ಸ್ವಾಮಿ, ಈ ಪೋಲೀಸ್ ಇಲಾಖೆಗೆ ಸಂಬಂಧಪಟ್ಟ ಡಿಮ್ಯಾಂಡಿನ ಮನವಿಯನ್ನು ವಿರೋಧಿಸುತ್ತಾ ನಾನು ಕೆಲವು ವಿಷಯಗಳನ್ನು ಹೇಳಬೇಕೆಂದು ಇದ್ದೇನೆ. ನಾನು ಹಿಂದೆ ತಾಳಗುಂದ ಪ್ರಕರಣದ ವಿಷಯದಮೇಲೆ ಈ ಸಭೆಯಲ್ಲಿ ಪ್ರಸ್ತಾಪ ಮಾಡಿದಾಗ ಪೋಲೀಸಿನವರು ಆ ನ್ವಳದಲ್ಲಿ ಅತ್ಯಾಚಾರ ನಡೆಸಿರತಕ್ಕಂಥಾದ್ದು ಶುದ್ಧ ಸುಳ್ಳು ಎಂದು ಈ ಇಲಾಖೆಯನ್ನ ಹೊಂದಿರತಕ್ಕಂಥ ಮಾನ್ಯ ಮಂತ್ರಿಗಳು ಈ ಸಭೆಯಲ್ಲಿ ಹೇಳಿದರು.

Sri H. SIDDAVEERAPPA.—I think, Sir, it is still *sub judice*. There is a case about it. It is in a court of law, and the Hon'ble Member knows about it.

Sri S. GOPALA GOWDA.—That is why I am saying. 'ಶುದ್ಧಸುಳ್ಳು' is a word which has been used by the Home Minister and it is not my word.

Mr. SPEAKER.—Whatever it may be, it is not parliamentary to use that word. You may avoid it. Moreover the matter is pending in the Court and it is *sub judice*.

Sri S. GOPALA GOWDA.—I am only quoting the words used by the Minister.

Mr. SPEAKER.—It may be quoted outside. But it cannot be used here. Even if it is used by the Hon'ble Minister, or by the Hon'ble Member, it is unparliamentary to use that word. If his statement contains that word, even that statement is unparliamentary.

ಶ್ರೀ ಎಸ್. ಗೋಪಾಲಗೌಡ—ಈ ಕೇಸು pending ಇಲ್ಲ. Pending ಇರುವುದಾಗಿ ಮಾನ್ಯ ಮಂತ್ರಿಗಳು ಈ ರೀತಿ ಆ ವಿಷಯದಲ್ಲಿ ಹೇಳಿರತಕ್ಕಂಥಾದ್ದು ನ್ಯಾಯವಲ್ಲವೆಂಬುದನ್ನು ನಾನು ಈ ಸಭೆಗಮನಕ್ಕೆ ತರುತ್ತೇನೆ. ಮತ್ತೊಂದು ಅಂಶವನ್ನು ನಾನು ಹೇಳಬೇಕೆಂದು ಇದ್ದೇನೆ. ಅದೇನೆಂದರೆ ಡಿಸೆಂಬರ್ ಮತ್ತು ಜನವರಿ ತಿಂಗಳಲ್ಲಿ ಬೆಂಗಳೂರಿನಲ್ಲಿ ಲಾಠಿ charge ನಡೆಯುತ್ತೆ ಎಂದು ಕೇಳಿದ್ದಕ್ಕೆ ಅದನ್ನು ಕೂಡ ಅದೇ ರೀತಿ ಮಾನ್ಯ ಮಂತ್ರಿಗಳು deny ಮಾಡಿದ್ದಾರೆ. ಪತ್ರಿಕೆಗಳನ್ನು ಓದಿದಂಥ ಸಾರ್ವಜನಿಕ ಮಹಾಶಯರೆಲ್ಲರೂ ಬಲ್ಲರು. ನಾನೂ ಸ್ವತಃ ಕಣ್ಣಾರೆ ನೋಡಿದ್ದೇನೆ. ಲಾಠಿ charge ಮಾಡಿರತಕ್ಕಂಥ ಸಂದರ್ಭ ಇದೆ. ಆಗ 144ನೇ ಸೆಕ್ಷನ್ ಬೆಂಗಳೂರಿನಲ್ಲಿ ಇತ್ತೆಂಬುದನ್ನು ಅವರು ಮರೆಯಬಾರದು. ಈ ರೀತಿ ಅವರು ಸುಳ್ಳುಗಳನ್ನು ಹೇಳತಕ್ಕಂಥಾದ್ದು. . . .

Sri A. BHEEMAPPA NAIK (Molakalmuru).—You have given a ruling that that word should not be used, but yet he is repeating. Secondly the matter is also *sub judice*.

Mr. SPEAKER.—He is not referring to that.

Sri A. BHEEMAPPA NAIK.—He should be requested to withdraw those words.

Sri S. GOPALA GOWDA.—May I know what are those words ?

ಅಧ್ಯಕ್ಷರು.—"ಸುಳ್ಳು" ಎಂಬುದು.

ಶ್ರೀ ಎಸ್. ಗೋಪಾಲಗೌಡ.—ಸತ್ಯಕ್ಕೆ ದೂರವಾದ ರೀತಿಯಲ್ಲಿ ಎಂದು ಅರ್ಥ ಬರುವ ಹಾಗೆ ಆ ಶಬ್ದಗಳನ್ನು ನಾನು ಉಪಯೋಗಿಸಿದೆ.

ಅಧ್ಯಕ್ಷರು.—ತಾವು ಅದನ್ನು ಹಾಗೆ ಉಪಯೋಗಿಸಿದ್ದರೆ ಅದು ತಪ್ಪು.

ಶ್ರೀ ಎಸ್. ಗೋಪಾಲಗೌಡ.—ಜನರ ನೀತಿಗೆ ಧಕ್ಕೆ ತರುವುದು ಮತ್ತು ಆ ರೀತಿ ಮೇಲ್ಪಂಕ್ತಿಯನ್ನು ಹಾಕುವುದು ಜವಾಬ್ದಾರಿಗೆ ಬಹಳ ದೂರವಾದ ವಿಷಯವಾಗುತ್ತದೆ ಎಂಬುದನ್ನು ನಾನು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡುತ್ತೇನೆ. ಈ ಇಲಾಖೆಯಲ್ಲಿ ನಾವು ದಕ್ಷತೆಯನ್ನು ಹೆಚ್ಚಿಸಬೇಕು. ಪ್ರಾಮಾಣಿಕರಾಗಿ ವರ್ತಿಸುವಂತೆ ಮಾಡಬೇಕು. ಮತ್ತು ಸೌಜನ್ಯವನ್ನು ಪ್ರದರ್ಶಿಸಬೇಕು. ಹೊರಗಡೆ ಯಾವ ರೀತಿ ಇತ್ತೀಚೆಗೆ ಮಾರ್ಪಾಡುಗಳನ್ನು ಮಾಡಿದ್ದಾರೋ ಆ ರೀತಿ ಮಾರ್ಪಾಡುಗಳನ್ನು ಇಲ್ಲ ಮಾಡಬೇಕು ಎಂದು ಹೇಳುತ್ತಿದ್ದರೂ ಕೂಡ, ಈ ರೀತಿ ಪ್ರಾಮಾಣಿಕತೆಯನ್ನು ಹೆಚ್ಚಿಸುವುದಕ್ಕೆ ಬೇಕಾಗಿರತಕ್ಕ ಕೆಲವು ಅವಕಾಶಗಳನ್ನಾಗಲಿ ದಕ್ಷತೆಯನ್ನು ಹೆಚ್ಚಿಸುವುದಕ್ಕೆ ಬೇಕಾದ ಅವಕಾಶಗಳನ್ನಾಗಲಿ ನಾವು ಕಲ್ಪಿಸುವುದಕ್ಕೆ ಸಾಧ್ಯವಾಗಿಲ್ಲ. ಮುಖ್ಯವಾಗಿ ತಾವು ಕೊಡುತ್ತಾ ಇರತಕ್ಕಂಥ ಸಂಬಳ ನಮಗೆ ಗೊತ್ತಿದ್ದ ಹಾಗೆ ಬಹಳ ಕಮ್ಮಿ. 22 ರೂಪಾಯಿಗಳಿಂದ ಅವರಿಗೆ ಏನು ಪ್ರಯೋಜನವಾಗುತ್ತದೆ!

Mr. SPEAKER.—That has been said by other Members.

ಶ್ರೀ ಎಸ್. ಗೋಪಾಲಗೌಡ.—ಅವರು ಸಂಖ್ಯೆಯಲ್ಲಿ ಹೆಚ್ಚಾಗಿರಬಹುದು. ಆ ದೃಷ್ಟಿಯಿಂದ ಅವರ ಸಂಬಳ ಸಾರಿಗೆಗಳನ್ನು ಪರಿಶೀಲನಬೇಕಾದುದು ಒಂದು ಅಂಶ. ಇನ್ನೊಂದು ಈ ಇಲಾಖೆಯಲ್ಲಿ ನೇರಿಸಿಕೊಳ್ಳುವಾಗಲೂ ಕೂಡ ಸರಿಯಾಗಿ screening ನಡೆಯಬೇಕು. ಈಗ ಇಲಾಖೆಯಲ್ಲಿರತಕ್ಕಂಥ ಎಲ್ಲಾ staffನ screening ಸಹ ನಡೆಯುವಂತೆ ಏರ್ಪಾಡು ಮಾಡಬೇಕು.

2-30 P. M.

ಅವರಿಗೆ ಕೊಟ್ಟಿರತಕ್ಕ ಟ್ರೈನಿಂಗ್ ಕೂಡ ಬಹಳ ಕಡಮೆ. ಕೆಲವು ನಿದರ್ಶನಗಳನ್ನು ಕೊಡುವುದಾದರೆ, ಸಾಮಾನ್ಯವಾಗಿ, ಆ ಇಲಾಖೆಯವರು ಬಳಸತಕ್ಕ ಭಾಷೆ ಬಹಳ ಹೀನವಾದ ಭಾಷೆ. ಒಬ್ಬ ಮನುಷ್ಯ, ಅವರ ದೃಷ್ಟಿಯಲ್ಲಿ ತಪ್ಪಿತಸ್ಥನೆಂದು ತಿಳಿದು ಅವರ ಕೈಗೆ ಸಿಕ್ಕಿಬಿದ್ದರೆ

(ಶ್ರೀ ಎಸ್. ಗೋಪಾಲಗೌಡ.)

ಅವನನ್ನ ಅವರು ನೋಡತಕ್ಕ ರೀತಿ ತೀರ ಹೀನಾಯವಾಗಿರುತ್ತದೆ. ಇಲಾಖೆಯವರು ಇದನ್ನು ಕೂಡ ಮನಗಂಡು ತಪ್ಪಿಸಬೇಕು. ನಾವು ನಾಗರಿಕ ಯುಗದಲ್ಲಿದ್ದೇವೆಂಬುದನ್ನು ಅರಿತು ಅವರು ಸೌಜನ್ಯದಿಂದ ವರ್ತಿಸುವುದನ್ನು ಕಲಿಯಬೇಕು. ಬೇರೆ ದೇಶಗಳಲ್ಲಿ ಹೇಗೆ ವರ್ತಿಸುತ್ತಾರೆ ಎಂಬುದನ್ನು ನೋಡಿದರೆ, ಪ್ರಪಂಚದ ಎದುರಿನಲ್ಲಿ ನಾವು ತಲೆತಗ್ಗಿಸಬೇಕಾಗಿದೆ. Investigation ವಿಚಾರದಲ್ಲೂ ಕೂಡ ಅವರಿಗೆ ಅನೇಕ ವಿಷಯಗಳು ತಿಳಿಯದಿರುವುದರಿಂದ ಅವರಿಗೆ ಸಾಕಷ್ಟು ತರಬೇತು ಕೊಡಬೇಕಾಗಿದೆ. ಆ ದಕ್ಷತೆ ಅವರಲ್ಲಿ ಹೆಚ್ಚಬೇಕು. ಅವರು ಇತ್ತೀಚೆಗೆ ರಾಜಕೀಯದಲ್ಲಿ ಒಳಹೊಕ್ಕು ಎದುರು ಪಕ್ಷದಲ್ಲಿ ಎಷ್ಟು ಜನರಿದ್ದಾರೆಂಬ ಜನಿವೆಯನ್ನು ಕೂಡ ಮಾಡುವುದಕ್ಕೆ ಹೊರಟಿದ್ದಾರೆಂದು ತಿಳಿದುಬಂದಿದೆ. ನಮ್ಮ ಪಾರ್ಟಿಯಲ್ಲಿ ಯಾವ ಯಾವ ಸದಸ್ಯರುಗಳಿದ್ದಾರೆಂಬ ಪಟ್ಟಿ ಕೂಡ ಅವರಲ್ಲಿದೆಯೆಂದು ತಿಳಿದಿದ್ದೇನೆ. ಪ್ರಜಾ ಪ್ರಭುತ್ವದಲ್ಲಿ ನಾವಿದ್ದೇವೆ ಎಂಬುದನ್ನು ಮರೆಯಬಾರದು. ಹೀಗಿರುವಾಗ ಏನಾದರೂ ಸರ್ವಾಧಿಕಾರತ್ವವನ್ನು ನಮ್ಮ ದೇಶದಲ್ಲಿ ಸ್ಥಾಪಿಸಬೇಕೆಂತಲೋ ಏನೋ, ನಮ್ಮ ಪಾರ್ಟಿಯ ಸದಸ್ಯರುಗಳಿಗೆ ಬರುವ ಪತ್ರಗಳನ್ನು ಮಧ್ಯೆ ತೆಗೆದುಕೊಂಡು ಹಿರಿದು ನೋಡುವುದು ಮುಂತಾಗಿ ಬಹಳವಾಗಿ ಅನ್ಯಾಯಗಳು ನಡೆಯುತ್ತಿವೆ. ತಮಗೆ ನಿಜವಾಗಿಯೂ ಪ್ರಜಾ ಪ್ರಭುತ್ವದಲ್ಲಿ ನಂಬಿಕೆಯಿದ್ದರೆ ಇಂಥ ಕೆಲಸಗಳನ್ನು ಬಿಡಬೇಕು. ಹಾಗೆ ಬಿಡುವಂತೆ ಸರ್ಕಾರದವರು ಅವರಿಗೆ ಆದೇಶ ಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಎಚ್. ಸಿದ್ದವೀರಪ್ಪ.—ಅಧ್ಯಕ್ಷರೇ, ಶ್ರೀಮಾನ್ ಗೋಪಾಲಗೌಡರು ಕೇಳಿರತಕ್ಕ ವಿಷಯದ ಮೇಲೆ ಮೊದಲು ಜವಾಬನ್ನು ಕೊಟ್ಟು, ಅನಂತರ ಬಾಕಿ ವಿಷಯಗಳನ್ನು ಮುಂದುವರಿಸುತ್ತೇನೆ. ಶ್ರೀಮಾನ್ ಗೋಪಾಲಗೌಡರು ಒಂದು ವಿಷಯವನ್ನು ಹೇಳಿದರು. ನಾನು ಸತ್ಯಕ್ಕೆ ದೂರವಾದ ಮಾತನ್ನು ಆಡಿದ್ದೇನೆ ಎಂದು ಹೇಳಿದರು. ಅವರ ಅಭಿಪ್ರಾಯದಲ್ಲಿ 'ಸತ್ಯ' ಎಂಬ ಪದಕ್ಕೆ ಏನು ಅರ್ಥವನ್ನು ಮಾಡಿಕೊಂಡಿದ್ದಾರೋ ನನಗಂತೂ ಗೊತ್ತಿಲ್ಲ. ನನ್ನ ಮಟ್ಟಿಗೆ ಹೇಳುತ್ತೇನೆ- ಅವರ ವಿಚಾರದಲ್ಲಿ ಬೇರೆ ಯಾವ ಅಭಿಪ್ರಾಯವನ್ನೂ ವ್ಯಕ್ತಪಡಿಸುವುದಿಲ್ಲ—ಅವರು ಎಷ್ಟು ಮಟ್ಟಿಗೆ ನಿಜ ಹೇಳಿಬೇಕೆಂಬ ಆಸೆಯುಳ್ಳವರಾಗಿದ್ದಾರೋ ಅಷ್ಟೇ ನಾನೂ ಇದ್ದೇನೆಂದು ಹೇಳಿದರೆ ಸಾಕು. 'ಲಾರಿ ಚಾರ್ಜ್' ಎನ್ನುವುದು ಒಂದು scientific ಅರ್ಥವುಳ್ಳ ಪದ. Screening ಎಂಬುದು ಒಂದು scientific ಪದ ಎಂದು ಅವರು ಹೇಳಿದರೋ ಅದೇ ರೀತಿ ಲಾರಿ ಚಾರ್ಜ್ ಎನ್ನುವುದೂ ಶಾಸ್ತ್ರೀಯ ಅರ್ಥದ ಪದ. ಅದರ ಅರ್ಥವೇನೆಂಬುದನ್ನು ಪೋಲೀಸ್ ಆಕ್ಟಿನಲ್ಲಿ ಹೇಳಿದ್ದಾರೆ. ಆ ಅರ್ಥದಲ್ಲಿ ಲಾರಿ ಚಾರ್ಜ್ ಆಗಿದೆಯೇ ಎಂದು ಕೇಳಿದ್ದಕ್ಕೆ 'ಇಲ್ಲ' ಎಂದು ಹೇಳಿದ್ದೇನೆ. ಹೊಡೆದೇ ಇಲ್ಲ. . . .

ಶ್ರೀ ಎಸ್. ಗೋಪಾಲಗೌಡ.—ಸ್ವಾಮಿ, 'ಹೊಡೆದೇ ಇಲ್ಲ' ಎಂಬುದು ನಿಜಕ್ಕೆ ದೂರವಾದ ಮಾತು. I strongly protest, Sir. Because I was there on many occasions, I have seen with my own eyes the Police people beating our Satyagrahis; and I was one who was about to be beaten; and there was one A.S.P. who was with me and whose leg was also injured. So the Hon'ble Minister cannot make such statements about those things, Sir.

Sri H. SIDDAVEERAPPA.—But before I proceed further, if he interferes, well I do not know what I have got to say. ನಾನು ಪೂರ್ತಿ ಹೇಳುವವರೆಗೂ ತಾವು ದಯವಿಟ್ಟು ಕೇಳಬೇಕು. ನಾನು ನೀವು ಹೇಳಿದ್ದನ್ನು ಸುಮ್ಮನೆ ಕುಳಿತುಕೊಂಡು ಕೇಳಿದಹಾಗೆ ನೀವೂ ಕೇಳಿದ್ದರೆ ನಿಮಗೇ ಗೊತ್ತಾಗುತ್ತದೆ. 'ಲಾರಿ ಛಾರ್ಜ್' ಮಾಡಿದ್ದಾರೆ ಎಂಬುದು ನಿಜವಲ್ಲ. ಈಗಲೂ ಅದನ್ನು ಹೇಳುತ್ತೇನೆ, ಘಂಟಾಘೋಷವಾಗಿ ಹೇಳುತ್ತೇನೆ, ರುಜುವಾತು ಮಾಡುವುದಕ್ಕೂ ತಯಾರಾಗಿದ್ದೇನೆ. ಆದರೆ ಯಾರಾದರೂ ವ್ಯಕ್ತಿಗಳು 'ಲಾ' ಮೀರಿ, illegal ಆಗಿ, excessive ಆಗಿ ವರ್ತಿಸಿದ್ದರೆ, ಅಂಥಾದನ್ನು ಸರ್ಕಾರದವರ ಗಮನಕ್ಕೆ ತಂದರೆ ಖಂಡಿತವಾಗಿಯೂ ವಿಚಾರಿಸುತ್ತೇನೆ. ಅಷ್ಟೇ ಹೊರತು, 'ಲಾರಿ ಚಾರ್ಜು' ನಡೆದಿಲ್ಲವೆಂಬುದು ಸತ್ಯಾಂಶಕ್ಕೆ ದೂರವಾದುದಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಎಸ್. ಗೋಪಾಲಗೌಡ.—ಸ್ಥಳೀಯ ಪತ್ರಿಕೆಗಳೆಲ್ಲಾ ಇಂಥಿಂಥ ದಿವಸ ಲಾರಿ ಚಾರ್ಜು ಆಗಿದೆಯೆಂದು ಪ್ರಕಟವಾಗಿದೆಯಲ್ಲಾ, ಅದರ ಮೇಲೆ ಸರ್ಕಾರದವರು investigate ಮಾಡಿದರೇ ಅಥವಾ ಇನ್ನೇನಾದರೂ ಕಾರ್ಯಕ್ರಮ ತೆಗೆದುಕೊಂಡರೇ?

ಶ್ರೀ ಮುಲ್ಕ ಗೋವಿಂದರೆಡ್ಡಿ (ಚಿತ್ರದುರ್ಗ).—ಎಲೆಕ್ಟ್ರಿಸಿಟಿ workers' strike ಸಂಬಂಧದಲ್ಲಿ ಇಂಥಿಂಥ ಪೋಲೀಸ್ ಸ್ಟೇಷನ್ನಿನ ಹತ್ತಿರ ಲಾರಿ ಛಾರ್ಜ್ ಮಾಡಲಾಯಿತೆಂದು ನಾನೇ ಡಿ. ಐ. ಜಿ. ಯವರಿಗೆ ದೂರು ಕೊಟ್ಟಿದ್ದೇನಲ್ಲಾ! C. I. D. men in plain clothesಗಳು ಹೊಡೆದಿದ್ದಾರೆಂದು ಪತ್ರಿಕೆಗಳಲ್ಲಿ ಬಂದಾಗ್ಗೂ ತಾವೇನಾದರೂ investigation ಮಾಡಿದಿರಾ? ತಾವೇನೂ investigation ಮಾಡದಿರುವುದರಿಂದ ಖಂಡಿತವಾಗಿಯೂ ಲಾರಿ ಛಾರ್ಜ್ ಆಗಿದೆಯೆಂದು ನಾನು ಹೇಳುತ್ತೇನೆ. ತಾವೇನಾದರೂ ಅದನ್ನು deny ಮಾಡಿ press communique ಯಾದರೂ issue ಮಾಡಿದ್ದೀರಾ?

ಶ್ರೀ ಎಚ್. ಸಿದ್ದವೀರಪ್ಪ.—ಪ್ರೆಸ್‌ನಲ್ಲಿ ಬಂದದ್ದಕ್ಕೆಲ್ಲಕ್ಕೂ contradict ಮಾಡಿ ಕಮ್ಯೂನಿಕೆ ಹೊರಡಿಸುವ ಪದ್ಧತಿಯನ್ನು ನಾನು ಇಟ್ಟುಕೊಂಡಿಲ್ಲ.

ಒಂದು ಮಾತಿನಲ್ಲಿ ಹೇಳುವುದಾದರೆ, ಪ್ರತಿ ದಿವಸವೂ ಎಲೆಕ್ಟ್ರಿಕಲ್ ಇಲಾಖೆಯ ಸ್ಟ್ರೈಕ್ ಕಾಲದಲ್ಲಿ ಸಂಸ್ಥಾನಾಮಳೆ ಎಲ್ಲೆಲ್ಲಿ ಏನೇನು ನಡೆಯುತ್ತಿತ್ತು ಎಂಬ ವರದಿಯು ಸರ್ಕಾರಕ್ಕೆ ಬರುತ್ತಿತ್ತು. ಹಾಗೆ ವರದಿ ಬಂದಂಥ ಕಾಲದಲ್ಲಿ ಲಾರಿ ಛಾರ್ಜ್ ಆದ ಅಂಶ ಯಾವುದರಲ್ಲೂ ಸರ್ಕಾರದ ಗಮನಕ್ಕೆ ಬಂದಿಲ್ಲ.

ಶ್ರೀ ಎಸ್. ಗೋಪಾಲಗೌಡ.—ತಾವೇನೋ ಇಲ್ಲ ಹೇಳುತ್ತೀರಿ. ನಾನೇ ಎದುರಿಗಿದ್ದೆ. ನಮ್ಮ ಎದುರಿಗಿದ್ದವರು ರಿಪೋರ್ಟ್ ಕಳುಹಿಸುವುದರಲ್ಲಿ ಲಾರಿ ಛಾರ್ಜ್ ಆಗಿಲ್ಲವೆಂದರೆ ಏನು ಹೇಳೋಣ? ಲಾರಿ ಛಾರ್ಜ್ ಆದಾಗಲೆಲ್ಲಾ ಪೋಲೀಸಿನವರು ತಮಗೆ ವರದಿ ಕಳುಹಿಸುತ್ತಾರೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ಕಳುಹಿಸುತ್ತಾರೆ.

ಶ್ರೀ ಎಸ್. ಗೋಪಾಲಗೌಡ.—ಹಾಗಾದರೆ, ಈಗ ಹೊಡೆದಿರತಕ್ಕ ಸಂದರ್ಭಗಳಲ್ಲೆಲ್ಲಾ ಪೋಲೀಸಿನವರು ಯಾವ ಅಧಿಕಾರವೂ ಇಲ್ಲದೆ ಸತ್ಯಾಗ್ರಹಿಗಳನ್ನು ಲಾರಿ

ಗಳಿಂದ ಹೊಡೆದರೆಂದು ಈ ಮಾನ್ಯ ಸಭೆಯು ತಿಳಿದು ಕೊಳ್ಳಬಹುದೇ ?

ಶ್ರೀ ಎಚ್. ಸಿದ್ದವೀರಪ್ಪ.—ಹೊಡೆದಿರುವುದನ್ನೇ ನಾನು ಒಪ್ಪಿಕೊಂಡಿಲ್ಲ.

ಆಮೇಲೆ, ಪೋಲೀಸಿನವರು ಸೌಜನ್ಯದಿಂದ ವರ್ತಿಸ ಬೇಕೆಂದು ಹೇಳಿದ್ದಾರೆ. ಅದು ಒಪ್ಪತಕ್ಕ ವಾದವೇ. ಅದರಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಆ ರೀತಿ ನಡೆದು ಕೊಳ್ಳುವುದು ಒಳ್ಳೆಯದು. ಅದೇ ಪ್ರಕಾರ ನಡೆದುಕೊಳ್ಳಬೇಕೆಂದು ಎಲ್ಲರಿಗೂ ಸರಿಯಾಗಿ ಸೂಚನೆ ಯನ್ನು ಕೊಡಲಾಗುತ್ತದೆ.

ಬಾಕಿಯ ಅಂಶಗಳು ತಾವು ಹೇಳಿರುವುದೆಲ್ಲಾ ನನಗೆ ಹೊಸವು. ಅವೆಲ್ಲಾ ನನಗೆ news ಆಗಿವೆ. ಎದುರು ಪಕ್ಷದವರ membershipನ್ನು ಶೇಖರ ಮಾಡಿ ದ್ದಾರೆ, ಅವರಿಗೆ ಬರುವ ಕಾಗದ ಪತ್ರಗಳಿಗೆಲ್ಲಾ censorship ನಡೆಯುತ್ತಿದೆ ಎಂದೆಲ್ಲಾ ಹೇಳಿರುವು ದಕ್ಕೆ, ಯಾವ ಅಂಕಿ ಅಂಶಗಳ ಆಧಾರವಿದೆಯೋ ಗೊತ್ತಿಲ್ಲ. ಸರ್ಕಾರದವರಿಗೆ ತಿಳಿದಿರುವ ಮಟ್ಟಿಗೆ ಹೇಳುವುದಾದರೆ ತಾವು ಹೇಳಿರುವುದು ನಿರಾಧಾರ ವಾದದ್ದು ಎಂದು ಹೇಳದೆವಿಧಿಯಿಲ್ಲ.

ಶ್ರೀ ಎನ್. ಗೋಪಾಲಗೌಡ.—ನಿರಾಧಾರವಾದದ್ದು ಎಂದು ತಾವು ಹೇಳುವುದನ್ನು ನಾನು refute ಮಾಡುತ್ತೇನೆ.

ಶ್ರೀ ಎಚ್. ಸಿದ್ದವೀರಪ್ಪ.—ಅದು ಆಧಾರ ರಹಿತ ವಾದದ್ದು.

ಶ್ರೀಮಾನ್ ಕರಿಯಪ್ಪನವರು ಕೆಲವು ಉಪಯುಕ್ತ ವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಪೋಲೀಸಿನ ವರಿಗೆ ತರಬೇತು ಕೊಡುವ ವಿಚಾರದಲ್ಲಿ ಯಾವ ಯಾವ ವಿಷಯಗಳಲ್ಲಿ ಟ್ರೈನಿಂಗ್ ಕೊಡಬೇಕೆಂಬುದನ್ನು ಸಲಹೆ ಮಾಡಿದ್ದಾರೋ, ಆ ಸಲಹೆ ಸೂಕ್ತವಾಗಿದೆ. ಅದನ್ನು ಆಲೋಚನೆ ಮಾಡಿ ಏನೇನು ಮಾಡಬೇಕೆಂದು ಹೇಳು ತ್ತೇನೆ. ಟ್ರೈನಿಂಗ್ ನಲ್ಲಿ curriculumನ್ನು ಬದ ಲಾವಣೆ ಮಾಡಬೇಕೆಂದು ಕಾಣುತ್ತದೆ. ಅದನ್ನು ಯೋಚನೆ ಮಾಡುತ್ತೇವೆ.

ಶ್ರೀಮಾನ್ ಶಿವಪ್ಪನವರು ಅವರದೇ ಆದ ಒಂದು ವಿಚಿತ್ರ ವಾದವನ್ನು ಸಭೆಯ ಮುಂದಿಟ್ಟರು.

ಶ್ರೀ ಕೆ. ಪುಟ್ಟಸ್ವಾಮಿ (ಶ್ರೀರಂಗಪಟ್ಟಣ).—ವಿಚಿತ್ರ ವಾದ ಎಂದು ಹೇಳುವುದು ಸರಿಯಲ್ಲ.

ಶ್ರೀ ಎಚ್. ಸಿದ್ದವೀರಪ್ಪ.—ಅವರ ವಾದವೆಲ್ಲಾ 'ಅದು' 'ಇದು' ಎಂಬುದರಲ್ಲಿ ಅಯಿತೇ ಹೊರತು ಯಾವುದು ಎಂಬುದೇ ನಿರ್ಧಾರವಾಗಿ ಹೊರಬೀಳಲಿಲ್ಲ.

ಶ್ರೀಮಾನ್ ಮಾದಯ್ಯನವರು ಹರಿಜನರು ಮತ್ತು ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ಹೆಚ್ಚಿಗೆ ಪ್ರೋತ್ಸಾಹ ಕೊಡತಕ್ಕ ವಿಚಾರದಲ್ಲಿ ಸರ್ಕಾರದವರ ಮುಂದೆ ಕೆಲವು ಅಂಶಗಳನ್ನಿಟ್ಟಿದ್ದಾರೆ. ಅವೆಲ್ಲಾ ಯೋಚನೆ ಮಾಡ ತಕ್ಕ ಅಂಶ. ಈಗ ಪೋಲೀಸ್ ಇಲಾಖೆಯಲ್ಲಿ ಅವರ ಪಂಗಡದವರಾಗಿ ಒಬ್ಬ ಅಸಿಸ್ಟೆಂಟ್ ಸೂಪ ರಿಂಟೆಂಡೆಂಟರು, ಇಬ್ಬರು ಪೋಲೀಸ್ ಇನ್‌ಸ್ಪೆಕ್ಟರು, 8 ಸಬ್ ಇನ್‌ಸ್ಪೆಕ್ಟರುಗಳು, ದಫೇದಾರ್ ಮತ್ತು ಪೋಲೀಸ್ ಕಾನ್‌ಸ್ಟೇಬಲ್‌ಗಳು 788 ಜನ ಇದ್ದಾರೆ. ಅವರ ವಿಚಾರದಲ್ಲಿ ಯಾವ ರೀತಿ ಕಾರ್ಯ ಕ್ರಮವನ್ನು ಕೈಕೊಳ್ಳಬೇಕೆಂಬುದನ್ನು ಆಲೋಚನೆ ಮಾಡಬೇಕಾಗಿದೆ. ಮುಖ್ಯವಾಗಿ ಈಗ ಕಷ್ಟ ಬಂದಿರತಕ್ಕದು ಈಗಾಗಲೇ ಸರ್ವಿಸ್ಸಿನಲ್ಲಿರುವವರ ವಿಚಾರದಲ್ಲಿ. ಹೊಸದಾಗಿ ರಿಕ್ರೂಟ್ ಮಾಡುವ ವಿಚಾರದಲ್ಲಿ ಯಾವ ಬಾಧಕವೂ ಇಲ್ಲ. ಆದರೆ ಪ್ರಮೋಷನ್ ಕೊಡುವಾಗ ಸೀನಿಯಾರಿಟಿ ಯನ್ನು ಬದಲುಮಾಡಿ ಪ್ರಮೋಷನ್ ಕೊಡತಕ್ಕದ್ದು ಸರಿಯೇ ಎಂಬುದನ್ನು ಆಲೋಚಿಸಬೇಕಾಗಿದೆ. ಈ ವಿಷಯದಲ್ಲಿ ತಾಳ್ಮೆಯಿಂದ ಯೋಚನೆ ಮಾಡಿ ಕಾರ್ಯ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀಮಾನ್ ರಾಜಯ್ಯನವರು ಪೋಲೀಸಿನವರ ವಿಚಾರದಲ್ಲಿ ಸಹಾನುಭೂತಿಯಿಂದ ಅವರ ಸಂಬಳ ಸಾರಿಗೆಗಳನ್ನು ಹೆಚ್ಚಿಗೆ ಮಾಡಬೇಕೆಂದು ಹೇಳಿ ಉಪ ಯುಕ್ತವಾದ ಸಲಹೆ ಮಾಡಿದ್ದಾರೆ. ಅವರ ಸಂಬಳ ವನ್ನು ಜಾಸ್ತಿ ಮಾಡಬೇಕು, ಹಾಗೆಯೇ ಮಿಕ್ಕ ಕೆಳ ದರ್ಜೆಯ ನೌಕರರ ಸಂಬಳ ಸಾರಿಗೆಗಳನ್ನೂ ಹೆಚ್ಚಿಗೆ ಮಾಡಬೇಕು ಎಂಬುದರ ವಿಷಯದಲ್ಲಿ ಈ ಮಾನ್ಯ ಸಭೆಗೂ ಸರ್ಕಾರದವರಿಗೂ ಭಿನ್ನಾಭಿಪ್ರಾಯವಿಲ್ಲ. ಏನಿದ್ದರೂ ಹಣಕಾಸಿನ ಪರಿಸ್ಥಿತಿ ಎದುರಿಗೆ ನಿಲ್ಲುವುದರಿಂದ ತೊಂದರೆಯಾಗುತ್ತಿದೆ. ಉದಾಹರಣೆಗೆ ಹೇಳುವು ದಾದರೆ, ಒಬ್ಬ constableಗೆ ಒಂದು ರೂಪಾಯಿ ಜಾಸ್ತಿ ಮಾಡಿದರೆ ಒಟ್ಟು 1,49,000 ರೂಪಾಯಿಗಳು ಜಾಸ್ತಿಯಾಗುತ್ತವೆ. ಒಂದು ರೂಪಾಯಿಗೆ ಬದಲು 5 ರೂಪಾಯಿ ಮಾಡಿದರೆ, 10 ರೂಪಾಯಿ ಜಾಸ್ತಿ ಮಾಡಿದರೆ, ದಾಮಾಷಾ ಎಷ್ಟಾಗುತ್ತದೆಂಬದನ್ನು ನೀವೇ ನೋಡಿಕೊಳ್ಳಬಹುದು. ಆದ್ದರಿಂದ ಸಂಬಳ ಸಾರಿಗೆಗಳ ವಿಚಾರ ಬಹಳ ದೊಡ್ಡ ಪ್ರಶ್ನೆ. ಆದರೂ, ಈ ನಾಗೆಜೆಟೆಡ್ ಅಧಿಕಾರಿಗಳಿಗೆ ಸಂಬಂಧಪಟ್ಟ ಪ್ರಶ್ನೆಯನ್ನು ಅದರಲ್ಲೂ ಪೋಲೀಸ್ ಇಲಾಖೆಯವರಿಗೆ ಸಂಬಂಧಪಟ್ಟ ಪ್ರಶ್ನೆಯನ್ನು ಅತಿ ಶೀಘ್ರವಾಗಿ ನೋಡಬೇಕಾದ ಕಾಲ ಬಂದಿದೆ. ಇದನ್ನು ಸರ್ಕಾರ ದವರು ತೀವ್ರವಾಗಿ ಆಲೋಚನೆ ಮಾಡುತ್ತಿದ್ದಾರೆಂದು ಮಾತ್ರ ನಾನು ಅರಿಕೆ ಮಾಡಿಕೊಳ್ಳುತ್ತೇನೆ. ಶ್ರೀಮಾನ್ ಹುಚ್ಚೇಗೌಡರೂ ಸಹ ಪದೇ ಪದೇ ಹೇಳುತ್ತಿದ್ದಾರೆ. ಪೋಲೀಸ್ ಅಧಿಕಾರಿಗಳ ವಿಚಾರದಲ್ಲಿ, ಅದರಲ್ಲೂ, ಕೆಳದರ್ಜೆಯವರ ವಿಚಾರವನ್ನು ಸಹಾನುಭೂತಿಯಿಂದ ನೋಡಬೇಕೆಂದು ಹೇಳಿದ್ದಾರೆ. ಮನಸ್ಸಿನಲ್ಲಿರುವು ದನ್ನು ಕಾರ್ಯಗತ ಮಾಡುವ ಕಾಲ ಅತಿ ಶೀಘ್ರದಲ್ಲೇ ಬರಲಿ ಎಂದು ನಾನೂ ಕೂಡ ಹಾರೈಸುತ್ತೇನೆ. ಆ ಸನ್ನಿವೇಶ ಒದಗಲೆಂಬುದೇ ನನ್ನ ಆಶಯವಾಗಿದೆ.

ಶ್ರೀ ಬಿ. ಹುಚ್ಚೇಗೌಡ.—ಈ ಹತ್ತು ವರ್ಷಗಳಲ್ಲಿ ಒಂದು ಕೋಟಿ ರೂಪಾಯಿ ಖರ್ಚು ಜಾಸ್ತಿ ಮಾಡಿದ್ದೀರಲ್ಲಾ, ಏನು ಮಾಡಿದ್ದೀರಿ ?

ಶ್ರೀ ಎಚ್. ಸಿದ್ದವೀರಪ್ಪ.—90 ಲಕ್ಷ ರೂಪಾಯಿ ಗಳಿಗೂ ಲೆಕ್ಕ ಕೊಟ್ಟಿದ್ದೇನಲ್ಲಾ. ತುಟ್ಟಿ ಭತ್ಯ ಎಲ್ಲಾ ಇದರಲ್ಲಿ ಸೇರುತ್ತದೆ.

ಶ್ರೀಮಾನ್ ಶ್ರೀನಿವಾಸಯ್ಯಂಗಾರ್‌ರವರು ಕೆಲವು ಉಪಯುಕ್ತವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಅವು ಮುಖ್ಯವಾದುವೆಂದು ನಾನು ಭಾವಿಸುತ್ತೇನೆ. ಪೋಲೀಸ್ ಆಕ್ಟ್ ಬಹಳ ಹಿಂದಿನ ಕಾಲದ್ದು. ಅದನ್ನು ಈಗಿನ ಸನ್ನಿವೇಶಕ್ಕೆ, ಈಗಿನ ಸಮಾಜದ ಪರಿಸ್ಥಿತಿಗನು ಸಾರವಾಗಿ ಪರಿವರ್ತನೆ ಮಾಡಿ ಹೊಸ ಆಕ್ಟ್‌ನ್ನು ತರಬೇಕೆಂಬುದು ಸರ್ಕಾರದವರ ಪರ್ಯಾಲೋಚನೆಯ ಲ್ಲಿದೆ. ಇದು ನಮ್ಮ ತೀವ್ರ ಪರ್ಯಾಲೋಚನೆಯಲ್ಲಿದೆ. ಈ ಸಂದರ್ಭದಲ್ಲಿ ತಾವು ಹೇಳುವ ಮಾತನ್ನು ಸರ್ಕಾರ ದವರು ಗಮನದಲ್ಲಿಡುತ್ತಾರೆಂದು ಹೇಳುತ್ತೇನೆ.

ಈಗಾಗಲೇ ನಮ್ಮ ಲ್ಲರತಕ್ಕ ರೂಲ್ಸ್ ಮತ್ತು ನಿಬಂಧನೆಗಳನ್ನು ಕೋಡೀಕೃತ್ಯಮಾಡಿ ಮುಂದೆ ಸಭೆಯ ಮುಂದೆ ತರುವುದಕ್ಕೆ ಅನುಕೂಲವಾಗುವಂತೆ ಮಾಡ ಲೆಂದು ಹೇಳಿ ಒಬ್ಬರು ಸೀನಿಯರ್ ಡಿ.ಎಸ್.ಪಿ. ಯವ ರನ್ನು ನೇಮಿಸಿದ್ದೇವೆ. ಅವರು ಸ್ವಲ್ಪದರಲ್ಲೇ ಕಾರ್ಯ ಕ್ರಮವನ್ನು ತೆಗೆದುಕೊಳ್ಳುತ್ತಾರೆ.

ಶ್ರೀಮಾನ್ ಮಾನಿಸ್ವಾಮಯ್ಯನವರ ಯಶವಂತ ಪುರದ ಪೋಲೀಸ್ ಸ್ಟೇಷನ್ ವಿಚಾರ ಹೇಳಿದರು ಅದನ್ನು ಯೋಚನೆ ಮಾಡುತ್ತೇವೆ.

(ಶ್ರೀ ಎಚ್. ಸಿದ್ದವೀರಪ್ಪ.)

ಶ್ರೀಮಾ ಪಾಪಣ್ಣನವರು ಪೋಲೀಸ್‌ನವರಿಗೆ ಮನೆಗಳನ್ನು ಕಟ್ಟಿಸಿಕೊಡಬೇಕೆಂದು ಹೇಳಿದರು. ಹಾಲ 7,730 ಜನ ಕೆಳದರ್ಜೆಯ ನೌಕರರಿಗೆ ಮನೆಗಳಿಲ್ಲ. ಅವರಿಗೆ ಮನೆಗಳು ಬೇಕು. ಯಾವರೀತಿ ಅದಕ್ಕೆ ಏರ್ಪಾಡು ಮಾಡಬೇಕೆಂಬುದನ್ನು ಯೋಚನೆ ಮಾಡುತ್ತಿದ್ದೇವೆ.

ಶ್ರೀ ಜಿ. ದುಗ್ಗಪ್ಪನವರು ಯಾವನೋ ಒಬ್ಬ ಪೋಲೀಸ್ ದಫೇದಾರನು ನಾನಾಗೆಜೆಟೆಡ್ ಪತ್ರಿಕೆಯನ್ನು ಓದುತ್ತಿದ್ದ ಕಾರಣದಮೇಲೆ ಅವನನ್ನು Dismiss ಮಾಡಿದ್ದಾರೆಂದು ಹೇಳಿದರು. ಅವರು ಹೇಳಿದ್ದು ಸರಿಯಾಗಿರಲಾರದು ಎಂದು ನನ್ನ ಭಾವನೆ.

ಶ್ರೀ ಜಿ. ದುಗ್ಗಪ್ಪ.—ಸರಿಯಾಗಿದ್ದರೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಎಚ್. ಸಿದ್ದವೀರಪ್ಪ.—ಸರಿಯಾಗಿರಲಾರದೆಂದೇ ನನ್ನ ಭಾವನೆ. ಈಗಲೂ ನೋಡಿ ಕಾರ್ಯಕ್ರಮ ತೆಗೆದುಕೊಳ್ಳುವ ಯೋಚನೆ ಮಾಡುತ್ತೇನೆ.

ಶ್ರೀಮಾ ಸಿ ಟಿ. ಹನುಮಂತಯ್ಯನವರು ಪ್ರಾಣಿವಧೆಯ ವಿಚಾರ ಹೇಳಿದರು, ಪ್ರಾಣಿವಧೆ ಹೆಚ್ಚಾಗುತ್ತಿದೆಯೆಂದು ಹಲವರು ಹೇಳಿದರು. ಹೆಚ್ಚಾಗುತ್ತಿಲ್ಲ: ಎಲ್ಲೆಲ್ಲಿ ನಮ್ಮ ಗಮನಕ್ಕೆ ಬಂದಿದೆಯೋ ತಕ್ಷಣ ಕಾರ್ಯಕ್ರಮ ತೆಗೆದುಕೊಂಡು ನಿಲ್ಲಿಸಿದ್ದೇವೆ. ತಮಗೆ ಬೇಕಾದರೆ 1948-49ನೆಯ ಇಸವಿಯಿಂದ ಅಂಕಿ ಅಂಶಗಳನ್ನು ತೆಗೆದು ಹೇಳಬಲ್ಲೆ. ವರ್ಷ್‌ವರ್ಷ್‌ಕೇಸುಗಳನ್ನು ಹೆಚ್ಚಿಗೆ ಹಾಕುತ್ತಿರುವುದನ್ನು ನೋಡಬಹುದು. ಹೋದ ವರ್ಷ 29 ಕೇಸುಗಳನ್ನು ಹಾಕಿದ್ದೇವೆ. ಈ ವರ್ಷ 28 ಕೇಸುಗಳನ್ನು ಹಾಕಿದೆ ೀವೆ. ಪ್ರಾಣಿವಧೆಯನ್ನು ನಿಲ್ಲಿಸಬೇಕೆಂದು ಅಧಿಕಾರಿಗಳ ಗಮನಕ್ಕೆ ತರುತ್ತಲೇ ಇದ್ದೇವೆ. ಇನ್ನೊಂದುಸಾರಿ ಅಧಿಕಾರಿಗಳಿಗೆ ಈ ಬಗ್ಗೆ ತೀವ್ರವಾದ ಎಚ್ಚರಿಕೆ ಕೊಟ್ಟು ನಿಲ್ಲಿಸಬೇಕೆಂದು ಒತ್ತಾಯವಾಗಿ ಹೇಳುತ್ತೇವೆ.

ಶ್ರೀ ಬಿ. ಹುಚ್ಚೇಗೌಡ.—Sub-Inspectorಗಳ Time Scale ಮಂಜೂರಾಗಿದ್ದರೂ ಇನ್ನೂ effect ಗೇಕೆ ಕೊಟ್ಟಿಲ್ಲ?

ಶ್ರೀ ಎಚ್. ಸಿದ್ದವೀರಪ್ಪ.—ಇನ್ನೊಂದು ಅಂಶವನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ಸ್ಪೆಷ್ಯಲ್ ಪೋಲೀಸ್ ಪಡೆಯನ್ನು ಏರ್ಪಾಡು ಮಾಡಬೇಕೆಂಬ ಬಗ್ಗೆ ಸಲಹೆಗಳನ್ನು ಮಾಡಿದ್ದಾರೆ. ಆದರೆ ಕೆಲ ಕೆಲವು ಕಡೆಗಳಲ್ಲಿ ಈಗಾಗಲೇ ಈ ಸ್ಪೆಷ್ಯಲ್ ಪೋಲೀಸ್ ಸಿಬ್ಬಂದಿಯ ಏರ್ಪಾಡು ಆಗಿದೆ. ಈ ವಿಷಯ ಈಗಾಗಲೇ ಈ ಸಭೆಯ ಮುಂದೆ ಬಂದು ಚರ್ಚೆಯಾಗಿದೆ. ಇದಕ್ಕೆ ಯಾವರೀತಿ ಕೈಗೊಳ್ಳಬೇಕೆಂಬುದರ ಸೂಕ್ಷ್ಮಾಂಶಗಳನ್ನು ನಾವು ಪರ್ಯಾಲೋಚನೆ ಮಾಡುತ್ತೇವೆ. ಮಾನ್ಯ ಸಭೆಯವರು ಇನ್ನೂ ಅನೇಕ ವಿಚಾರಗಳನ್ನು ಸರ್ಕಾರದವರ ಗಮನಕ್ಕೆ ತಂದಿದ್ದಾರೆ. ಅವುಗಳಿಗೆ ತಕ್ಷಣ ಕಾಲಾವಕಾಶವಿಲ್ಲದೆ ಉತ್ತರ ಕೊಡಲಕ್ಕಾಗದಿದ್ದರೂ ಆ ಸಲಹೆಗಳನ್ನೆಲ್ಲಾ ನಾನು ಮನಸ್ಸಿನಲ್ಲಿಟ್ಟುಕೊಂಡಿದ್ದೇನೆ. ಇನ್ನೂ ಅನೇಕ ಯೋಚನೆಗಳನ್ನು ಮಾಡತಕ್ಕ ಅಲೋಚನೆಗಳಿವೆ. ಅವುಗಳ ಬಗ್ಗೆ ಕೂಲಂಕಷವಾಗಿ ಎಲ್ಲಾ ವಿಚಾರಮಾಡಿ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತೇನೆಂದು ನಾನು ತಮಗೆ ಭರವಸೆ ಕೊಡುತ್ತೇನೆ. ಈ ವಿಷಯಕ್ಕೆ ತಾವು ತಮ್ಮ ಅನುಮತಿ ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

Mr. SPEAKER.—The question is:

"That a sum not exceeding Rs. 1,23,91,997 be granted to the Government to defray the charges which will come in course of payment during the year ending 31st day of March 1956, in respect of 'Police'."

The motion was adopted.

DEMAND NO. 17—SCIENTIFIC DEPARTMENTS.

36. SCIENTIFIC DEPARTMENTS.

Mr. SPEAKER.—Demand No. 17. Motion moved:

"That a sum not exceeding Rs. 8,55,000 be granted to the Government to defray the charges which will come in course of payment during the year ending 31st day of March 1956, in respect of 'Scientific Departments'."

You have utilised more than the prescribed time for the previous Demand. Therefore we have to cut short the time for at least this Demand. The next Demand also is very important. Sri G. Sivappa.

ಶ್ರೀ ಜಿ. ಶಿವಪ್ಪ (ಹೊಳಲ್ಕೆರೆ).—ಸ್ವಾಮಿ, ಇದರ ವಿಚಾರದಲ್ಲಿ ನಾನು ಹೆಚ್ಚಿಗೆ ಭಾಷಣ ಮಾಡುವುದಕ್ಕೆ ಹೋಗುವುದಿಲ್ಲ. ನಾನು ಮುಖ್ಯವಾಗಿ ಒಂದು ಅಂಶವನ್ನು ಸರ್ಕಾರದವರ ಗಮನಕ್ಕೆ ತರಬೇಕಾಗಿದೆ. ಈ ವಿಚಾರವನ್ನು ನಾವು ಈಗಾಗಲೇ ಎಷ್ಟೋಸಾರಿ ಹೇಳಿದ್ದೇವೆ. ಆದಾಗ್ಯೂ ಸರ್ಕಾರದವರಿಗೆ ನಾವು ಹೇಳಿದ್ದನ್ನು ಅರ್ಥಮಾಡಿಕೊಳ್ಳುವುದಕ್ಕೂ ಕೂಡ ಆಗಿಲ್ಲ ಅನ್ನುವುದನ್ನು ನೋಡಿದರೆ ಬಹಳ ಶೋಚನೀಯವಾಗುತ್ತಿದೆ.

Mr. SPEAKER.—It does not come under this Demand.

Exploratory work for Sulphur ore at Ingaladhalu.

*ಶ್ರೀ ಜಿ. ಶಿವಪ್ಪ.—ಈಗ ಈ ಗಂಧಕದ ಅದಿರು ಚಿತ್ರದುರ್ಗ ಜಿಲ್ಲೆಯಲ್ಲಿ ಹೇರಳವಾಗಿ ಸಿಕ್ಕುತ್ತಿದೆ ಅನ್ನುವುದು ಸ್ಪಷ್ಟವಾಗಿ ಗೊತ್ತಾಗಿದೆ. ಆದರೆ ಅದರ ಪ್ರಯೋಜನವೇನೆಂಬುದನ್ನು ವರ್ಣನೆ ಮಾಡಬೇಕಾದದ್ದು ಅನವಶ್ಯಕ. ಇಡೀ ಇಂಡಿಯಾ ದೇಶದಲ್ಲೇ ಈ ವನ್ನು ಮತ್ತೊಂದು ಕಡೆ ದೊರೆಯುವುದಿಲ್ಲ. ಇಂಥ ಒಂದು ಅಮೂಲ್ಯವಾದ ಅದಿರನ್ನು ಭಾರತಮಾತೆ ನಮಗೆ ಕರುಣಿಸಿದ್ದಾಳೆ. ಇದು ಚರಿತಾರ್ಹವಾದಂಥ ಚಿತ್ರದುರ್ಗ ಜಿಲ್ಲೆಯಲ್ಲಿರುವುದು ನಮ್ಮ ಒಂದು ದೊಡ್ಡ ಸೌಭಾಗ್ಯ. ನಾವೆಲ್ಲರೂ ಹೆಮ್ಮೆ ಪಟ್ಟುಕೊಂಡು ಹೇಳುವಂಥ ವಿಚಾರ ಇದು. ಇದರಿಂದ ವರ್ಷಕ್ಕೆ ಎರಡು-ಎರಡೂವರೆ ಕೋಟಿ ರೂಪಾಯಿಗಳ ವರಮಾನವಿದೆ.

1951-52 ರಲ್ಲಿ 2·5 ಕೋಟಿ ರೂಪಾಯಿಗಳಷ್ಟು ಗಂಧಕವನ್ನು ತೆಗೆಯಲಾಗಿದೆ. ನಾನಾ ಕಡೆಗಳವರು ಇದನ್ನು ವ್ಯವಸಾಯದ ಬಗ್ಗೆ ಗೊಬ್ಬರವನ್ನು ತಯಾರಿಸುವುದಕ್ಕೂ ಮತ್ತು ಇತರ ಕಾರ್ಖಾನೆ ಕೆಲಸಗಳಿಗೂ ತರಿಸಿಕೊಳ್ಳುತ್ತಿದ್ದಾರೆ. ಸಿಂಧ್ರಿ ಕಂಪೆನಿಯವರಿಗೂ ಮತ್ತು ಇತರ ಕೈಗಾರಿಕೆ ಕಾರ್ಖಾನೆಗಳವರಿಗೂ ಇದರ ಅವಶ್ಯಕತೆ ಹೆಚ್ಚಾಗಿರುತ್ತದೆ. ಈ ಗಣಿಯನ್ನು ಶ್ರೀ ಭೀಮಪ್ಪನಾಯಕರ ಸಮಿತಿ ಪರಿಶೀಲನೆ ಮಾಡಿದೆ. ಇಷ್ಟೇ ಅಲ್ಲದೆ ನಾನೂ, ಶ್ರೀ ಎ. ಭೀಮಪ್ಪನಾಯಕರೂ ಶ್ರೀ ಜಿ. ದಗ್ಗಪ್ಪನವರೂ ಅಲ್ಲಿಗೆ ಹೋಗಿ ನೋಡಿದ್ದೇವೆ. ಅಲ್ಲಿ ಬಹಳ ಅತ್ಯುತ್ತಮವಾದಂಥ ಅದಿರು ಸಿಕ್ಕುತ್ತದೆಂದು ಗೊತ್ತಾಗಿದೆ. ಇಂಥ ವನ್ನು ಇಡೀ ಹಿಂದೂಸ್ಥಾನದಲ್ಲೇ ಎಲ್ಲಿಯೂ ಸಿಕ್ಕುವುದಿಲ್ಲ. ಇಲ್ಲಿಗೆ 8-10 ವರ್ಷಗಳಿಂದಲೂ ಅದನ್ನಿನ್ನೂ ಸರಿಯಾಗಿ ಬಡಾವಣೆ ಮಾಡಿಲ್ಲ. ಈಗ ಅಲ್ಲಿ ಡೈಮಂಡ್ ಡ್ರಿಲ್ಲಿಂಗ್ ವರ್ಕ್ ಕೂಡ ಮಾಡುತ್ತಿದ್ದಾರೆ. ಈ ವಿಚಾರದಲ್ಲಿ ಸರ್ಕಾರದವರು ಸರಿಯಾದ ಕಾರ್ಯಕ್ರಮಗಳನ್ನು ಕೂಡಲೆ ಕೈಗೊಳ್ಳಬೇಕೆಂದು ನಾನು ವಿನಯಪೂರ್ವಕವಾಗಿ ಹೇಳುತ್ತೇನೆ.

Cardamom Research Institution at Mudigere.

*ಶ್ರೀ ಜಿ. ಪುಟ್ಟಸ್ವಾಮಿ (ಚಿಕ್ಕಮಗಳೂರು—ಮೂಡಿಗೆರೆ—ಅನುಸೂಚಿತ ಜಾತಿಗಳು).—ಸ್ವಾಮಿ, ಮೂಡಿಗೆರೆಯಲ್ಲಿ ಒಂದು ಏಲಕ್ಕಿ ಸಂಶೋಧನಾಲಯವನ್ನು ಮಂಜೂರು ಮಾಡಬೇಕೆಂಬ ಬಗ್ಗೆ ಬಹಳ ದಿವಸಗಳಿಂದಲೂ ಸರ್ಕಾರಕ್ಕೆ ಮನವಿಗಳು ಬರುತ್ತಿವೆ. ಈಗ ಆ ಮೂಡಿಗೆರೆ ಪ್ರಾಂತ್ಯದಲ್ಲಂತೂ ಈ ಏಲಕ್ಕಿ ಜಮೀನಿನ ಹಿಡುವಳಿದಾರರು ಬಹಳ ಜಾಸ್ತಿಯಾಗಿದ್ದಾರೆ. ಚಿಕ್ಕಮಗಳೂರು ತಾಲ್ಲೂಕಿನಲ್ಲೂ ಬಹಳವಾಗಿದ್ದಾರೆ. ಆದರೆ ಇತ್ತೀಚೆಗೆ ಏಲಕ್ಕಿ ಬೆಳೆಗೆ ಏನೋ ಒಂದು ರೋಗ ತಗುಲಿದೆ. ಅದು ಎಂಥ ರೋಗ ಏನು ಎಂಬ ವಿಷಯವು ಯಾರಿಗೂ ಕಂಡುಹಿಡಿಯುವುದಕ್ಕೆ ಸಾಧ್ಯವಾಗಿಲ್ಲ. ಅಂಥ ಒಂದು ರೋಗ ಈಗ ಆ ಏಲಕ್ಕಿ ಬೆಳೆಗೆ ತಗುಲಿ ಆ ಬೆಳೆ ಬಹಳ ಕಮ್ಮಿಯಾಗುತ್ತಾ ಬಂದಿದೆ. ಏಲಕ್ಕಿ ಬೆಳೆಯಲ್ಲಿ ಸಾವಿರಾರು ಮಣ ಕಡಮೆಯಾಗಿದೆ. ಹೀಗೆಯೇ ಇದರ ಉತ್ಪತ್ತಿ ದಿನೇ ದಿನೇ ಕಡಿಮೆಯಾಗುತ್ತ ಬರುತ್ತಿದೆ. ಇದರಿಂದ ಮಲೆನಾಡಿನ ರೈತರು ತುಂಬ ಹೀನಸ್ಥಿತಿಗೆ ಬರುತ್ತಿದ್ದಾರೆ. ಮಲೆನಾಡಿನಲ್ಲಿ ರೈತರು ದಟ್ಟ ದಟ್ಟವಾದ ಕಾಡಿನ ಮಧ್ಯದಲ್ಲೇ ಮನೆಗಳನ್ನು ಕಟ್ಟಿಕೊಂಡು, ಒಂದೊಂದು ಮನೆಯನ್ನೇ ಒಂದೊಂದು ಊರಿನೋಪಾದಿಯಲ್ಲಿ ಭಾವಿಸಿಕೊಂಡು ತನ್ನ ಜಮೀನು ವ್ಯವಸಾಯವನ್ನು ಮಾಡಿಕೊಂಡು ಇಷ್ಟು ಕಷ್ಟಗಳಿದ್ದಾಗ್ಯೂ ಜೀವನ ನಡೆಸಿಕೊಂಡು ಹೋಗುತ್ತಿದ್ದಾನೆ. ಅಲ್ಲಿ ಅವನಿಗೆ ಇನ್ನೊಬ್ಬರು ಸಹಾಯ ಮಾಡತಕ್ಕವರಿಲ್ಲ. ಅಲ್ಲಿ ಇದು ಏನಾ ಇನ್ನಾವ ಬೆಳೆಯನ್ನೂ ಬೆಳೆಸಲು ಅವಕಾಶವಿಲ್ಲ. ಅಲ್ಲಿ ಈ ಏಲಕ್ಕಿಯನ್ನು ಬೆಳೆಸಲು ಬಹಳ ಹೆಚ್ಚಿನ ಜಮೀನೂ ಇದೆ. ಆದರೆ ಜನರಿಗೆ ಅಲ್ಲಿ ಇಂಥ ತೊಂದರೆಗಳು ಬಂದಿರುತ್ತವೆ. ಈ ಬೆಳೆಯೇನಾದರೂ ಸಂಪೂರ್ಣವಾಗಿ ಹೋಗಿಬಿಟ್ಟರೆ ಆ ರೈತರಿಗೆ ಮತ್ತೊಂದು ಆಸ್ತಿ ಇಲ್ಲದಂತಾಗುತ್ತದೆ. ಆದುದರಿಂದ ಇದು ಬಹಳ ಅಗತ್ಯವಾದಂಥ ವಿಚಾರ. ಈ ಸಂಶೋಧನಾಲಯದ ಬಗ್ಗೆ ನಮ್ಮ ಸರ್ಕಾರ ಕೇಂದ್ರ ಸರ್ಕಾರದೊಡನೆ ವ್ಯವಹಾರ ನಡೆಸಿ ಅವರಿಂದಲೂ ಸಹಾಯ ಪಡೆದು ಇದನ್ನು ಜಾಗ್ರತೆಯಾಗಿ ಕೈಗೊಳ್ಳಬೇಕೆಂದು ನಾನು ಸರ್ಕಾರದವರಿಗೆ ಒತ್ತಾಯಮಾಡುತ್ತೇನೆ.

Mineral Development Board.

* Sri S. SRINIVASA IYENGAR (T. Narsipur).—Sir, the Mineral Development Committee have submitted their report to Government and one of their important suggestions. . . .

Sri J. MOHAMED IMAM.—Of which you are also a member.

Sri S. SRINIVASA IYENGAR.—One of the important suggestions is the constitution of a Board. In this Department, the Bureau of Mines is doing very good work. They are undertaking mining at State level. They have very good areas and they have good deposits. The Bureau of Mines must be in a position to market it quickly. If that is done, the Government will realise a good lot of money, depending upon the market value. As it stands, every sale is to be approved by the Government. It involves delay in transmission and sanction. They can avoid the delay by constituting the Board and delegating some powers to them so that they can act in a businesslike manner quickly. I do not say the Government is not doing it quickly. What I say is, the Bureau of Mines could discharge the work much more efficiently and quickly and they could react to the market quickly. We have detailed the advantages of constituting such a Board in our report and I request the Government to consider this suggestion.

Diamond drilling.

Secondly, the latest method of proving the existence of an ore is by diamond drilling. In Central Provinces, diamond drilling is being used extensively. We can definitely know the existence of the ore underground. Mysore State is quite rich and a detailed survey has not been conducted in the State. It has been conducted in a general way but an intensive survey is necessary.

Sri H. SIDDAVEERAPPA (Minister for Home and Industries).—A detailed survey has been conducted long ago.

Sri S. SRINIVASA IYENGAR.—If diamond drilling is conducted, we can prove the existence of the deposit and we can certainly do a lot of work. As a matter of fact, the existence of deposits of sulphite ore was proved in Ingaladal and we have approved and are in a position to start a sulphur plant in Ingaladal. We have got sulphur ore. India was depending upon imported sulphur from America. We have got diamond drilling and we can prove the deposit by drilling. I suggest an intensive diamond drilling be adopted and necessary funds be placed at the disposal of the Bureau of Mines. It would be an asset to the State. We could take a lot of money. I was associated with the working of that particular department for the last so many months and I have toured the whole of India and they can certainly do a lot of work provided they are given necessary liberty or opportunity and funds.

Supply of power to minig works.

As regards the supply of power to the Government mining works at Bylapur and Bageshpur, the Government is losing a lot of money by running oil engines. There is a difficulty in the Electrical Department. But whatever the difficulty, the Government could save a lot of money by supplying power somehow; thereby they could enlarge the activity of those two institutions and make good profit for the Government.

Mineral Survey in Arasikere Taluk.

ಶ್ರೀ ಕೆ. ಪಂಚಾಕ್ಷರಯ್ಯ (ಅರಸೀಕೆರೆ).—ಸ್ವಾಮಿ, ಅರಸೀಕೆರೆ ತಾಲ್ಲೂಕಿನಲ್ಲಿ ಖನಿಜ ಸಂಪತ್ತು ಹೇರಳವಾಗಿದೆ. ಅಲ್ಲಿ ಕೊರಂಡಕಲ್ಲು ಪಾಸ್ಫಿಯಾಗಿ ಸಿಕ್ಕುತ್ತದೆ. ಮತ್ತು ಇನ್ನೂ ಅನೇಕ ತರಹೆಯ ಖನಿಜ ಸಂಪತ್ತುಗಳು ಸಿಕ್ಕುತ್ತವೆ. ಈ ಬಗ್ಗೆ ನಾನು ಒಂದು ಪ್ರತ್ಯೇಕ ಪ್ರಶ್ನಾವಳಿಯನ್ನೇ ಈ ಅಧಿವೇಶನದಲ್ಲಿ ತಂದಿದ್ದೆನು. ಆ ಬಗ್ಗೆ ಸರ್ಕಾರದವರು ಸಾಕಷ್ಟು ಉತ್ತರಗಳನ್ನೊದಗಿಸಿಲ್ಲ. ಆ ಬಗ್ಗೆ ಆ ಪ್ರದೇಶಗಳಲ್ಲಿ ಸಾಕಷ್ಟು ಸರ್ವೆ ಪರಿಶೀಲನೆಯನ್ನು ನಡೆಸಿರುವುದಿಲ್ಲ. ಹೀಗೆ ಸರ್ಕಾರದವರು ಆ ಪ್ರದೇಶದ ಬಗ್ಗೆ ಯಾವ ಒಂದು ಮುತುವರ್ಜಿಯನ್ನೂ ವಹಿಸುತ್ತಿಲ್ಲ ಅನ್ನುವುದು ಸಾರ್ವಜನಿಕರಿಗೆಲ್ಲಾ ತಿಳಿದು ಬಂದಿದೆ. ಆದಕಾರಣ ಈಗ ಅಲ್ಲಿ ನಡೆಯುತ್ತಿರುವ ಅಷ್ಟಿಷ್ಟು ಭಾಗ ಉದ್ದಿಮೆದಾರರು ಖನಿಜದ ಕೆಲಸವನ್ನೂ ಕೂಡ ಕೈಬಿಟ್ಟು ಬಿಡಬೇಕೆಂದು ಜೋಚಿಸುತ್ತಿದ್ದಾರೆ. ಆದರೆ ಆ ಪ್ರದೇಶದಲ್ಲಿ ಇನ್ನೂ ಅನೇಕ ಖನಿಜಗಳಿರುತ್ತವೆಂದು ಜನರು ಹೇಳುತ್ತಿದ್ದಾರೆ. ಇಲ್ಲಿಗೆ 25—30 ವರ್ಷಗಳ ಹಿಂದೆ ಅಲ್ಲಿ ತಳ್ಳೂರು ಎಂಬ ಗ್ರಾಮದ ಬಳಿ ಭಂಗಾರದ ಗಣಿ ಕೂಡ ಇದೆ ಎಂದು ಹೇಳುತ್ತಿದ್ದರು. ಅಲ್ಲಿ ಆ ಬಗ್ಗೆ ಕೆಲಸ ಕೂಡ ಪ್ರಾರಂಭವಾಗಿತ್ತು. ಅದೇಕೋ ಅದನ್ನು ಅಲ್ಲಿಗೇ ನಿಲ್ಲಿಸಿಬಿಟ್ಟಿದ್ದಾರೆ. ಈಗಲಾದರೂ ಸರ್ಕಾರದವರು ಒಂದು ಸರ್ವೆ ನಡೆಸಿ ಎಲ್ಲೆಲ್ಲಿ ಏನೇನು ಖನಿಜಗಳು ಸಿಕ್ಕುತ್ತವೆಂಬುದನ್ನು ಸಾರ್ವಜನಿಕರಿಗೆ ಒಂದು ಬಹಿರಂಗ ಪ್ರಕಟಣೆಯ ಮೂಲಕ ತಿಳಿಸಿದರೆ ಅವರಲ್ಲಿ ದಕ್ಷರಾದವರು ಯಾರಾದರೂ ಇದ್ದರೆ ಆ ಖನಿಜಗಳ ಉಪಯೋಗವನ್ನು ಹೊಂದುವುದಕ್ಕೆ ಅನುಕೂಲವಾಗುತ್ತದೆ. ಇದರಿಂದ ಸರ್ಕಾರದವರಿಗೂ ವರಮಾನ ಬರುತ್ತದೆ. ಅಲ್ಲಿರತಕ್ಕಂಥ ಬಡಜನರಿಗೂ ಕೂಡ ಕೂಲಿ ವಗೈರೆ ಸಿಕ್ಕಲು ಅನುಕೂಲವಾಗುತ್ತದೆ. ಆದುದರಿಂದ ಸರ್ಕಾರದವರು ಆ ತಾಲ್ಲೂಕಿನಲ್ಲಿ ದೊರೆಯುವ ಖನಿಜಗಳ ಬಗ್ಗೆ ಒಂದು ಸರ್ವೆ ನಡೆಸಲು ಅಲ್ಲೊಂದು ಸಂಶೋಧನಾಲಯವನ್ನು ತೀವ್ರವಾಗಿ ತೆರೆಯಬೇಕೆಂದು ನಾನು ಒತ್ತಾಯಮಾಡುತ್ತೇನೆ.

ಶ್ರೀ ಎಚ್. ಸಿದ್ದವೀರಪ್ಪ.—ಅಧ್ಯಕ್ಷರೇ ಈಗಾಗಲೇ ಆ ಅರಸೀಕೆರೆ ತಾಲ್ಲೂಕಿನಲ್ಲಿ ಈ ವಿಚಾರದಲ್ಲಿ ಸರ್ವೆ ಪರಿಶೀಲನೆಗಳು ನಡೆದು ಬಹಳ ವರ್ಷಗಳಾದವು. ಈಗ ತಾನೆ ಮಾತನಾಡಿದ ಮಾನ್ಯಸದಸ್ಯರು ತಿಳಿಸಿದಂಥ ಆ ಕೊರಂಡು ಅನ್ನತಕ್ಕಂಥ ಕಲ್ಲು ಬಾಗೇಶಪುರದಲ್ಲಿ ಸಿಕ್ಕುತ್ತದೆ ಅನ್ನತಕ್ಕ ಅಂಶ ಸರ್ಕಾರದವರಿಗೂ ಗೊತ್ತಿದೆ. ಅಷ್ಟೇ ಅಲ್ಲದೆ ಅಲ್ಲೇ ಸಮೀಪದಲ್ಲಿ ಬಲ್ಲೇನಹಳ್ಳಿ ಎಂಬ ಕಡೆಯಲ್ಲಿ ಸೋಪುಕಲ್ಲು ಎಂಬುದು ಬೇರೆ ಸಿಕ್ಕುತ್ತದೆ ಅನ್ನತಕ್ಕಂಥ ವಿಚಾರ ಕೂಡ ಸರ್ಕಾರದವರ ತಿಳಿವಳಿಕೆಗೆ ಬಂದಿದೆ. ಇದೇ ರೀತಿ ಕ್ರೋಮೈಟ್ ಅದಿರು ಹೆನ್ನಸಂದ್ರ ಎಂಬ ಗ್ರಾಮದ ಬಳಿ ಸಿಕ್ಕುತ್ತದೆಂದು ತಿಳಿದುಬಂದಿದೆ. ಇದರಿಂದ ಸರ್ಕಾರದವರು ಈಗಾಗಲೇ ಇದರ ಬಗ್ಗೆ ಹೆಚ್ಚಿನ ನಿಗಾ ಕೊಟ್ಟಿದ್ದಾರೆಂಬುದಾಗಿ ತಿಳಿಸಲಚ್ಚಿಸುತ್ತೇನೆ. ಇನ್ನೂ ಹೆಚ್ಚಿನ ನಿಗಾ ಕೊಟ್ಟು ಈ ಕೈಗಾರಿಕೆಗಳನ್ನು ಯಾವ ಯಾವ ರೀತಿಯಲ್ಲಿ ಅಭಿವೃದ್ಧಿಪಡಿಸಬಹುದು ಎನ್ನುವ ವಿಚಾರದಲ್ಲಿ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುವುದು. ಈ ಬಗ್ಗೆ ಸೂಕ್ತ ಎಚ್ಚರಿಕೆಯನ್ನೂ ಸಹ ಇಲಾಖಾ ಮುಖ್ಯಾಧಿಕಾರಿಗಳಿಗೆ ತಿಳಿಸುತ್ತೇನೆ.

ಇನ್ನು ಎರಡನೆಯದಾಗಿ ಶ್ರೀಮಾನ್ ಶಿವಪ್ಪನವರು Sulphur ವಿಚಾರ ಹೇಳಿದರು. ಆ ವಿಚಾರ ಸರ್ಕಾರಕ್ಕೂ ಗೊತ್ತಿದೆ. ಈಗ ನನಗೆ ಬಂದಿರತಕ್ಕ ವರದಿಯ ಪ್ರಕಾರ ಅಲ್ಲಿ 1·5 ಮಿಲಿಯನ್ ಟನ್‌ಗಳಷ್ಟು ಗಂಧಕ ಸಿಕ್ಕುತ್ತದೆಂದು ತಿಳಿದು ಬಂದಿದೆ. ಇದರ ಅಗತ್ಯ ನಮಗೆ ಎಷ್ಟರಮಟ್ಟಿಗಿದೆ ಅನ್ನತಕ್ಕ ವಿಚಾರದಲ್ಲಿ ಕೇಂದ್ರ ಸರ್ಕಾರದವರು ನಮ್ಮ ಇಂಡಿಯಾ ದೇಶಕ್ಕೇನೇ ವರ್ಷ ಒಂದಕ್ಕೆ ಸುಮಾರು ಒಂದು ಮಿಲಿಯನ್ ಟನ್ ಗಂಧಕ ಬೇಕಾಗುತ್ತದೆಂದು ಅಂದಾಜು ಮಾಡಿ ತಿಳಿಸಿದ್ದಾರೆ. ಈ ವನ್ನು ನಮ್ಮ ಮೈಸೂರಿಗೇ ಏಕೆ ಇಡಿ ಇಂಡಿಯಾ ದೇಶಕ್ಕೇ ಒಂದು ಕಾಮಧೇನು-ಕಲ್ಪವೃಕ್ಷದಂತಿದೆಯೆಂದು ಭಾವಿಸಲಾಗಿದೆ. ಈ ಕೈಗಾರಿಕೆಯನ್ನು ಅಭಿವೃದ್ಧಿಪಡಿಸುವುದಕ್ಕಾಗಿ ಇಂಡಿಯಾ ಸರ್ಕಾರದವರು ನಮಗೆ ಸಹಾಯಮಾಡುವುದಾಗಿ

ಭರವಸೆಯನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ಮುಂದೇನು ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂಬ ವಿಚಾರದಲ್ಲಿ ಸರ್ಕಾರದವರು ಈಗಾಗಲೇ ತೀವ್ರವಾಗಿ ಪರಿಶೀಲನೆಮಾಡುತ್ತಿದ್ದಾರೆ.

ಇನ್ನು ಈ ಡಯಮಂಡ್ ಡ್ರಿಲ್ಲಿಂಗ್ ವಿಚಾರದಲ್ಲಿ ಶ್ರೀಮತ್ ಶ್ರೀನಿವಾಸಯ್ಯಂಗಾರ್ ಅವರು ಅಪ್ಪಣೆ ಕೊಡಿಸಿದ್ದಾರೆ. ಮೊದಲು ಈ ಕೆಲಸವನ್ನು ಕೈಗೊಂಡ ಪರಿಗೆ ಬಹುಶಃ ಅಷ್ಟಾಗಿ ಇದರ ವ್ಯವಹಾರ ಜ್ಞಾನ ಇರಲಿಲ್ಲವೆಂದು ಅಥವಾ ಅವರಿಗೆ ಇದರ ಬಗ್ಗೆ ಒಂದು ಸರಿಯಾದ ತಿಳಿವಳಿಕೆ ಇರಲಿಲ್ಲವೆಂದು ಕಾಣುತ್ತದೆ. ಆದರೆ ಈ ದಿವಸ ನಡೆದ ಪ್ರಶ್ನೆಗಳ ಸರಮಾಲೆಯಿಂದ ನನಗೂ ಸಹ ಇದರ ಬಗ್ಗೆ ಒಂದು ಹೆಚ್ಚಿನ ಮಾಹಿತಿ ಪಡೆಯಲು ಅವಕಾಶವಾಯಿತು. ಇದರ ಬಗ್ಗೆ ನಾವಿನ್ನು ನೂಕ್ಷ್ಮ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತೇವೆ. ಹೀಗೆ ಸರ್ಕಾರಕ್ಕೆ ಆದಾಯವನ್ನು ಹೆಚ್ಚುಮಾಡಿಕೊಳ್ಳಲು ಯಾವ ಯಾವ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೋ ಆ ಎಲ್ಲಾ ಕಾರ್ಯಕ್ರಮಗಳನ್ನೂ ಕೈಗೊಳ್ಳಲಾಗುತ್ತದೆ ಮತ್ತು ಇಂಥ ಉಪಯುಕ್ತ ಸಲಹೆಗಳನ್ನು ಕೊಟ್ಟ ಎಲ್ಲ ಮಾನ್ಯ ಸದಸ್ಯರಿಗೂ ನನ್ನ ವಂದನೆಗಳು. ಈ ಎಲ್ಲಾ ವಿಚಾರಗಳ ಬಗ್ಗೆಯೂ ನಾನು ಮತ್ತೊಮ್ಮೆ ಪರಿಶೀಲನೆಮಾಡಲು ಅಧಿಕಾರಿಗಳಿಗೆರ್ಲಾ ಸೂಚನೆ ಕೊಡುತ್ತೇನೆ.

ಶ್ರೀ ವಿ. ವೀರಪ್ಪ ನಾಯಕ (ಪೊಳಕಾಲ್ಮುರು).—ಬಾಗೇಶಪುರಕ್ಕೆ ವಿದ್ಯುಚ್ಛಕ್ತಿ ಸರಬರಾಜಿನ ವಿಚಾರ ಏನು ಮಾಡಿದಿರಿ?

ಶ್ರೀ ಎಚ್. ಸಿದ್ದವೀರಪ್ಪ.—ಇನ್ನು ಬಾಗೇಶಪುರ ಮತ್ತು ಬೈರಾಪುರದ ಬಗ್ಗೆ ಸರ್ಕಾರದವರು ತೀವ್ರವಾದ ಗಮನವನ್ನು ಕೊಡುತ್ತಾರೆಂದು ಹೇಳುತ್ತೇನೆ.

Dr. R. NAGAN GOWDA (Minister for Agriculture).—I will have it examined but I was thinking of another question that was raised. ಈಗ ತಾನೆ ಶ್ರೀ ಪುಟ್ಟಸ್ವಾಮಿಯವರು ಒಂದು ಏಲಕ್ಕಿಯ ಸಂಶೋಧನಾಲಯವನ್ನು ಸ್ಥಾಪಿಸಬೇಕೆಂಬುದಾಗಿ ತಿಳಿಸಿದ್ದಾರೆ. ಈಗಾಗಲೇ ಇಂಡಿಯನ್ ಕೌನ್ಸಿಲ್ ಆಫ್ ಅಗ್ರಿಕಲ್ಚರಲ್ ರಿಸರ್ಚ್‌ನವರು ಇಂತಹ ಒಂದು ಸಂಸ್ಥೆಯನ್ನು ತೆರೆಯಬೇಕೆಂದು ಯೋಜನೆಯನ್ನು ಮಾಡಿದ್ದಾರೆ. ಇದನ್ನು ಎಲ್ಲಿ ಪ್ರಾರಂಭಿಸಿದರೆ ಅನುಕೂಲವಾಗಿರುತ್ತದೆ ಎಂಬ ಬಗ್ಗೆ ಒಂದು ಸರಿಯಾದ ಸ್ಥಳವನ್ನು ಸರ್ಕಾರದವರು ಹುಡುಕುತ್ತಿದ್ದಾರೆ. ಇಷ್ಟು ವಿಷಯವನ್ನು ಅವರಿಗೆ ತಿಳಿಸಿದರೆ ಸಾಕು ಎಂದು ಕಾಣುತ್ತದೆ.

Mr. SPEAKER.—The question is:

"That a sum not exceeding Rs. 8,55,000 be granted to the Government to defray the charges which will come in course of payment during the year ending 31st day of March 1956, in respect of 'Scientific Departments'."

The motion was adopted.

Mr. SPEAKER.—The House will now rise for Lunch and meet at 3-30 P.M.

The House adjourned for Lunch at Three of the Clock and reassembled at Thirty Minutes Past Four of the Clock.

[MR. SPEAKER in the Chair.]

DEMAND No. 23—RURAL DEVELOPMENT.

40-A—RURAL DEVELOPMENT.

Mr. SPEAKER.—Now, we shall take up Demand No. 23. Motion moved:

"That a sum not exceeding Rs. 55,26,000 be granted to the Government to defray the charges which will come in course of payment during the year ending 31st day of March 1956, in respect of 'Rural Development'."

On this demand, the following cut motions will be taken up.—Cut motions Nos. 64, 70, 81, 84, 85, 87, 91, 93, 95, 101, 105, 108, 114, 128 and 136.

Sri V. VENKATAPPA (Channapatna).—What is the time fixed for the Demand, Sir?

Mr. SPEAKER.—It is one hour.

Sri A. G. RAMACHANDRA RAO (Minister for Law and Education).—It was announced that an hour and a quarter would be given.

Mr. SPEAKER.—But we have got only an hour and a half.

Sri A. G. RAMACHANDRA RAO.—Very well, Sir.

Mr. SPEAKER.—We shall see. Cut motion No. 65 Sri S. Kariappa.

Road from Anekal to Kanakapura.

ಶ್ರೀ ಎಸ್. ಕರಿಯಪ್ಪ (ವಿರೂಪಾಕ್ಷಪುರ).—ಸ್ವಾಮಿ, ಕನಕಪುರ ತಾಲ್ಲೂಕಿಗೂ ಆನೇಕಲ್ ತಾಲ್ಲೂಕಿಗೂ ನೇರವಾಗಿ ಹೋಗುವ ರಸ್ತೆ ಸದ್ಯದಲ್ಲಿಲ್ಲ. ಬೆಂಗಳೂರಿಗೆ ಒಂದು ಆಲ್ಲಿಗೆ ಹೋಗಬೇಕು. ಇದು 64 ಮೈಲಿ ದೂರವಾಗುತ್ತದೆ. ಕಾನಕಾನಹಳ್ಳಿಯಿಂದ ಹಾರೋಹಳ್ಳಿಯ ಮೂಲಕ ನೇರವಾಗಿ ಆನೇಕಲ್ಲಿಗೆ ರಸ್ತೆಮಾಡಿದರೆ 18 ಮೈಲಿ ಆಗುತ್ತದೆ. ಹೀಗೆ ಒಂದು ರಸ್ತೆಯನ್ನು ಮಾಡದೇ ಇರುವುದರಿಂದ ಬಳಸಿಕೊಂಡು 64 ಮೈಲಿ ದೂರ ಹೋಗುವ ಪರಿಸ್ಥಿತಿ ಒದಗಿದೆ. ಇದನ್ನು ತಪ್ಪಿಸಿ ನೇರವಾಗಿ ಒಂದು ರಸ್ತೆಯನ್ನು ಮಾಡಿಸಿ ಕೊಡಬೇಕೆಂದು ಸರ್ಕಾರದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ಎರಡು ತಾಲ್ಲೂಕುಗಳವರೂ ಬಹುಕಾಲದಿಂದ ಈ ಮನವಿಯನ್ನು ಸಲ್ಲಿಸುತ್ತಾ ಬಂದಿದ್ದಾರೆ. ಇದುವರೆಗೂ ಕೆಲಸ ನಡೆದಿಲ್ಲ. ಈಗಲಾ

(ಶ್ರೀ ಎಸ್. ಕರಿಯಪ್ಪ.)

ದರೂ ಈ 18 ಮೈಲಿ ದೂರ ಆಗುವ ರಸ್ತೆಯನ್ನು ಮಾಡಿಸಿಕೊಟ್ಟು ಈ ಎರಡು ತಾಲ್ಲೂಕುಗಳಿಗೂ ಸಂಬಂಧವನ್ನು ಕಲ್ಪಿಸಬೇಕೆಂದು ಪ್ರಾರ್ಥಿಸುತ್ತೇನೆ.

Scheduled Castes and Tribes Amelioration Schemes.

*ಶ್ರೀ ಎಂ. ಮಾದಯ್ಯ (ನಂಜನಗೂಡು—ಅನುಸೂಚಿತ ಜಾತಿಗಳು).—ಸ್ವಾಮಿ, ನಮ್ಮ ವರ್ಗದವರ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸುವುದಕ್ಕಾಗಿ ಒಂದು ಯೋಜನೆ ಇದೆ. ಇದು ಕಳೆದ ಹತ್ತು ವರ್ಷಗಳಿಂದಲೂ ಇದೆ. 1944ನೆಯ ಇಸವಿ ಮಾರ್ಚ್ ತಿಂಗಳಲ್ಲಿ ಈ ಯೋಜನೆ ಮಂಜೂರಾಯಿತು. ಅಂದರೆ ಸುಮಾರು ಹತ್ತು ವರ್ಷವಾಯಿತು. ಈ ಯೋಜನೆಯನ್ನು ಆಚರಣೆಗೆ ತರುವುದರಲ್ಲಿಯೂ ಯೋಜನೆಯಲ್ಲಿಯೂ ಸಹ ಕೆಲವು ಮಾರ್ಪಾಡಾಗಬೇಕಾದುದು ಅಗತ್ಯವಿದೆ. ಈ ಯೋಜನೆಗಳನ್ನು ಜಾರಿಗೆ ತರುವಾಗ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಸಕಾಲದಲ್ಲಿ ಕಾರ್ಯಕ್ರಮ ತೆಗೆದುಕೊಳ್ಳದೆ ಇರುವುದರಿಂದ ಯೋಜನೆಗಾಗಿ ಮಂಜೂರಾಗುವ ಹಣ ಸರಿಯಾಗಿ ವಿನಿಯೋಗವಾಗದೆ ಹೋಗುತ್ತಿದೆ. ಇದನ್ನು ಸರಿಯಾಗಿ ನೋಡಿಕೊಳ್ಳಬೇಕಾದುದು ಮತ್ತು ಸರಿಯಾಗಿ ಕಾರ್ಯಕ್ರಮ ತೆಗೆದುಕೊಳ್ಳಬೇಕಾದುದು ಅತ್ಯಗತ್ಯ. ನಿಮ್ಮವರ್ಗದ ಅಭಿವೃದ್ಧಿಗಾಗಿ ಇಂಡಿಯಾ ಸರ್ಕಾರದವರು ಒಂದು ಯೋಜನೆಯನ್ನು ಹಾಕಿದಾರೆ. ಇದಕ್ಕೆ ನಮ್ಮ ಸರ್ಕಾರದವರು ಅರ್ಧ ಹಣವನ್ನು ಕೊಡುತ್ತಾರೆ. ಇಂಡಿಯಾ ಸರ್ಕಾರದವರು ಅರ್ಧ ಕೊಡುತ್ತಾರೆ. ಕಳೆದ ಸಾಲಿನಲ್ಲಿ ಸುಮಾರು 5 ಲಕ್ಷ ರೂಪಾಯಿ ಕೊಟ್ಟಿದ್ದರು. ಮುಂದಿನ ಸಾಲಿನ ಬಡ್ಜೆಟ್ಟಿನಲ್ಲಿ 9 ಲಕ್ಷ ಒದಗಿಸಿದ್ದಾರೆ, ಚಾಲ್ತಿ ಸಾಲಿನಲ್ಲಿ 5 ಲಕ್ಷ ರೂಪಾಯಿ ಇದೆ. ಈ ಹಣ ಮೂರುನಾಲ್ಕು ವರ್ಷಗಳಿಂದಲೂ ಪ್ರತಿವರ್ಷವೂ ಈ ಯೋಜನೆಗೆ ಸಕಾಲದಲ್ಲಿ ಸಂಬಂಧಪಟ್ಟ ಕಾರ್ಯಕ್ರಮ ತೆಗೆದುಕೊಳ್ಳದೇ ಇರುವುದರಿಂದ ಲಾಪ್ಸ್ ಆಗುತ್ತಿದೆ. ಇದಕ್ಕೇನು ಕಾರಣವೆಂಬುದನ್ನು ನೋಡಿಲ್ಲ. ಈರೀತಿ ಲಾಪ್ಸ್ ಆಗದೇಯಿರುವ ಹಾಗೆ ಮಾಡುವುದು ಮುಖ್ಯ ಕರ್ತವ್ಯ.

ಬಡ್ಜೆಟ್ ಅಧಿವೇಶನ ಆದನಂತರ ಈ ಹಣ ಜಿಲ್ಲೆಗಳಿಗೆ ಹಂಚಿಕೆಯಾಗಬೇಕಾದರೆ ಸುಮಾರು ನಾಲಾರು ತಿಂಗಳಾಗುತ್ತದೆ. ಅನಂತರ ಡಿಸ್ಟ್ರಿಕ್ಟ್ ಕೌನಿಲ್ ಡಿಸ್ಟ್ರಿಕ್ಟ್ ಅಡ್‌ಹಾಕ್ ಸಮಿತಿಗಳು ತಾಲ್ಲೂಕುಗಳಿಗೆ ಹಂಚಿ ಹಣ ಖರ್ಚಾಗಬೇಕಾದರೆ ಬಹಳ ದಿವಸ ಹಿಡಿದು ಹಣ ಸರಿಯಾಗಿ ವಿನಿಯೋಗವಾಗುತ್ತಿಲ್ಲ. ಇದಕ್ಕೆ ಕಾರಣವೇನೆಂಬುದನ್ನು ಪರಿಶೀಲನೆಮಾಡಿ ಸೂಕ್ತ ಕಾರ್ಯಕ್ರಮ ಕೈಗೊಳ್ಳಬೇಕು. ಕೆಲವು ಜಿಲ್ಲೆಗಳಿಗೆ ಸ್ಪೆಷಲ್ ಆಫೀಸರುಗಳಿಲ್ಲದೆ ಸರಿಯಾಗಿ ಕೆಲಸ ನಡೆಯುತ್ತಿಲ್ಲ. ನಾಲ್ಕರು ಅಧಿಕಾರಿಗಳಿಲ್ಲ. ಕೆಲಸ ನಿಂತುಹೋಗಿದೆ. ಪಬ್ಲಿಕ್ ಸರ್ವಿಸ್ ಕಮಿಷನ್‌ನವರು ಈ ಬಗ್ಗೆ ಶಿಫಾರಸುಮಾಡಿ ಕಳುಹಿಸಿದ್ದಾರೆಂದು ವದಂತಿ ಇದೆ. ಬೇಗ ನೇಮಕಮಾಡಿ, ಕೆಲಸಕ್ಕೆ ಅಡಿಯಾಗಿರುವುದನ್ನು ಸರ್ಕಾರದವರು ನಿವಾರಣೆಮಾಡಬೇಕು.

ಹತ್ತು ವರ್ಷದಲ್ಲಿ ಆಚರಣೆಯಲ್ಲಿರುವ ತೊಂದರೆಗಳನ್ನು ನಿವಾರಿಸಿ ಇವರ ಸ್ಥಿತಿಗತಿಗಳನ್ನು ಉತ್ತಮಪಡಿಸುವ ಸಂಬಂಧದಲ್ಲಿ ಒಂದು 'ಸೆಮಿನಾರ್' ಏರ್ಪಾಡು ಮಾಡಿದಾರೆ. ಅದನ್ನು ಈ ತಿಂಗಳ ಕೊನೆಯಲ್ಲಿ ಸೇರಿಸಬೇಕೆಂದು ಸರ್ಕಾರದವರು ಯೋಚನೆ ಮಾಡಿದ್ದಾರೆ. ಬಡ್ಜೆಟ್ ಅಧಿವೇಶನವಾದಮೇಲೆ ಸಮಿತಿಗಳು ಕಲೆತು ಯೋಜನೆಯಲ್ಲಿರತಕ್ಕ ಲೋಪ ದೋಷಗಳನ್ನು ಸರಿಪಡಿಸಿ, ದೀರ್ಘವಾದ ಯೋಜನೆಯನ್ನು ತಯಾರುಮಾಡಿ ಮುಂದಿನ ಸಾಲಿನಲ್ಲಿ ಮುಂದೆ ಸರಿಯಾಗಿ ಆಚರಣೆಗೆ ಬರುವಂತೆ ನೋಡಿಕೊಳ್ಳಬೇಕಾದುದು ಕರ್ತವ್ಯ. ಈರೀತಿ ಮಾಡುತ್ತಾರೆಂದು ನಂಬಿದ್ದೇನೆ. ಅಧಿವೇಶನದ ಹೊತ್ತಿಗೆ ಸೆಮಿನಾರ್ ಮಾಡಬೇಕು. ಸಬ್‌ಕಮಿಟಿಗಳು ಯೋಜನೆಗಳನ್ನು ತಯಾರುಮಾಡಿ, study circle ಮಾಡಿ, ಲೋಪದೋಷಗಳನ್ನು ಸರಿಪಡಿಸಿ ಯಶಸ್ವಿಯಾಗಿ ಆಗಬೇಕಾದರೆ ಏನು ಮಾಡಬೇಕೋ ಅದನ್ನು ಮಾಡಬೇಕಾಗುತ್ತದೆ. ಅದುದರಿಂದ ಸರ್ಕಾರದವರು ಈ ಸೆಮಿನಾರನ್ನು ಮುಂದೆ ಹಾಕಿಕೆಲಸ ಯಶಸ್ವಿಯಾಗಿ ನಡೆಯುವಂತೆ ಮಾಡುತ್ತಾರೆಂದು ನಂಬಿದ್ದೇನೆ.

ಮನೆಗಳನ್ನು ಕಟ್ಟುವ ಯೋಜನೆಯಲ್ಲಿ ಒಂದು ಸರಿಯಾದ ಯೋಜನೆಯಲ್ಲ: ಇದಕ್ಕಾಗಿ ಅಕ್ಸೈರ್ ಮಾಡಿರುವ ಅನೇಕ ಹಿಡುವಳಿ ಜಮೀನುಗಳನ್ನು ಸಾಕಷ್ಟು ವ್ಯವಸ್ಥೆಯಿಲ್ಲದ ಕಾರಣ ಹಾಳುಬಿದ್ದಿವೆ. ಇದಕ್ಕೆ ಕಾರಣ ಒಂದು ವ್ಯವಸ್ಥಿತವಾದ ಕಾರ್ಯಕ್ರಮವಿಲ್ಲದಿರುವುದು. ಮೊದಲೇ ಅಕ್ಸೈರ್ ಆಗುವ ಸ್ಥಳಗಳಲ್ಲಿ ಮನೆಗಳನ್ನು ಕಟ್ಟುವ ಯೋಜನೆಯನ್ನು ತಯಾರುಮಾಡಬೇಕಾಗುತ್ತದೆ. ಇದನ್ನು ಸರ್ಕಾರದವರು ಆಲೋಚನೆ ಮಾಡಿ ಜಾರಿಗೆ ತರುತ್ತಾರೆಂದು ನಂಬಿದ್ದೇನೆ.

Water Supply to Hangala Village in Gundlupet Taluk.

*ಶ್ರೀ ಎಚ್. ಕೆ. ಶಿವರುದ್ರಪ್ಪ (ಗುಂಡ್ಲುಪೇಟೆ—ಹೆಗ್ಗಡದೇವನಕೋಟೆ).—ಸ್ವಾಮಿ, ಗುಂಡ್ಲುಪೇಟೆ ತಾಲ್ಲೂಕಿನಲ್ಲಿರುವ ಹಂಗಳ ಗ್ರಾಮಕ್ಕೆ ನೀರು ಸರಬರಾಯಿಮಾಡುವ ವಿಚಾರವನ್ನು ಚರ್ಚಿಸಲು ಈ ಖೋತಾ ನಿರ್ಣಯ ಸೂಚಿಸಿದ್ದೇನೆ. ಸರ್ಕಾರದವರು ಸಿಟಿಗಳಲ್ಲಿ ಮತ್ತು ಟೌನ್‌ಗಳಲ್ಲಿ ನೀರು ಸರಬರಾಯಿ ಯೋಜನೆಯನ್ನು ಕೈಗೊಂಡಿದ್ದಾರೆ. ಆದರೆ ಗ್ರಾಮಾಂತರಗಳಲ್ಲಿ ಈ ಕಾರ್ಯಕ್ಕೆ ಹೆಚ್ಚು ಸಿಗಾ ಕೊಟ್ಟಿಲ್ಲ. ಅನೇಕ ಗ್ರಾಮಗಳಲ್ಲಿ ನೀರು ಸರಬರಾಯಿ ವ್ಯವಸ್ಥೆಯಿಲ್ಲದೆ ಬಹಳ ಕಷ್ಟಕ್ಕೀಡಾಗಿವೆ. ಹಂಗಳ ಗ್ರಾಮದಲ್ಲಿ ಸುಮಾರು ನಾಲ್ಕು ಸಾವಿರ ಪ್ರಜಾಸಂಖ್ಯೆ ಇದೆ. ಹೋಬಳಿ ಹೆಡ್‌ಕ್ವಾರ್ಟರಾಗಿದೆಯಲ್ಲದೆ ಪ್ರಾಮುಖ್ಯವಾದ ಸ್ಥಳದಲ್ಲಿದೆ. ನೀಲಗಿರಿಗೆ ಹೋಗುವಾಗ ಈ ಗ್ರಾಮ ಕಣ್ಣಿಗೆ ಕಾಣುತ್ತದೆ. ಆ ಹಳ್ಳಿಯ ಜನರು ಎಲ್ಲಿಂದ, ಎಷ್ಟು ದೂರದಿಂದ ನೀರನ್ನು ತರುತ್ತಿದ್ದಾರೆಂಬುದನ್ನು ನೋಡಬಹುದು. ಅಲ್ಲಿ ಬಾವಿಗಳಲ್ಲಿಯೂ ನೀರು ಬರುತ್ತಿಲ್ಲ. 120-150 ಅಡಿ ಬಾವಿಗಳನ್ನು ತೋಡಿ ಫೇಲ್: ಆದರೂ ನೀರು ಬಾರದೆ ನಾಲ್ಕು ಸಾವಿರ ಜನರು ಬಹಳ ಶೋಚನೀಯ ಸ್ಥಿತಿಗೊಳಗಾಗಿದ್ದಾರೆ. ಈ ಕಷ್ಟವನ್ನು ಮನಗಂಡು ಗಣ್ಯವ್ಯಕ್ತಿಗಳು ಹಿಂದೆ ಅಲ್ಲಿಗೆ ಅರ್ಧ ಮೈಲಿ ದೂರದಲ್ಲಿ ಒಂದು ಭಾವಿಯನ್ನು ತೆಗೆಸಿ ಒಂದು 'ವಿಂಡ್‌ಮಿಲ್' ಹಾಕಿ ಏರ್ಪಾಡು ಮಾಡಿಕೊಟ್ಟರು. ಇದು ಕಾರಣಾಂತರದಿಂದ ನಿಂತುಹೋಗಿ ಸುಮಾರು ಮೂರು ವರ್ಷದ ಮೇಲಾಗಿದೆ. ಇದು ಸರ್ಕಾರದ ಗಮನಕ್ಕೆ ಬಂದಮೇಲೆ ಈ ವ್ಯವಸ್ಥೆಯನ್ನು ಪುನರುಜ್ಜೀವನಗೊಳಿಸಬೇಕೆಂಬ ಉದ್ದೇಶದಿಂದ ಒಂದು oil engine fix ಮಾಡಿ ನೀರು ಸರಬರಾಯಿ ಮಾಡಬೇಕೆಂದು ಒಂದು ಯೋಜನೆಯನ್ನು ಕೈಗೊಂಡರು. ಆದರೆ ಈ ಹೊತ್ತಿನವರೆಗೂ ಈ ಯೋಜನೆಯು ಕಾರ್ಯರೂಪಕ್ಕೆ ಬರಲಿಲ್ಲ. ಇದಕ್ಕೆ ನನ್ನ ಪ್ರಶ್ನೆಗೆ ಉತ್ತರ

ಕೊಡುವಾಗ ಕಾರಣ ಹೇಳಿದ್ದಾರೆ. ಈಗ ಗುಂಡ್ಲು ಪೇಟೆಯಲ್ಲಿ ವಿದ್ಯುಚ್ಛಕ್ತಿ ಇದೆ. ಅಲ್ಲಿಂದ ಈ ಹಂಗಳ ಗ್ರಾಮಕ್ಕೆ ಸುಮಾರು 6 ಮೈಲಿ ಫಾಸಲೆಯಾಗುತ್ತದೆ. ವ್ಯವಸಾಯದ ಪಂಪುಗಳಿಗೆ ವಿದ್ಯುಚ್ಛಕ್ತಿಯನ್ನು ತೆಗೆದುಕೊಂಡುಹೋಗುತ್ತಿದ್ದಾರೆ. ಈ ಪವರ್ ಲೈನ್ ಹೋಗುವ ಸ್ಥಳಕ್ಕೂ ಹಂಗಳಕ್ಕೂ ಒಂದು ಮೈಲಿ ದೂರವಾಗುತ್ತದೆ. ಕೇವಲ ಈ ಒಂದು ಮೈಲಿ ಲೈನನ್ನು ಎಳೆದು ವಿದ್ಯುಚ್ಛಕ್ತಿಯ ಮೂಲಕ ನೀರು ಸರಬರಾಯಿ ಮಾಡಬಹುದು, ಖರ್ಚು ಕಡಮೆಯಾಗುತ್ತದೆ. ಈ ಯೋಜನೆಯನ್ನು ಪರಿಶೀಲಿಸಿ ಕೂಡಲೇ ಕಾರ್ಯಕ್ರಮವನ್ನು ತೆಗೆದುಕೊಂಡು ಈ ಕಾರ್ಯವನ್ನು ಕೈಗೂಡಿಸಬೇಕು. ಗ್ರಾಮಾಂತರ ನೀರು ಸರಬರಾಯಿ ವ್ಯವಸ್ಥೆಗೆ ಹತ್ತು ಲಕ್ಷ ರೂಪಾಯಿ ಇಟ್ಟಿದ್ದಾರೆ. ಇದರಿಂದ ಗ್ರಾಂಟು ರೂಪದಲ್ಲಿ ಹಣ ಕೊಟ್ಟು ಹಂಗಳ ಗ್ರಾಮಕ್ಕೆ ನೀರು ಸರಬರಾಯಿ ಏರ್ಪಾಡುಮಾಡಿಕೊಡಬೇಕೆಂದು ಪ್ರಾರ್ಥಿಸಲು ಖೋತಾ ಸೂಚನೆಯನ್ನು ಮಂಡಿಸುತ್ತೇನೆ.

Wells and Road in Hassan District

*ಶ್ರೀ ಜಿ. ಎ. ತಿಮ್ಮಪ್ಪಗೌಡ (ಅರಕಲಗೂಡು).—ಗ್ರಾಮಾಂತರ ಪ್ರದೇಶದ ಜನಗಳಿಗೆ ಸೌಕರ್ಯಗಳನ್ನು ಏರ್ಪಡಿಸಬೇಕಾದರೆ ಅವರಿಗೆ ಅತ್ಯಗತ್ಯವಾಗಿ ಬೇಕಾಗಿರತಕ್ಕಂಥ ಕುಡಿಯುವ ನೀರಿನ ಭಾವಿಗಳು ಮತ್ತು ಸಂಚಾರ ಮಾಡುವುದಕ್ಕೆ ರಸ್ತೆಗಳು, ಇವು ಬಹಳ ಅವಶ್ಯಕವಾಗಿ ಸರ್ಕಾರದವರು ಮಾಡಿಕೊಡಬೇಕಾದಂಥ ಕೆಲಸವಾಗಿದೆ. ಹಾಸನ ಜಿಲ್ಲೆಯಲ್ಲಿ ಮಲೆನಾಡು ತಾಲ್ಲೂಕುಗಳಾದ ತಿಗಳೂರು, ಆಲೂರು, ಬೇಲೂರು ಮತ್ತು ಸಕಲೇಶಪುರ ಈ ನಾಲ್ಕು ತಾಲ್ಲೂಕುಗಳಲ್ಲಿಯೂ ಕೂಡ ಮಾರ್ಚ್ ತಿಂಗಳಿಂದ ಮುಂದಕ್ಕೆ ಕುಡಿಯುವ ನೀರಿಗೆ ಬಹಳ ತೊಂದರೆ ಇರುತ್ತದೆ. ಅವು ಮಲೆನಾಡು ಪ್ರದೇಶವಾದರೂ ಕೂಡ ಬೇಸಿಗೆ ಕಾಲದಲ್ಲಿ ಮೈಲಿಗಳಗಟ್ಟಲೆ ಹೋದರೂ ಕುಡಿಯುವ ನೀರಿಗೆ ಅಭಾವ ಇರುತ್ತದೆ. ನಣ್ಣನಣ್ಣ ಕೆರೆಗಳು ಬತ್ತಿ ಹೋಗಿರುತ್ತವೆ. ಒಳ್ಳೆಯನೀರಿಗೆ ಅಭಾವ ಇರುತ್ತದೆ. ಆದ್ದರಿಂದ ವ್ಯವಸ್ಥಿತ ರೀತಿಯಲ್ಲಿ ಕುಡಿಯುವ ನೀರಿನ ಭಾವಿಗಳನ್ನು ಪ್ರತಿ ತಾಲ್ಲೂಕಿನಲ್ಲಿಯೂ ಒದಗಿಸಬೇಕಾದ್ದು ಅತ್ಯಗತ್ಯವಾಗಿದೆ. ಮಾನ್ಯ ಮಂತ್ರಿಗಳು ಎರಡು ವರ್ಷದೊಳಗೆ ಪ್ರತಿಯೊಂದು ತಾಲ್ಲೂಕಿಗೂ ಕುಡಿಯುವ ನೀರಿನ ಭಾವಿಯನ್ನು ಮಾಡಿಸುತ್ತೇವೆಂದು ಹೇಳಿದ್ದಾರೆ. ಈ ಭರವಸೆಯನ್ನು ಕಾರ್ಯಗತ ಮಾಡುವುದು ಅವರ ಆದ್ಯ ಕರ್ತವ್ಯವೆಂದು ತಿಳಿದುಕೊಂಡಿದ್ದೇನೆ. ಅದೇರೀತಿಯಲ್ಲಿ ಮಾರ್ಗಾನುಕೂಲಗಳು ಅತ್ಯಗತ್ಯವಾಗಿದೆ. ಕುಡಿಯುವ ನೀರಿನ ಭಾವಿಗಳು ಮತ್ತು ರಸ್ತೆಗಳ ವಿಚಾರದಲ್ಲಿ ಜನರು ಮಣ್ಣಿನ ಕೆಲಸ ತಾವಾಗಿಯೇ ಮಾಡಿಕೊಡುತ್ತೇವೆಂದು ಮುಂದೆ ಬರುತ್ತಿದ್ದಾರೆ. ಆದರೆ ಈ ಮಣ್ಣಿನ ಕೆಲಸ ಬಿಟ್ಟು ಜನಗಳಿಂದ ಆಗದೆಇದ್ದ ಮಿಕ್ಕ ಕೆಲಸಗಳನ್ನು ಅಂದರೆ culverts ಮುಂತಾದುವನ್ನು ಸರ್ಕಾರ ಮಾಡಿಕೊಡಿ ಎಂದು ಹೇಳುತ್ತಾರೆ. ಅಂಥ ಗ್ರಾಮಗಳಿಗೆ ರಸ್ತೆ ಮತ್ತು ಭಾವಿಗಳ ಅನುಕೂಲಗಳನ್ನು ಮಾಡಿಕೊಟ್ಟೇ ತೀರಬೇಕು. ಈಗ ಇಲ್ಲಿ ನಾಲ್ಕು ರಸ್ತೆಗಳು ಅಂದರೆ ಮಲ್ಲೇಪಟ್ಟಣ-ಕೊಣನೂರು ರಸ್ತೆ, ಕೊಣನೂರು-ಬಿದರೂರು ರಸ್ತೆ, ಕೊಣನೂರು ಹಂದ್ರಂಗಿ ರಸ್ತೆ ಮತ್ತು ರಾಮೇನಹಳ್ಳಿ ಪೊನ್ನಾತಪುರ ರಸ್ತೆಗಳಿವೆ. ಈ ರಸ್ತೆಗಳನ್ನು ಸುಮಾರು 6-7 ವರ್ಷಗಳ ಹಿಂದೆ ಗ್ರಾಮಸ್ಥರು ಮಾಡಿದರು. ಈ ರಸ್ತೆ ಎರಡು ಹೋಬಳಿಗಳನ್ನು ಸೇರಿಸುತ್ತದೆ. ಇಂಜಿನಿಯರಿಂಗ್ ಇಲಾಖೆ ಲೆಜ್ಜೆ ಚಾರಮಾಡಿದಪ್ರಕಾರ ಈ ರಸ್ತೆಯನ್ನು ಸುಮಾರು ಮೂವತ್ತು ಸಾವಿರ ರೂಪಾಯಿಗಳ ಖರ್ಚಿನಲ್ಲಿ ಆ ತಾಲ್ಲೂಕಿನ ಅಮಲ್ದಾರರ ಸಮ್ಮುಖದಲ್ಲಿ ಮಾಡಿದ್ದಾರೆ. ಇಪ್ಪತ್ತಿನ ದಿವಸ ಮೂವತ್ತು ಸಾವಿರ ರೂಪಾಯಿಗಳ ಖರ್ಚಿನಲ್ಲಿ ಹಳ್ಳಿಯವರು ಮಾಡಿದಂಥ ಈ ರಸ್ತೆಯ ಕೆಲಸವನ್ನು ಸರ್ಕಾರದವರು ಮುಂದುವರಿಸಿಕೊಂಡು ಹೋಗದೆ ಜಲ್ಲೀ ಹಾಕುವ ಕೆಲಸವನ್ನು ಕೈಕೊಳ್ಳದೆ ಡಿಸ್ಟ್ರಿಕ್ಟ್ ಬೋರ್ಡಿನವರು ಈ ವಿಚಾರದಲ್ಲಿ ಯಾವ ಕಾರ್ಯಕ್ರಮವನ್ನೂ ತೆಗೆದುಕೊಳ್ಳದೆ ಇರುವುದರಿಂದ ವ್ಯರ್ಥವಾಗಿ ಈ ರಸ್ತೆ ಹಾಳಾಗಿ ಹೋಗುತ್ತಿದೆ. ಆದ್ದರಿಂದ ಈ ರಸ್ತೆಯ ಕೆಲಸವನ್ನು ಮುಂದುವರಿಸಬೇಕೆಂದೂ ಮತ್ತು ಗ್ರಾಮಾಂತರ ಪ್ರದೇಶಕ್ಕೆ ಅತ್ಯಗತ್ಯವಾಗಿಬೇಕಾದಂಥ ರಸ್ತೆಗಳನ್ನು ಇನ್ನು ಎರಡು ವರ್ಷ ದೊಳಗಾಗಿ ಮಾಡಿಸಿಕೊಡಬೇಕೆಂದೂ ಪ್ರಾರ್ಥನೆ ಮಾಡುತ್ತೇನೆ.

Construction of Bridges and Roads in Malnad.

*ಶ್ರೀಮತಿ ಬಿ. ಎಲ್. ಸುಬ್ಬಮ್ಮ (ಚಿಕ್ಕಮಗಳೂರು-ಮೂಡಿಗೆರೆ).—ಸ್ವಾಮಿ, ಮಲೆನಾಡು ಭಾಗಗಳಲ್ಲಿ ಸೇತುವೆಗಳನ್ನು ಕಟ್ಟಿಸುವ ಅವಶ್ಯಕತೆಯನ್ನೂ ಮತ್ತು I.V.C. ರಸ್ತೆಗಳನ್ನು ಏರ್ಪಡಿಸುವ ಅವಶ್ಯಕತೆಯನ್ನೂ ಚರ್ಚಿಸುವುದಕ್ಕೆ ಈ ಖೋತಾ ಸೂಚನೆಯನ್ನು ತಂದಿದ್ದೇನೆ. ಮಲೆನಾಡು ಭಾಗದಲ್ಲಿ ರಸ್ತೆ ಮತ್ತು ಸೇತುವೆಗಳ ಕೆಲಸ ಎಷ್ಟು ಇದೆ ಎಂಬುದು ಸರ್ಕಾರದವರಿಗೆ ಗೊತ್ತಿದೆ. ಸರ್ಕಾರದವರು ಇಂತಹ ಕಡೆಗಳಲ್ಲಿಯೂ ಅನೇಕ ಸೇತುವೆ, ರಸ್ತೆಗಳನ್ನು ಮಾಡಿಸಿಕೊಟ್ಟಿದ್ದಾರೆ. ಅದಕ್ಕಾಗಿ ಸರ್ಕಾರದವರನ್ನು ಅಭಿನಂದಿಸಬೇಕಾಗಿದೆ. ನೂರಾರುವರ್ಷಗಳಿಂದ ಆಗದೆ ಇರುವ ಈ ಕೆಲಸವನ್ನು ಈಗ ಮಾಡುವುದರಿಂದ ಮಲೆನಾಡು ಜನರಿಗೆ ಅನುಕೂಲವಾಗುತ್ತದೆ. ಎಷ್ಟು ಮಾಡಿಸಿದರೂ ಮಾರ್ಗಸೌಕರ್ಯಕ್ಕೆ ಮಲೆನಾಡಿನಲ್ಲಿ ಬಹಳ ತೊಂದರೆಯಿರುವುದರಿಂದ ಸರ್ಕಾರದವರು ಹಳ್ಳಿಗಳಿಗೆ ಹೋಗತಕ್ಕಂಥ ಅಲ್ಲಿನ ರಸ್ತೆಗಳನ್ನು ಮತ್ತು ಸಣ್ಣನಣ್ಣ ಸೇತುವೆಗಳ ಕೆಲಸಗಳನ್ನು ಮಾಡಿಸಿಕೊಡಬೇಕಾಗಿದೆ ಎಂದು ಈ ಖೋತಾ ನಿರ್ಣಯವನ್ನು ತಂದಿದ್ದೇನೆ.

Construction of steps to Thungabhadra in Anveri and villages.

*ಶ್ರೀ ಬಿ. ಮಾಧವಾಚಾರ್ (ಭದ್ರಾವತಿ).—ಸ್ವಾಮಿ, ಈನನ್ನ ಖೋತಾನಿರ್ಣಯವು ಒಂದು ವಿಶೇಷ ಪರಿಸ್ಥಿತಿ ಸಮಸ್ಯೆಗೆ ಕುರಿತವಾಗಿದೆ. ಸಂಸ್ಥಾನದಲ್ಲಿ ಬಹುಶಃ ದೇಶಾವ್ಯಂತ ಎಲ್ಲಿಯೂ ಇಂತಹ ಪರಿಸ್ಥಿತಿ ಇಲ್ಲವೆಂದು ಕಾಣುತ್ತದೆ. ತುಂಗಭದ್ರಾನದಿ ಭದ್ರಾವತಿ ತಾಲ್ಲೂಕಿನಲ್ಲಿ ಹತ್ತು ಮೈಲಿ ಪ್ರವೇಶಿಸುತ್ತದೆ. ಆ ನದಿಯಡಡದಲ್ಲಿ ಸಾವಿರಾರು ಜನಸಂಖ್ಯೆ ಇರುವ ಅನೇಕ ಗ್ರಾಮಗಳಿವೆ. ಒಂದು ಗ್ರಾಮಕ್ಕೆ ಮಾತ್ರ ನದಿಯ ಮೆಟ್ಟಿಲಿನ ಕೆಲಸ ಪೂರೈಸಿದೆ. ಅನ್ವೇರಿ, ನಿಂಬೆಗುಂದಿ, ಸಿದ್ದಲೀಪುರ ಗ್ರಾಮಗಳಲ್ಲಿ ಅರ್ಧಮರ್ಧ ಕೆಲಸವಾಗಿ ಅಲ್ಲಿಯೇ ನಿಂತುಹೋಗಿದೆ. ಆ ಗ್ರಾಮದ ಸಾವಿರಾರು ಜನರಿಗೆ ಒಂದೆರಡು ಭಾವಿಗಳುಮಾತ್ರ ವಿದ್ದು ನೀರು ಕುಡಿಯುವುದಕ್ಕೆ ಯೋಗ್ಯವಾಗಿಲ್ಲ,

(ಶ್ರೀ ಬಿ. ಮಾಧವಾಚಾರ್.)

ಕೀಗಿರುವುದರಿಂದ ಜನರು ನೀರು ಕುಡಿಯುವುದಕ್ಕೆ ನಮಯ ನೀರನ್ನೇ ಆಶ್ರಯಿಸಿಕೊಂಡಿದ್ದಾರೆ. ಮಳೆಗಾಲದಲ್ಲಿ ನದಿಗಳಿಗೆ ಅಕಸ್ಮಾತ್ತಾಗಿ ಪ್ರವಾಹ ಬಂದು ಅನೇಕ ವಿಧವಾದ ಕಷ್ಟನಷ್ಟಗಳಿಗೆ ಒಳಗಾಗಿದ್ದಾರೆ. ಸಾಮಾನ್ಯವಾಗಿ ಕಷ್ಟಗಳನ್ನು ಅನುಭವಿಸುವುದು ದಿನಚರಿಯ ಕೆಲಸವಾಗಿದೆ. ಆದ್ದರಿಂದ ಕುಡಿಯುವ ನೀರಿಗಾಗಿ ಸರ್ಕಾರದವರು ದೂರವಾದ ಗ್ರಾಮಗಳಲ್ಲಿ ಭಾವಿಗಳಿಗಾಗಿ ಹಣವನ್ನು ಹೇಗೆ ಖರ್ಚು ಮಾಡುತ್ತಾರೋ ಅದೇ ರೀತಿಯಲ್ಲಿ ನದಿಯ ದಡದಲ್ಲಿರುವ ಗ್ರಾಮಗಳ ಜನರು ನದಿಯ ನೀರನ್ನು ಉಪಯೋಗಿಸುವುದರಿಂದ ಅವರು ನದಿಗಳಿಗೆ ಮೆಟ್ಟಿಲುಗಳನ್ನು ಕಟ್ಟಿಸುವ ಯೋಜನೆಯನ್ನು ಮಾಡಬೇಕು. ಅತಿಹೊಸ್ಪಟ್ಟಣದಂಥ ಗ್ರಾಮಗಳಾದ ಅನ್ವೇರಿ ಗ್ರಾಮ, ನಿಬೆಗುಂದಿ, ಪುಡಿಯೂರು ಗ್ರಾಮ ಮತ್ತು ಸಿವ್ಲೀಪುರ ಗ್ರಾಮಗಳಲ್ಲಿ ನದಿಗಳಿಗೆ ಮೆಟ್ಟಿಲುಗಳನ್ನು ಕಟ್ಟಿಸುವ ಕೆಲಸವನ್ನು ಮೂರು ವರ್ಷದಲ್ಲಾದರೂ ಕೂಡ ಪೂರ್ತಿಸುವುದಕ್ಕೆ ಮಾಡಿಕೊಡಬೇಕೆಂಬುದನ್ನು ಸರ್ಕಾರದ ಗಮನಕ್ಕೆ ತರುವುದೇ ನನ್ನ ಉದ್ದೇಶ.

Inefficient administration of Municipalities.

ಶ್ರೀ ಟಿ. ಸಿ. ಬಸಪ್ಪ (ತರೀಕೆರೆ).—ಮೈಸೂರು ಸಂಸ್ಥಾನದಲ್ಲರುವ ಪೌರಸಭೆಗಳ ವಿಚಾರದಲ್ಲಿ ಸರ್ಕಾರದ ಗಮನವನ್ನು ಎಳೆಯುವುದಕ್ಕೋಸ್ಕರ ಈ ಖೋತಾ ನಿರ್ಣಯವನ್ನು ತಂದಿದ್ದೇನೆ. ಮುಖ್ಯವಾಗಿ ಎಲ್ಲರಿಗೂ ಗೊತ್ತಿರುವಹಾಗೆ ಅನೇಕ ಪೌರಸಭೆಗಳ ಆಡಳಿತತ್ಯಪ್ತಿಕರವಾಗಿಲ್ಲ. ಅದಕ್ಕೆ ಅನೇಕ ಕಾರಣಗಳುಂಟು. ಈ ವಿಷಯದಲ್ಲಿ ಸರ್ಕಾರದ ಹತ್ತೋಟಿ ಏನೂ ಇಲ್ಲವೆಂದು ಹೇಳಿದರೆ ತಪ್ಪಾಗಲಾರದು ಎಂದೆನ್ನಿಸುತ್ತದೆ. ಏಕೆಂದರೆ ಅನೇಕ ಪೌರಸಭೆಗಳಲ್ಲಿ ತೀರ್ಮಾನಗಳಿಲ್ಲದೆ ಅನೇಕ ಕೆಲಸಗಳನ್ನು ಮಾಡಿರತಕ್ಕ ನಿರ್ಣಯನಗಳ ವಿಚಾರದಲ್ಲಿ ಸರ್ಕಾರದವರು ಇಪ್ಪೊತ್ತಿನವರೆಗೂ ಏನೂ ಕಾರ್ಯಕ್ರಮ ತೆಗೆದುಕೊಂಡಿಲ್ಲ. ಅನೇಕವೇಳೆ Deputy Commissioner ರವರು ಒಂದು ಆರ್ಡರ್ ಪಾಸ್ ಮಾಡಿದಪಕ್ಷದಲ್ಲಿ, ಕಮಿಷನರ್ ಅವರ ಮೇಲೆ ಸರ್ಕಾರದವರು stay order ಕೊಟ್ಟಪಕ್ಷದಲ್ಲಿ, stay order ಬಗ್ಗೆ ಇಪ್ಪೊತ್ತಿನವರೆಗೂ ಸಹ ಒಂದು ಅಂತಿಮ ತೀರ್ಮಾನ ಕೊಟ್ಟಿಲ್ಲ. Stay order permanent ಆಗಿದೆ. ಅನೇಕ ಪೌರಸಭೆಗಳಲ್ಲಿ ಆಡಳಿತಮಹಿಸತಕ್ಕಂಥ ಅಧ್ಯಕ್ಷರು ಮತ್ತು ಇನ್ನು ಕೆಲವರು ಮಿತಿಮೀರಿದ ಕೆಲಸ ಮಾಡುವುದಕ್ಕೆ ಅವಕಾಶವಾಗಿದೆ. ಚೀಫ್ ಆಫೀಸರು Presidentರ ಕೈಕೆಳಗೆ ಇರುವವರು. ಆದ್ದರಿಂದ ಮೇಲಕ್ಕೆ ರಿಪೋರ್ಟ್ ಸಹ ಮಾಡುವ ಹಾಗಿಲ್ಲ. ಇದರಿಂದ ಏನಾಗಿದೆ ಎಂದರೆ ಪೌರಸಭೆಗಳ ಆಡಳಿತ ಬಹಳ ಕೆಳಗಿನ ಅಂತಸ್ತಿಗೆ ಇಳಿದಿದೆ ಎಂದು ಹೇಳಿದರೆ ತಪ್ಪಾಗಲಾರದು. ಆದ್ದರಿಂದ ಸರ್ಕಾರದವರು ಬರತಕ್ಕಂಥ ಪ್ರತಿಯೊಂದು ವಿಚಾರದಲ್ಲಿಯೂ ಆಗಾಗ್ಗೆ ಜಾಗ್ರತೆಯಾಗಿ final ತೀರ್ಮಾನ ಕೊಟ್ಟಪಕ್ಷದಲ್ಲಿ ಒಂದು ಸುವ್ಯವಸ್ಥಿತವಾದ ಆಡಳಿತ ಉಂಟಾಗುತ್ತದೆ. ಏರಡನೆಯದಾಗಿ ಈಗ ಇರತಕ್ಕಂಥ ಕಾನೂನಿನಲ್ಲಿ ತಿದ್ದುಪಡಿಯನ್ನು ಮಾಡಬೇಕಾದುದು ಅವಶ್ಯಕವೆಂದು ಅನ್ನಿಸುತ್ತದೆ. ಅದನ್ನು ಮಾಡದಿದ್ದಪಕ್ಷದಲ್ಲಿ ನಿಜವಾಗಿ ಕೆಲವೇ ವರ್ಷಗಳಲ್ಲಿ ಪೌರಸಭೆಗಳ ಸ್ಥಿತಿ ಬಹಳ ಕೆಟ್ಟು ಅವು ಹಿಂದಕ್ಕೆ ಹೋಗುತ್ತದೆ. ಆದ್ದರಿಂದ ಸರ್ಕಾರದವರು ಈ ಬಗ್ಗೆ ತೀವ್ರ ಗಮನಕೊಟ್ಟು ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂದು ಈ ನಿರ್ಣಯವನ್ನು ಮುಂದಿಡುತ್ತೇನೆ.

I. V. C. Road in Shimoga Taluk.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ (ಶಿವಮೊಗ್ಗ).—ಮಾನ್ಯ ಅಧ್ಯಕ್ಷರೇ, ಈ ಖೋತಾ ನಿರ್ಣಯವನ್ನು ಈ ಸಭೆಯ ಮುಂದೆ ಇಡುತ್ತಾ, ನಾನು ಶಿವಮೊಗ್ಗಾ ತಾಲ್ಲೂಕಿನಲ್ಲಿ ಕೆಲವು ಗ್ರಾಮಗಳಿಗೆ ರಸ್ತೆ ಇಲ್ಲದೆ ಅನೇಕ ವರ್ಷಗಳಿಂದ ತೊಂದರೆ ಆಗಿರತಕ್ಕ ವಿಚಾರಗಳನ್ನು ತಮ್ಮ ಗಮನಕ್ಕೆ ತರಬೇಕು ಎಂದು ಇಷ್ಟಪಡುತ್ತೇನೆ. ಶಿವಮೊಗ್ಗಾದಿಂದ ಠಾಮೇ ಕೊಪ್ಪಕ್ಕೆ ಒಂದು ರಸ್ತೆ ಇದೆ. ಸುಮಾರು 20-30 ವರ್ಷಗಳ ಕೆಳಗೆ 4-5 ಹಳ್ಳಿಗಳಲ್ಲಿ 5 ಸಾವಿರ ಪ್ರಜಾ ಸಂಖ್ಯೆ ಇದ್ದುದು ಈಗ 4 ಹಳ್ಳಿಗಳೂ ಇಲ್ಲದೆ ಒಂದು ಹಳ್ಳಿಯಲ್ಲಿ ಮಾತ್ರ ನಾಲ್ಕು ಮನೆಗಳಿವೆ. ಆದ್ದರಿಂದ ಆ ರಸ್ತೆ ಬಹಳ ಅವಶ್ಯಕ. ಇಲ್ಲಿ channel ಬಂದಿದೆ. ರಸ್ತೆಗಳೇ ಇಲ್ಲ. ರಸ್ತೆ ಇಲ್ಲದೆ ಜನಗಳು ಬಿಟ್ಟು ಬಂದಿದ್ದಾರೆ; ಜಮೀನು ಬೇಚರಾಕ್ ಆಗಿದೆ. ಜಮೀನು ಸಾಗು ಮಾಡದೆ ಕಂದಾಯ ಕೊಟ್ಟುಕೊಂಡು ಇದ್ದಾರೆ. ಇಲ್ಲಿಗೆ ರಸ್ತೆ ಮಾಡಿಸಿಕೊಟ್ಟರೆ 1,000 ಎಕರೆ ಸಾಗುವಳಿಗೆ ಬರುತ್ತದೆ ಎಂಬುದರಲ್ಲಿ ಅನುಮಾನವಿಲ್ಲ. ಕೊಮ್ಮನ ಹಾಳು, ಹರಮಗಟ್ಟೆ ಇವುಗಳಿಗೆ ರಸ್ತೆಗಳಿಲ್ಲದೆ ಬೇರೆ ಕಡೆಯಿಂದ ಬರಬೇಕಾಗಿದೆ. 10-15 ಮೈಲಿಗಳು ಸುತ್ತುವರಿದುಕೊಂಡು ಬರಬೇಕಾಗಿದೆ. ಬೀರನಹಳ್ಳಿಯಿಂದ ಭದ್ರಾವತಿಗೆ ಬರತಕ್ಕ Inter-Village Communication ರಸ್ತೆ ಇದೆ. ಆದ್ದರಿಂದ Rural Development Fund ನಿಂದ ಈ 3 ರಸ್ತೆಗಳನ್ನು ಮಾಡಿಸಿಬಿಟ್ಟು ಹಳ್ಳಿಯಿಂದ ಹಳ್ಳಿಗೆ ಮಾರ್ಗಾನುಕೂಲ ಮಾಡಿದರೆ ವ್ಯವಸಾಯಾಭಿವೃದ್ಧಿಯಾಗುತ್ತದೆ ಎಂದು ಹೇಳಿ ಈ ಖೋತಾ ನಿರ್ಣಯವನ್ನು ತಮ್ಮ ಮುಂದೆ ಇಟ್ಟಿದ್ದೇನೆ.

Engineering Section under Rural Development Commissioner.

*Sri S. SRINIVASA IYENGAR (T. Narasipur).—Sir, the Rural Development Commissioner controls an expenditure of nearly Rs. 80 lakhs in a year. There is a specific allotment under 40-A and in addition to that, the Government of India's grant of Rs. 16 lakhs towards Local Development Works is also being spent by the Rural Development Commissioner. The Works estimated by the Rural Development Commissioner have to be executed by an agency over which the Rural Development Commissioner has no control. Consequently, many works remain unexecuted and such of those works that are entrusted to the Public Works Department will not be completed in time and some times there

will be so much of delay that would occasion a revision of estimates. Even as it is, Rural Development Commissioner must give certain percentage towards tools and plants and the staff of the Public Works Department. Originally, this percentage was 3 per cent of the estimate. Now, I think they have to pay about 12½ per cent. Therefore, to avoid delay and to have good work and to speed up the execution of these works and to improve the village position, I think an Engineering Section under the Rural Development Commissioner would serve the purpose. Even as it is, as I have already said, the Rural Development Commissioner will have to give credit towards Tools and Plants to the Public Works Department. He can as well make use of that amount in maintaining a separate section under him. The Rural Development Commissioner must be given power of Superintending Engineer so that he can sanction estimates straightaway and ask the Engineering Staff to execute the work immediately. If such a system is adopted, more work could be done in every village quickly and much of the abuse could be avoided and they may really spend the amount that has been allotted in a year and improve the position of the villages.

Rural Road Development Scheme for T. Narasipur Taluk.

Sir, one more thing I want to impress is that Rural Road Development Co-operative Scheme should be introduced to T.-Narasipur Taluk. In Supplementary Estimates, I notice that this scheme has been put into operation in Hassan District alone. So, I submit that, as a number of villages remain without road connection in T. Narasipur Taluk, this scheme might be put into operation in T. Narasipur Taluk. I assure you, Sir, that the people of T. Narasipur Taluk are as ready to give assistance as the people of Hassan and if this scheme is introduced to T. Narasipur Taluk we can at least see that some villages are reached by roads.

Grants for I. V. C. Road and Well Works.

ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಗ್ರಾಮಾಂತರ ಜನಗಳಿಗೆ ಕುಡಿಯುವ ನೀರಿನ ಅವಶ್ಯಕತೆಯನ್ನು ಅನೇಕ ವರ್ಷಗಳಿಂದಲೂ ಈ ಸರ್ಕಾರದವರು ಒದಗಿಸುವುದಕ್ಕೆ ಸಾಧ್ಯವಾಗಲಿಲ್ಲ. ವರ್ಷ ವರ್ಷ ಇದಕ್ಕೆ ಹೆಚ್ಚು ಹೆಚ್ಚಾಗಿ ಹಣ ಒದಗಿಸಿ ನಮ್ಮನ್ನೆ ಲೆಖ್ಖದಲ್ಲಿ ತೋರಿಸುತ್ತಾರೆಯೇ ಹೊರತು ಖರ್ಚಾಗುವ ಹಣ ನೋಡಿದರೆ ತೀರಾ ಕಡಿಮೆ. ಕಳೆದವರ್ಷ, ಅಂದರೆ 53-54 ರಲ್ಲಿ ಕುಡಿಯುವ ನೀರಿಗಾಗಿ ಕೇವಲ 4 ಲಕ್ಷ 63 ಸಾವಿರ ಖರ್ಚಾಗಿದೆ. Rural Communication ಗಾಗಿ 165 ಸಾವಿರ ರೂಪಾಯಿ ಖರ್ಚಾಗಿದೆ. 1954-55 ರಲ್ಲಿ 10 ಲಕ್ಷ ಒದಗಿಸಿದರು; revised estimate ಪ್ರಕಾರ ಕೇವಲ 5 ಲಕ್ಷ ಮಾತ್ರ ಖರ್ಚಾಗಿದೆ. 1955-56 ರಲ್ಲಿ 10 ಲಕ್ಷ ಕೊಟ್ಟಿದ್ದಾರೆ. ಅದರಲ್ಲಿ ಎಷ್ಟು ಖರ್ಚಾಗುತ್ತದೆ ಎಂಬುದನ್ನು ನೋಡಬೇಕಾಗಿದೆ. 10 ಲಕ್ಷದೊಳಗೆ ಕೆಲವು ನಿಗದಿಯಾದ ಕೆಲಸಗಳಿಗೆ ಈಗಾಗಲೇ 2-3 ಲಕ್ಷ ಹೋಗುತ್ತದೆ. ಈ ವರ್ಷವೂ ಕೊಟ್ಟಿರುವ ಲೆಖ್ಖದ ಪ್ರಕಾರ Rural Communication ಗೆ 4 ಲಕ್ಷ ಕೊಟ್ಟಿದ್ದಾರೆ. 1942 ನೇ ಇಸವಿಯಿಂದಲೂ ಕೂಡ I.V.C. ರೋಡ್ ಗಳಿಗೋಸ್ಕರ ನರಕಾರದವರು ಹೊಸದಾಗಿ ಸಾಗಾಣಿಕೆ ದಾರಿಗೋಸ್ಕರ, ರಸ್ತೆಗಳನ್ನು ಮಾಡುವುದಕ್ಕೋಸ್ಕರ ಈಗಾಗಲೇ 4 ಲಕ್ಷ ರೂಪಾಯಿಗಳನ್ನು ಕೊಟ್ಟು ಗ್ರಾಮಗಳಲ್ಲಿ ಸಂಚಾರಕ್ಕೆ ಅನುಕೂಲವಾಗುವ ಹಾಗೆ ರಸ್ತೆಗಳನ್ನು ಮಾಡಿಸುತ್ತಿದ್ದಾರೆ. ಅದು ಏನೇನೂ ಸಾಲದು.

4 P.M.

ಈಗಿನ ರೇಟೂ ಕೂಡ ಅಪರೀತ ದುಬಾರಿಯಾಗಿದೆ. ಈಗ ಒದಗಿಸಿರುವ ಹಣ ಯಾವ ಮೂಲೆಗೂ ಸಾಕಾಗುವುದಿಲ್ಲ. ಮುಖ್ಯವಾಗಿ ಕುಡಿಯುವ ನೀರಿನ ಬಾವಿಗಳ ಬಗ್ಗೆ ಒಂದು ಶ್ವರಿತವಾದ ಪ್ರೋಗ್ರಾಂ ಹಾಕಿಕೊಂಡು ಜಾಗ್ರತೆಯಾಗಿ ಎಲ್ಲಾ ಗ್ರಾಮಗಳಿಗೂ ಒದಗಿಸುವುದು ಅತ್ಯಾವಶ್ಯಕ. ಮೊನ್ನೆ ಮಾನ್ಯ ರೆವಿನ್ಯೂ ಸಚಿವರು ಹೇಳಿದರು, ಇನ್ನೆರಡು ವರ್ಷಗಳೊಳಗೆ ಎಲ್ಲಾ ಗ್ರಾಮಗಳಿಗೂ ಕುಡಿಯುವ ನೀರಿನ ಬಾವಿಗಳನ್ನು ಕೊಡುತ್ತೇವೆ ಎಂದು. ಆದರೆ, ಇಲ್ಲಿ ಒದಗಿಸಿರುವ ಹಣ ಮಾತ್ರ ನೋಡಿದರೆ 10 ಲಕ್ಷ ರೂಪಾಯಿಗಳು! ಇದರಲ್ಲಿಯೂ ಎಷ್ಟು ಖರ್ಚಾಗುತ್ತದೋ ಗೊತ್ತಿಲ್ಲ.

ಶ್ರೀ ಎಸ್. ಹುಚ್ಚಮಾಸ್ತಿಗೌಡ (ಹುಲಿಯೂರು ದುರ್ಗ).—ಈ ವರ್ಷ 16½ ಲಕ್ಷ ಕೊಟ್ಟಿದೆ!

ಶ್ರೀ ಬಿ. ಹುಚ್ಚೇಗೌಡ.—ನೀವು ಕೊಟ್ಟಿರುವ ಹಣ 60-70 ಬಾವಿಗಳಿಗೂ ಕೂಡ ಆಗುವುದಿಲ್ಲ. ಹಾಲನಮ್ಮ ಸಂಸ್ಥಾನದಲ್ಲಿ ಸಾವಿರಾರು ಬಾವಿಗಳನ್ನು ತೋಡಿದ ಹೊರತು ನೀರಿನ ವ್ಯವಸ್ಥೆ ಸರಿಯಾಗುವುದಿಲ್ಲ. ಬೆಂಗಳೂರು ಸಿಟಿ ಮೈಸೂರು ಸಿಟಿಗಳ ವಿಷಯದಲ್ಲಾದರೋ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೀರಿ.

ಶ್ರೀ ಆರ್. ಅನಂತರಾಮ್ (ಚಾಮರಾಜ ಪೇಟೆ).—ಅವರಿಗೆ ಕೊಟ್ಟಿರುವುದು ಸಾಲವಾಗಿ; ಗ್ರಾಂಟಲ್ಲ.

ಶ್ರೀ ಬಿ. ಹುಚ್ಚೇಗೌಡ.—ಸಾಲವಾಗಿ ಕೊಟ್ಟಿರುವುದೇ ಅಲ್ಲ. ಚಾಮರಾಜ ವಾಟರ್ ವರ್ಕ್ಸ್‌ಗೆ ಎಷ್ಟು ಗ್ರಾಂಟ್ ಕೊಟ್ಟಿದ್ದೀರಿ, ನೋಡಿ. ಅದೇ

(ಶ್ರೀ ಬಿ. ಹುಚ್ಚೇಗೌಡ.)

ಪ್ರಕಾರ ಸರ್ಕಾರದವರು ಒಂದು ಪ್ರೋಗ್ರಾಂ ಹಾಕಿ ಕೊಂಡು ಸಂಸ್ಥಾನದ ಎಲ್ಲಾ ಹಳ್ಳಿಗಳಿಗೂ ಬಾವಿ ಗಳನ್ನು ಒದಗಿಸಲಿಕ್ಕೆ ಇವೇ ಹಣವನ್ನು ಖರ್ಚು ಮಾಡಿ ದ್ದರೆ ಬಹುಶಃ ಎಲ್ಲರಿಗೂ ಇದುವರೆಗೆ ಒದಗಿಸಬಹು ದಾಗಿತ್ತು. ಕುಡಿಯುವ ನೀರಿನ ಅವಶ್ಯಕತೆಯನ್ನು ಪೂರೈಸುವವರೆಗೂ ಸರ್ಕಾರದವರು ತಮ್ಮ ಆದ್ಯ ಕರ್ತವ್ಯವನ್ನು ಪೂರೈಸಿದಂತಾಗುವುದಿಲ್ಲ.

ಹಳ್ಳಿಗಳಿಗೆ ಸಂಚಾರ ಮಾರ್ಗಗಳೂ ಅಷ್ಟೇ ಅವಶ್ಯಕ. ಕೇಂದ್ರಸರ್ಕಾರದವರೇನೋ ಅಲ್ಪ ಸ್ವಲ್ಪ ಗ್ರಾಂಟನ್ನು ನಮ್ಮ ಸಂಸ್ಥಾನಕ್ಕೆ ಕೊಡುತ್ತಿದ್ದಾರೆ. ಅದನ್ನು ಸರಿಯಾಗಿ ನಮ್ಮ ಸರ್ಕಾರದವರು ಹಂಚು ತ್ತಿಲ್ಲ. ಜೊತೆಗೆ ಕೆಲವು ಕಡೆ ರಸ್ತೆಗಳನ್ನು ಮಾಡಿದ್ದರೂ ಎತ್ತಿನ್ಗೆ ಅನುಕೂಲವಾಗಿಲ್ಲ. ಈ ಗ್ರಾಂಟನ್ನು ಕೊನೆಯ ಪಕ್ಷ 50 ಲಕ್ಷ ರೂಪಾಯಿಗಳಿಗಾದರೂ ಹೆಚ್ಚಿಸಿ ಕೊಡಬೇಕೆಂದು ಹೇಳುತ್ತೇನೆ. ಮನುಷ್ಯರಿಗೆ ಬೇಕಾಗಿರುವುದು ಮೊದಲನೆಯದು ಗಾಳಿ. ಅದನ್ನು ಬಿಟ್ಟರೆ ನೀರು. ನೀರನ್ನಾದರೂ ಒದಗಿಸಲಿಕ್ಕೆ ಹೆಚ್ಚು ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ.

Sri R. MUNISWAMIAH.—Your cut motion does not propose to give that.

ಶ್ರೀ ಬಿ. ಹುಚ್ಚೇಗೌಡ.—ಈ ಖೋತಾ ನಿರ್ಣಯದ ವಿಚಾರ ಗ್ರಾಮಾಂತರಗಳಲ್ಲಿ ವಾಸಮಾಡತಕ್ಕ ಜನರಿಗೆ ಸೌಲಭ್ಯಗಳನ್ನು ಒದಗಿಸಿಕೊಡುವುದಕ್ಕೆ ಸಂಬಂಧ ಪಟ್ಟಿಂಥಾದ್ದೇ.

Rural Sanitation.

*ಶ್ರೀ ಬಿ. ಎಸ್. ಬೋರಣ್ಣಗೌಡ (ಬೇಲೂರು).—ಅಧ್ಯಕ್ಷರೇ, ಮುನಿಸಿಪಾಲಿಟಿಗಳಲ್ಲಿ ಸ್ಯಾನಿಟೇಷನ್ನಿಗಾಗಿ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿರುವ ವಿಚಾರ ಸರ್ಕಾರದವರಿಗೆ ಗೊತ್ತಿದೆ. ಆದರೆ ಹಳ್ಳಿಗಾಡಿನಲ್ಲಿನ ರೀತಿ ನೀತಿ, ಅಲ್ಲಿನ ಆರ್ಥಿಕ ಸ್ಥಿತಿ ಎಲ್ಲಾ ನಿಮಗೆ ಚೆನ್ನಾಗಿ ಗೊತ್ತಿದ್ದರೂ ಸಹ Rural Sanitation ಗಾಗಿ ಯಾವ ಕಡೆಯಲ್ಲೂ ಹೆಚ್ಚಾಗಿ ಹಣ ಖರ್ಚುಮಾಡುತ್ತಿಲ್ಲ. ದೊಡ್ಡ ದೊಡ್ಡ ಹಳ್ಳಿಗಳಿಗೆ, 4,000-5,000 ಜನರಿರುವ ಹಳ್ಳಿಗಳಿಗೆ Rural Sanitation ನ್ನಿಗೆ, ಕಕ್ಕಸುಗಳನ್ನು ಕಟ್ಟಿಸುವುದಕ್ಕೆ, ಒಳಚರಂಡಿ ವ್ಯವಸ್ಥೆಗೆ ತಕ್ಕ ಏರ್ಪಾಡು ಮಾಡುವುದು ಬಹಳ ಅಗತ್ಯವೆಂದು ಹೇಳುತ್ತೇನೆ.

Rural Communication and Drinking Water Wells.

ಈಗ ಮಾನ್ಯಮಿತ್ರರಾದ ಶ್ರೀ ಹುಚ್ಚೇಗೌಡರು ಹಳ್ಳಿ ಗಾಡಿಗೆ ಬಾವಿಗಳನ್ನು ಕೊಡತಕ್ಕ ವಿಚಾರವನ್ನು ಮಾತ ನಾಡಿದ್ದಾರೆ. ಅದೇ ವಿಚಾರದಲ್ಲಿ ಒಂದು ಖೋತಾ ಸೂಚನೆಯೂ ಇದೆ. ಇದನ್ನು ಸಮರ್ಥಿಸುತ್ತಾ ಮುನಿಸಿಪಾಲಿಟಿಗಳಿಗೆ ಕೋಟ್ಯಾಂತರ ರೂಪಾಯಿ ಗಳನ್ನು ಸಾಲಮಾಡಿ ಒಂದೊಂದು ಮುನಿಸಿಪಾಲಿಟಿಗೂ ಒಂದು ಲಕ್ಷ, ಹತ್ತು ಲಕ್ಷ ರೂಪಾಯಿಗಳನ್ನು ಕೊಟ್ಟು ಕುಡಿಯುವ ನೀರಿನ ವ್ಯವಸ್ಥೆ ಮಾಡಿದ್ದೀರಲ್ಲಾ, ಮಿಕ್ಕ 17,000 ಹಳ್ಳಿಗೇನು ಮಾಡಿದ್ದೀರಿ ಎಂದು ಕೇಳ ಬಯಸುತ್ತೇನೆ. ಒಂದು ಬಾವಿ 1,800 ರೂಪಾಯಿ ಗಳಿಗೆ ಕಡಮೆ ಆಗುವುದಿಲ್ಲ. ಹೀಗಾದರೆ ನೀವು ಕೊಟ್ಟಿರತಕ್ಕ 10,000 ರೂಪಾಯಿಗಳು ಎಷ್ಟು ಹಳ್ಳಿಗಳಿಗೆ ಕೊಡುವುದಕ್ಕಾಗುತ್ತದೆಂಬುದನ್ನು ನೀವೇ ಯೋಚನೆ ಮಾಡಬಹುದು. ಮಾನ್ಯ ಮಂತ್ರಿ ಗಳು ಎರಡು ವರ್ಷಗಳಲ್ಲಿ ಎಲ್ಲಾ ಗ್ರಾಮಗಳಲ್ಲೂ ನೀರಿನ ವ್ಯವಸ್ಥೆಮಾಡುತ್ತೇವೆಂದು ಹೇಳಿದರು. ಹೀಗಾ ದರೆ ಅದು ಸಾಧ್ಯವೇ? ಅವರ ಮಾತು ಎಷ್ಟು ಅರ್ಥ ಗರ್ಭಿತವಾಗಿದೆಯೆಂಬುದನ್ನು ಯೋಚನೆಮಾಡಿ. ಆದ್ದ ರಿಂದ ಮುನಿಸಿಪಾಲಿಟಿಗಳಿಗೆ ಯಾವ ಏರ್ಪಾಡು ಮಾಡಿದ್ದೀರೋ ಅದೇ ರೀತಿ ಹಳ್ಳಿಗಾಡಿನವರಿಗೂ ಕುಡಿಯುವ ನೀರಿನ ವ್ಯವಸ್ಥೆಮಾಡಿ. ಸಾಲವನ್ನಾದರೂ ಎತ್ತಿ 2-3 ಕೋಟಿ ರೂಪಾಯಿಗಳ ಒಂದು ಫಂಡನ್ನು ಮಾಡಿ ಪ್ರತಿಯೊಂದು ಕಡೆಯೂ ಕುಡಿಯುವ ನೀರಿನ ವ್ಯವಸ್ಥೆಮಾಡಿ ಕೊಟ್ಟರೆ ಹಳ್ಳಿಗಾಡಿನ ಜನರ ರೀತಿ ಸ್ವಲ್ಪ ಉತ್ತಮವಾಗುತ್ತವೆಂದು ಹೇಳುತ್ತೇನೆ. ತತ್ಕಾಲಿಕ ಮಳೆನಾಡಿನಲ್ಲಾದರೋ ಮಳೆಗಾಲದಲ್ಲಿ ನೀರಿನ ಅನುಕೂಲ ಅಷ್ಟಿದ್ದರೂ ಬೇಸಿಗೆಯ ಕಾಲದಲ್ಲಿ ಎಂಟು ಮೂರು ಮೈಲಿಗಳ ದೂರ ಹೋದರೂ ನೀರು ಸಿಕ್ಕುವುದಿಲ್ಲ. ದನಕರುಗಳಿಗಂತೂ ಹೊಳೆಯ ಆಸರೆ ಯಲ್ಲದೆ ಬೇರೆ ಗತಿಯಿಲ್ಲ. ಆದ್ದರಿಂದ ಮಲೆನಾಡಿ ನಲ್ಲೂ ಮತ್ತು ಬೇರೆ ಕಡೆಗಳಲ್ಲೂ ಬಾವಿಗಳನ್ನು ಮಾಡಿಸಿಕೊಡುವುದು ಅಗತ್ಯ ಕರ್ತವ್ಯ. ಇದನ್ನು ಮಾನ್ಯ ಮಂತ್ರಿಗಳು ಗಮನದಲ್ಲಿಟ್ಟುಕೊಂಡು ತಕ್ಕ ವ್ಯವಸ್ಥೆಮಾಡುವುದಲ್ಲದೆ ಮಲೆನಾಡಿಗೆ ಹೆಚ್ಚಿಗೆ ಗಮನ ಕೊಡಬೇಕೆಂದು ಹೇಳಿ ನನ್ನ ಖೋತಾ ಸೂಚನೆಯನ್ನು ಮುಂಡಿಸುತ್ತೇನೆ.

Road between Arasikere and Kuravanka.

ಶ್ರೀ ಕೆ. ಪಂಚಾಕ್ಷರಯ್ಯ (ಅರಸೀಕೆರೆ).—ಅಧ್ಯಕ್ಷರೆ, ಅರಸೀಕೆರೆ ಮತ್ತು ಕುರುವಂಕ ಗ್ರಾಮಗಳಿಗೆ ಮಧ್ಯೆ ರಸ್ತೆ ನಿರ್ಮಾಣ ಮಾಡುವ ವಿಚಾರದಲ್ಲಿ ಸರ್ಕಾರದವರು ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ ನನ್ನ ಖೋತಾ ಸೂಚನೆಯನ್ನು ತಂದಿದ್ದೇನೆ. ಈ ರಸ್ತೆ ಯಿಂದ ಅಗತಕ್ಕ ಪ್ರಯೋಜನ ಕಡೂರು ತಾಲ್ಲೂಕಿನಿಂದ ಅರಸೀಕೆರೆಗೆ ಬರತಕ್ಕ ಗಾಡಿಗಳು ಈಗ ಬಳಸಿಕೊಂಡು ಬರುವುದನ್ನು ತಪ್ಪಿಸಿದ ಹಾಗಾಗುತ್ತದೆ. ಅಲ್ಲದೆ ನಮ್ಮ ತಾಲ್ಲೂಕಿನ 20 25 ಗ್ರಾಮಗಳಿಗೆ ಪ್ರಯೋಜನವಾಗುತ್ತೆ. ಅರಸೀಕೆರೆಗೂ ಕಡೂರು ತಾಲ್ಲೂಕಿಗೂ ನೇರವಾದ ಸಂಬಂಧ ಏರ್ಪಟ್ಟು ರೈತ ರಿಗೂ ಹಳ್ಳಿ ಗಾಡಿನವರಿಗೂ ಬಹಳ ಸಹಾಯವಾಗಿ ಎಷ್ಟೋ ದುಡ್ಡು ಉಳಿತಾಯವಾಗುತ್ತದೆ. ಇಂಥ inter-communication ಏರ್ಪಾಡಿನಿಂದ ಹಳ್ಳಿ ಗಾಡಿನವರಲ್ಲಿ ಪರಸ್ಪರ ಸಂಪರ್ಕ ಬೆಳೆದು ಅವರ ಪುರೋಭಿವೃದ್ಧಿಗೆ ಅನುಕೂಲವಾಗುತ್ತದೆಂದು ಹೇಳಿ ಈ ಕತ್ತರಿ ನಿರ್ಣಯವನ್ನು ನಾನು ಸಭೆಯ ಮುಂದಿಡುತ್ತೇನೆ.

ಶ್ರೀ ಎ. ವಿ. ನರಸಿಂಹರೆಡ್ಡಿ (ಬೆಂಗಳೂರು ದಕ್ಷಿಣ).—ಸ್ವಾಮಿ, ನಾನು ನಾಲ್ಕು ಖೋತಾ ಸೂಚನೆಗಳನ್ನು ಕಳುಹಿಸಿದ್ದೇನೆ. . . .

Mr. SPEAKER.—Only Cut Motions 100 and 102 are agreed to be moved.

Drinking Water Wells in Bangalore Taluk.

ಶ್ರೀ ಎ. ವಿ. ನರಸಿಂಹರೆಡ್ಡಿ.—ಅಧ್ಯಕ್ಷರೇ, ಕುಡಿ ಯುವ ನೀರಿನ ಬಾವಿಗಳನ್ನು ಹಳ್ಳಿಗಳಲ್ಲಿ ಒದಗಿಸುವ ವಿಚಾರದಲ್ಲಿ ಅದರಲ್ಲೂ ಬೆಂಗಳೂರು ದಕ್ಷಿಣ ತಾಲ್ಲೂಕಿ

ನಲ್ಲಿ ಬೇಗ ಒದಗಿಸಬೇಕೆಂದು ಹೇಳಿ ಈ ನಿರ್ಣಯವನ್ನು ನಾನು ಕಳುಹಿಸಿದ್ದೇನೆ. ಶ್ರೀಮತಿ ಜಿ. ಎ. ತಿಮ್ಮಕ್ಕಪ್ಪ ಗೌಡರು ಕುಡಿಯುವ ನೀರಿನ ಬಾವಿಗಳನ್ನು ಎಲ್ಲಾ ಹಳ್ಳಿಗಳಿಗೂ ಕೊಡುವ ಭರವಸೆಯನ್ನು ಸರ್ಕಾರದವರು ಕೊಟ್ಟಿರುವುದಾಗಿ ಹೇಳಿದರು. ಆ ಮಾತನ್ನು ಕೇಳಿ ಬಹಳ ಸಂತೋಷವಾಗುತ್ತದೆ. ಆದರೆ ವಾಸ್ತವವಾಗಿ ಅದು ಕಾರ್ಯಗತವಾಗಬೇಕೆಂದು ನಾನು ಹಾರೈಸುತ್ತೇನೆ. ನೀರಿನ ಬಾವಿಗಳನ್ನು ಕೊಡತಕ್ಕ ವಿಷಯದಲ್ಲಿ ಸರ್ಕಾರದವರು ಒಂದು ಕ್ರಮವನ್ನು ಅನುಸರಿಸುತ್ತಿದ್ದಾರೆ. ಯಾವ ಹಳ್ಳಿಯವರು ಅರ್ಜಿಗಳನ್ನು ಮೇಲಿಂದ ಮೇಲೆ ಕೊಟ್ಟು ಸರ್ಕಾರದವರ ಗಮನವನ್ನು ಆಗಾಗ್ಗೆ ಸೆಳೆಯುತ್ತಿರುತ್ತಾರೋ ಅಲ್ಲಿಗೆ ಮಾತ್ರ ಬಾವಿಗಳನ್ನು ಕೊಡುತ್ತಾರೆ. ಎಲ್ಲಿ ಜನರ ಕೂಗು ಸರ್ಕಾರಕ್ಕೆ ಮುಟ್ಟುವುದಿಲ್ಲವೋ ಆ ಕಡೆ ಸರ್ಕಾರದವರ ಗಮನವೂ ಹೋಗುವುದಿಲ್ಲ. ಆದ್ದರಿಂದ ನಾನು ಹೇಳುವುದು ಪ್ರತಿಯೊಂದು ತಾಲ್ಲೂಕಿನಲ್ಲೂ ತಾಲ್ಲೂಕಾ ಮಳೆ ಎಷ್ಟು ಹಳ್ಳಿಗಳಿಗೆ ಕುಡಿಯುವ ನೀರಿನ ಬಾವಿಗಳಿವೆ, ಎಷ್ಟು ಹಳ್ಳಿಗಳಿಗೆ ಇಲ್ಲ ಎಂಬ ವಿಚಾರ ವಿನಿಮಯ ಮಾಡಿಕೊಂಡು ಪ್ರತಿವರ್ಷವೂ ಇಷ್ಟಿಷ್ಟು ಬಾವಿಗಳನ್ನು ಕೊಡುತ್ತಾ ಹೋದರೆ ಎಲ್ಲರಿಗೂ ಬಾವಿಗಳು ಸಿಕ್ಕುತ್ತವೆ, ತಮ್ಮ ಕಾರ್ಯಕ್ರಮ ಕಟ್ಟಿಯಂತೆ ಕಾರ್ಯ ಸಾಧನೆಯನ್ನೂ ಮಾಡಿದಂತಾಗುತ್ತದೆ. ಆರೀತಿಯಾಗಿ ಒಂದು ಪಟ್ಟಿಯನ್ನು ತಯಾರು ಮಾಡಬೇಕೆಂದು ನಾನು ಸೂಚಿಸುತ್ತೇನೆ. ಅಲ್ಲದೆ, ಎಲ್.ಎಸ್.ಜಿ. ಮಂತ್ರಿಗಳು ಪಂಚವಾರ್ಷಿಕ ಯೋಜನೆಯಲ್ಲೂ ಕೂಡ ಈ ಕಾರ್ಯಕ್ರಮ ಸೇರಿಸಿಕೊಂಡು ಎದ ರಿಸಬೇಕೆಂದಿದೆಯೆಂದು ಹೇಳಿದರು. ಆದರೆ ನಮ್ಮ ಎಲ್.ಎಸ್.ಜಿ. ಮಂತ್ರಿಗಳನ್ನು ಸ್ನೇಹಿತರು ಈ ವಿಷಯದಲ್ಲಿ ಕೇಳಿದ್ದಕ್ಕೆ ಆರೀತಿಯಾಗಿ ಪಟ್ಟಿಯಾವುದನ್ನೂ ಈವರೆಗೂ ಮಾಡಿಲ್ಲವೆಂದರು. ಹೀಗಾದರೆ ಅವರ ಉದ್ದೇಶ ಸಫಲವಾಗುವುದಿಲ್ಲ. ಯಾವುದೊಂದು ಕಾರ್ಯ ಮಾಡಬೇಕಾದರೂ ನಿರ್ದಿಷ್ಟವಾದ ಒಂದು ಯೋಜನೆಯಿಟ್ಟುಕೊಂಡು ಮಾಡಬೇಕೇ ಹೊರತು ಅನಿರ್ದಿಷ್ಟವಾಗಿ ಮಾಡ ಹೋದರೆ ಯಾವುದೂ ಸರಿಹೋಗುವುದಿಲ್ಲ. ಇದನ್ನು ಗಮನದಲ್ಲಿಟ್ಟುಕೊಂಡು ಮಾಡಬೇಕೆಂದು ಹೇಳುತ್ತೇನೆ.

Rural Communications.

ಇನ್ನೊಂದು, ಹಳ್ಳಿಗಳವರಿಗೆ ರಸ್ತೆಗಳನ್ನು ಕಟ್ಟಿಸಿ ಕೊಡುವ ವಿಚಾರ. ಹಳ್ಳಿಗಳಲ್ಲಿ ಈ ಹೊತ್ತು ಸಂಚಾರ ಸೌಕರ್ಯಗಳ ವಿಷಯ ಬಹಳ ಅವ್ಯವಸ್ಥೆಯಿಂದಿದ್ದು ಹಳ್ಳಿಯ ಜನರ ಓಡಾಟಕ್ಕೆ ಮತ್ತು ದಿನಚರಿಯ ಕಾರ್ಯಗಳಿಗೆ ಬಹಳ ಅಡಚಣೆಯಾಗಿದೆ ರಸ್ತೆಗಳನ್ನು ನೀವು ಮೂರು ಭಾಗಗಳಾಗಿ ವಿಂಗಡಿಸಿದ್ದೀರಿ. ಒಂದು P.W.D. ಯವರು ಮಾಡತಕ್ಕದು, ಇನ್ನೊಂದು ಜಿಲ್ಲಾ ಬೋರ್ಡಿನವರು ಮಾಡತಕ್ಕದು, ಇನ್ನೂ ಕೆಲವು ಗ್ರಾಮ ಪಂಚಾಯಿತಿಗಳು ಮಾಡತಕ್ಕದು. ಈಗಿರ ತಕ್ಕ ರೀತಿಯಲ್ಲಿ ಗ್ರಾಮ ಪಂಚಾಯಿತಿಗಳಿಗೆ ಲೆಕ್ಕಾಚಾರವಾಗಿ ಈ ಬಗ್ಗೆ ಹಣ ಒದಗಿಸಿದರಾದರೂ ಈ ಕೆಲಸ ಸರಿಯಾಗಿ ನಡೆಯುತ್ತದೆನ್ನಬಹುದು. ಈಗ ಅದನ್ನೂ ಮಾಡುತ್ತಿಲ್ಲ. ಯಾವಯಾವ ಗ್ರಾಮಗಳವರು ಕೇಳುತ್ತಾರೋ, ಆ ಗ್ರಾಮಗಳಿಗೆ ಹಣ ಕೊಡಬೇಕೆಂದು ಮಾಡಿ ಅಲ್ಲಿಗೆ ಹಣ ಕೊಡುತ್ತಿದ್ದಾರೆ. ಹೀಗಾದರೆ ಪ್ರತಿಯೊಂದು ಹಳ್ಳಿಯಲ್ಲೂ ಈ ಸಮಸ್ಯೆಯನ್ನು ಎದುರಿಸುವುದು ಹೇಗೆ ಎಂಬುದೇ ಗೊತ್ತಾಗುವುದಿಲ್ಲ. ಆದ್ದರಿಂದ ಸರ್ಕಾರದವರು ಈ ಬಗ್ಗೆ ಒಂದು ನಿರ್ದಿಷ್ಟವಾದ ಯೋಜನೆ ಮಾಡಿಕೊಳ್ಳಬೇಕು. ಯಾವ ಯಾವ ಗ್ರಾಮಗಳ ರಸ್ತೆಗಳನ್ನು ಸರಿ ಮಾಡಬೇಕಾಗಿದೆ, ಆಯಾ ಪಂಚಾಯಿತಿಗಳಲ್ಲಿ ಹಣ ಎಷ್ಟಿದೆ, ಸರ್ಕಾರದವರು ಎಷ್ಟು ಗ್ರಾಂಟ್ ಕೊಟ್ಟರೆ ಅವರ ರಸ್ತೆಯ ಕೊರತೆ ನೀಗುತ್ತದೆಂಬುದನ್ನು ಯೋಚನೆಮಾಡಿ, ಅದರಂತೆ ಹಣ ಕೊಡಬೇಕೆಂದು ನಾನು ಸೂಚಿಸುತ್ತೇನೆ.

ಈ ಸಂದರ್ಭದಲ್ಲಿ ಒಂದು ಸೇತುವೆ ಕಟ್ಟುವ ವಿಚಾರವನ್ನು ತಮ್ಮ ಗಮನಕ್ಕೆ ತರಬೇಕಾಗಿದೆ. ಬೆಂಗಳೂರು ದಕ್ಷಿಣ ತಾಲ್ಲೂಕಿನಲ್ಲಿ ನಾಗವಾರ-ತುಣಿನಂದ್ರ ರಸ್ತೆಯಿದೆ. ಇದರಲ್ಲಿ ಸ್ವಲ್ಪಭಾಗ ಜಿಲ್ಲಾ ಬೋರ್ಡಿನ ರಸ್ತೆ ಇನ್ನು ಸ್ವಲ್ಪ ಭಾಗ ಸ್ಟೇಟ್‌ಫಂಡ್ ರಸ್ತೆ, ಮಿಕ್ಕಿದು I.V.C. ರಸ್ತೆಯಾಗಿ ಮುಂದಕ್ಕೆ ಬೆಂಗಳೂರು-ಚಿಕ್ಕಬಳ್ಳಾಪುರ ರಸ್ತೆಗೆ ಹೋಗಿ ಸೇರುತ್ತದೆ. ಹೀಗೆ ಈ ರಸ್ತೆ P. W. D., ಜಿಲ್ಲಾ ಬೋರ್ಡ್, ಪಂಚಾಯತಿ ಎಂದು ಮೂರು ಇಲಾಖೆಗಳಿಗೆ ಸೇರಿಕೊನೆಗೆ ಇದನ್ನು ನೋಡಿದವರೇ ಇಲ್ಲವಾಗಿದೆ. ಇದರ ಮಧ್ಯೆಯಿರುವ ಸೇತುವೆಯನ್ನು ಕಟ್ಟಿಸುವುದರಿಂದ 20 ಹಳ್ಳಿಗಳವರಿಗೆ ಇರುವ ತೊಂದರೆ ನಿವಾರಣೆಯಾಗುತ್ತದೆ. ಆದ್ದರಿಂದ ಇದನ್ನು ಆದಷ್ಟು ಬೇಗ ಮಾಡಿಸಿಕೊಟ್ಟು ಆದರೆ maintenance ಬಗ್ಗೆ ತಕ್ಕ ಏರ್ಪಾಡನ್ನು ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Utilisation of man-Power in executing Plans.

Sri H. C. LINGA REDDY (Malur).—This cut motion is intended to emphasize the necessity for making use of the man-power we have in the country in the task of building up of our nation. We have been formulating a number of plans and programmes and we are proposing taxes, but we are not suggesting the resources that are so essential and necessary for building up of our country. It appears that our State is preparing a Second Five-Year Plan to spend one hundred crores of rupees and in that connection we have got to carry out a number of policies and programmes. For all these things, I believe, Sir, this vast human power which we have in our country is one of the most important resources in the task of building up of the nation. Our country is, no doubt, a great country, but unfortunately for us, we have a number of people. There are some friends who often suggest that birth-control should be applied and the population should be reduced and all that. I, for one, am against it. We should not adopt such methods to curtail the population; on the other hand, this vast human power which we have in our country should be tapped for the carrying out various village

(SRI H. C. LINGA REDDY.)

improvement works. In fact it is not a new thing to us, Sir. We had set apart a considerable sum for carrying out the village improvement works just a few years ago. I think on every Monday, every family had to send one adult and a number of people so gathered together were engaged in the task of either road formation or cleansing the road or demolishing the old buildings in the village, or tree planting, like that the work was being carried out in every village. Now I think this kind of work should be carried out on a larger scale. It is very essential that our elder Statesmen and responsible people think about it along these lines and see how best the man power could be utilised along right channels for the building up of our country. In fact, we have the Bharath Sevak Samaj and also local development works for which the Government of India as well as the State Government are paying. But there we see these organisations are voluntary in nature. Formerly where the family was not sending an adult member for carrying out all the village improvement works, they had to pay at the rate of 8 annas or a rupee where they were not in a position to come and attend to the rural development work. I think even now it is better that some such thing is done. Otherwise, we will not be in a position to make available heavy amounts for the carrying out of these works. Therefore, I urge that it is better that something is done in this direction,

---

Road from Tiptur to Honnavalli.

*ಶ್ರೀ ಟಿ. ಜಿ. ತಿಮ್ಮೇಗೌಡ (ತಿಪಟೂರು).–ಸ್ವಾಮಿ, ಈ ಪೂರಕ ಸೂಚನೆಯನ್ನು ಸಭೆಯ ಮುಂದಿಡುತ್ತ ನಾನು ಒಂದು ಅಂಶವನ್ನು ಸರ್ಕಾರದವರ ಗಮನಕ್ಕೆ ತರಲಚ್ಚಿಸುತ್ತೇನೆ. ತಿಪಟೂರಿನಿಂದ *via* ಕಂಚಾಗಟ್ಟ, ತಿಂಮಲಾಪುರ ಈ ಗ್ರಾಮಗಳ ಮುಖೇನ ಹೊನ್ನವಳ್ಳಿಗೆ ಒಂದು ಐ.ಪಿ.ಸಿ. ರಸ್ತೆ ಮಂಜೂರಾಗಿದೆ. ಅದು ತುಮಕೂರು ಜಿಲ್ಲಾ ಬೋರ್ಡಿನ ಆಡಳಿತಕ್ಕೊಳಪಟ್ಟಿದೆ. ಈ ರಸ್ತೆ ಮಂಜೂರಾಗಿ ಇಲ್ಲಿಗೆ 4-5 ವರ್ಷಗಳ ಮೇಲಾಯಿತು. ಆದರೆ ಇಲ್ಲಿಯವರೆಗೂ ಕೆಲಸ ವೇನೂ ಆಗಿಲ್ಲ. ಜಿಲ್ಲಾ ಬೋರ್ಡಿನವರನ್ನು ಕೇಳಿದರೆ ಸರ್ಕಾರದವರನ್ನು ತೋರಿಸುತ್ತಾರೆ, ಸರ್ಕಾರದವರನ್ನು ಕೇಳಿದರೆ ಜಿಲ್ಲಾ ಬೋರ್ಡಿನವರು ಮಾಡಬೇಕಾದ್ದು ಆ ಕೆಲಸ ಎಂಬುದಾಗಿ ಹೇಳುತ್ತಿದ್ದಾರೆ. ಹೀಗಾಗಿ ಆ ರಸ್ತೆಯನ್ನು ಆಗದೆ ಅಲ್ಲಿನ ಸಾರ್ವಜನಿಕರಿಗೆ ತುಂಬ ಅನಾನುಕೂಲವಾಗಿದೆ. ಇದು ಬಹಳ ಮುಖ್ಯವಾದ ರಸ್ತೆ. ಅಲ್ಲದೆ ತಿಪಟೂರು ಒಂದು ದೊಡ್ಡ ವ್ಯಾಪಾರದ ಕೇಂದ್ರಸ್ಥಾನ. ಅಲ್ಲಿಗೆ ಪ್ರತಿನಿತ್ಯವೂ ಹಳ್ಳಿಗಾಡಿನವರು ಕಾಯಿ ಕೊಬರಿ ಮುಂತಾದ ತಮ್ಮ ಸಾಮಾನುಗಳನ್ನು ತರಬೇಕಾಗಿರುತ್ತದೆ. ಈ ಸಂಬಂಧವಾಗಿ ನಾವು ಸರ್ಕಾರಕ್ಕೆ ಅನೇಕ ಮನವಿಗಳನ್ನೂ ಮತ್ತು ಅರ್ಜಿಗಳನ್ನೂ ಸಲ್ಲಿಸಿರುತ್ತೇವೆ. ಆದರೆ ಈ ವಿಚಾರವನ್ನು ಸರ್ಕಾರದವರು ಮನಸ್ಸಿಗೇ ಹಾಕಿಕೊಳ್ಳುತ್ತಿಲ್ಲ. ತುಮಕೂರು ಜಿಲ್ಲಾಧಿಕಾರಿಗಳಿಗೆ ಅನೇಕ ಕಾವರ್ತಿ ಅರ್ಜಿಗಳನ್ನು ಕೊಡಲಾಗಿದೆ. ಅವರೂ ಸಹ ಮನಸ್ಸಿಗೆ ಹಾಕಿಕೊಂಡಿಲ್ಲ. ಇಲ್ಲಿಗೆ ಸುಮಾರು 7-8 ವರ್ಷಗಳಿಂದ ಹಿಂದೆ 1,500 ರೂಪಾಯಿಗಳು I.V.C. ಫಂಡ್ ಜಮಾ ಆಗಿದೆ. ಆದರೆ ಕಾರ್ಯಕ್ರಮಗಳನ್ನು ಮಾತ್ರ ಯಾರೂ ಕೈಗೊಂಡಿಲ್ಲ. ಸರ್ಕಾರದವರು ಈಗಲಾದರೂ ಈ ವಿಚಾರಕ್ಕೆ ತಕ್ಷಣ ಗಮನ ಕೊಡಬೇಕು. ಈ ರಸ್ತೆಯನ್ನು ಪೂರ್ಣವಾಗಿ ಸರ್ಕಾರದವರೇ ಮಾಡಿಸಿ ಕೊಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ. ತಾವು ಈ ಬಗ್ಗೆ ನಮ್ಮ ತಾಲ್ಲೂಕಿಗೆ ಯಾವ ಗ್ರಾಂಟನ್ನೂ ಒದಗಿಸಿಲ್ಲ. ಇದು ತುಂಬ ವಿಪಾದ ಕರವಾದ ಸಂಗತಿ. ತಿಪಟೂರು ಒಂದು ದೊಡ್ಡ ವ್ಯಾಪಾರ ಕೇಂದ್ರವಾದುದರಿಂದ ಮತ್ತು ಈ ರಸ್ತೆ ಬಹಳ ಮುಖ್ಯವಾದುದರಿಂದ ಇದನ್ನು ಸರ್ಕಾರದವರೇ ಮಾಡಿಸಿ ಕೊಡಲು ಸಾಧ್ಯವಾಗದಿದ್ದರೆ ತಾವು ಹೆಚ್ಚಿಗ್ರಾಂಟ್ ಮೊಬಲಗನ್ನಾದರೂ ಈ ರೋಡಿಗೋಸ್ಕರ ತುಮಕೂರು ಡಿಸ್ಟ್ರಿಕ್ಟ್ ಬೋರ್ಡಿಗೆ ಹಣ ಒದಗಿಸಿ ಕೊಟ್ಟು ಸದರಿ ರಸ್ತೆಯನ್ನು ಈ ವರ್ಷವೇ ಪೂರ್ತಿ ಮಾಡಿಸಿ ಈ ಮೇರೆ ರೈತಬಾಂಧವರಿಗೆ ಸಹಾಯ ಮಾಡಿ ಈ ರಸ್ತೆಯನ್ನು ಸರಿಪಡಿಸಿ ಕೊಡಬೇಕೆಂದು ಸರ್ಕಾರದವರನ್ನು ಒತ್ತಾಯಪಡಿಸುತ್ತೇನೆ.

Insufficiency of Grant for Rural Works.

*ಶ್ರೀ ಯು. ಎಂ. ಮಾದಪ್ಪ (ಚಾಮರಾಜನಗರ).–ಸ್ವಾಮಿ, ಈಗ ತಾವು ಗ್ರಾಮಾಭಿವೃದ್ಧಿ ಕಾರ್ಯಗಳಿಗೆ ಹೆಚ್ಚಿನ ಹಣವನ್ನು ಏಕೆ ಒದಗಿಸಲಿಲ್ಲ ಎಂಬುದನ್ನು ಕೇಳದೆ ಇದ್ದರೂ ಈಗ ಈ ಬಾಬಿಗೆ ಒದಗಿಸಲಾಗಿದ್ದ ಮೊಬಲಗನ್ನು ತಾವೇಕೆ ಪೂರ್ತಿಯಾಗಿ ಖರ್ಚುಮಾಡಲಿಲ್ಲ ಅನ್ನತಕ್ಕದ್ದರ ಬಗ್ಗೆ ನಾನು ಕಾರಣಗಳನ್ನು ಕೇಳಬೇಕಾಗಿದೆ. ಈಗ ಕೆಲವು ಜಿಲ್ಲಾ ಬೋರ್ಡುಗಳು ಒಪ್ಪಿಸಿರತಕ್ಕಂಥ ವರದಿಯನ್ನು ನೋಡಿದರೆ—ಅಂದರೆ 1954-55ರ ವರದಿಯನ್ನು ನೋಡಿದರೆ—ಮೈಸೂರು ಜಿಲ್ಲೆಯಲ್ಲಿ ಎಷ್ಟರಮಟ್ಟಿಗೆ ಈ ಅಭಿವೃದ್ಧಿಯ ಕೆಲಸ ಕಾರ್ಯಗಳು ನಡೆದಿರುತ್ತವೆ ಎಂಬ ಬಗ್ಗೆ ಈ ಮುಂದೆ ತಿಳಿಸತಕ್ಕಂಥ ಅಂಕಿಅಂಶಗಳಿಂದ ಅದು ವೇದ್ಯವಾಗುತ್ತದೆ.

Number of works taken for execution	... ...	112
Estimated cost	...	Rs. 1,92,500
Number of works completed	...	Nil
Number of works under progress.		Only 2
Outlay incurred	...	Rs. 16,445

ಹೀಗೆ ಈ ಕೆಲಸ ಕಾರ್ಯಗಳು ಎಷ್ಟರಮಟ್ಟಿಗೆ ಫಲಕಾರಿಯಾಗಿರುತ್ತವೆ ಅನ್ನುವುದನ್ನು ನಾವು ಈ ಅಂಕಿ ಅಂಶಗಳಿಂದ ತಿಳಿದುಕೊಳ್ಳಬಹುದು. ಆದರೆ ಏತಕ್ಕಾಗಿ ಈ ಕೆಲಸಗಳನ್ನು ಇವರು ಇಷ್ಟು ತಾತ್ಸಾರ ಮನೋಭಾವನೆಯಿಂದ ಮಾಡುತ್ತಿದ್ದಾರೆ ಅನ್ನುವು

ದಕ್ಕೆ ನಾವೀಗ ಕಾರಣಗಳನ್ನು ಕಂಡುಹಿಡಿಯಬೇಕಾಗಿದೆ. ಅದಕ್ಕಾಗಿ ಕೆಲವು ವಿಚಾರಗಳನ್ನು ತಿಳಿಸುವುದು ಅಗತ್ಯ.

ಈ ಕೆಲಸ ಕಾರ್ಯಗಳು ಮೊದಲು ಯಾರ ಅಡಳಿತಕ್ಕೆ ಒಳಪಟ್ಟಿದ್ದವು ಎಂಬುವನ್ನು ತಿಳಿದುಕೊಳ್ಳಬೇಕಾಗಿದೆ. ಮೊದಲು ಈ ಕೆಲಸಗಳು ರೂರಲ್ ಡೆವಲಪ್‌ಮೆಂಟ್ ಸಮಿತಿಗಳ ಅಡಳಿತಕ್ಕೊಳಪಟ್ಟಿದ್ದವು. ಈಗ ಈ ಕೆಲಸ ಕಾರ್ಯಗಳೆಲ್ಲಾ ಅಮಲ್ದಾರರ ಅಡಳಿತಕ್ಕೆ ಸೇರಿರುತ್ತವೆ. ಈ ದಿವಸ ಈ ಅಮಲ್ದಾರರು ಈ ಕೆಲಸಗಳ ಬಗ್ಗೆ ತಯಾರಿಸುವ ಪ್ರತಿಯೊಂದು ಅಂದಾಜು ಕೂಡ S.D.O. ಮೂಲಕ ಡಿ.ಸಿ.ಗೆ ಹೋಗಬೇಕಾಗಿದೆ. ಅಲ್ಲಿಂದ ಈ ಅಂದಾಜುಗಳು ಮಂಜೂರಾಗಿ ಬರಬೇಕಾಗಿದೆ. ನನಗೆ ನಿನ್ನೆ ತಾನೆ ತಿಳಿದು ಬಂದಿರುವಂತೆ ಇಲ್ಲಿಗೆ 3-4 ತಿಂಗಳ ಹಿಂದೆ ಕಳುಹಿಸಿಕೊಟ್ಟಂಥ ಅಂದಾಜುಗಳಿನ್ನೂ ಅಲ್ಲಿ ಇನ್ನೂ ಹಾಗೆ ಬಿದ್ದಿವೆಯೆಂದು ಗೊತ್ತಾಗುತ್ತದೆ. ಈ ಅಂದಾಜುಗಳು —ಅದಕ್ಕೆ ಸಂಬಂಧಪಟ್ಟ ಕಂಟ್ರಾಕ್ಟರು ಅದರ ಹಿಂದೆ ಹೋಗದೆ ಹೋದರೆ ಅವು ಎಷ್ಟು ದಿನಗಳಾದರೂ ಅಲ್ಲೇ ಬಿದ್ದಿರುತ್ತವೆ. ಆದರೆ ಆಗಾಗ್ಗೆ ಸಂಬಂಧಪಟ್ಟ ಸಬ್ ಓವರ್‌ಸೀಯರ್ ಏನಾದರೂ ಹೋಗಿ ಆ ಅಂದಾಜುಗಳೇನಾಗಿವೆ ಎಂದು ಕೇಳಿದರೆ "ನೀವು ಏತಕ್ಕೆ ಬರುತ್ತೀರಿ? ಆ ಸಂಬಂಧಪಟ್ಟ ಕಂಟ್ರಾಕ್ಟರು ಬರಲಿ ಹೋಗಿ, ಅತನು ಬಂದನಂತರ ಅವುಗಳನ್ನು ನೋಡೋಣ" ಎಂದು ಅಲ್ಲಿಯ ಗುಮಾಸ್ತರು ಹೇಳುತ್ತಿದ್ದಾರಂತೆ. ಹೀಗಾಗಿ ಆ ಕಂಟ್ರಾಕ್ಟರ್ ಈ ದಿವಸ ಆ ಅಂದಾಜುಗಳನ್ನು ಹಿಂಬಾಲಿಸಿ ಹೋಗದೆ ಇದ್ದುಬಿಟ್ಟರೆ ಅವು ಬೇಗ ಮಂಜೂರಾಗಿ ಬರುವಂತೆಯೇ ಇಲ್ಲ. ಹೀಗೆಲ್ಲಾ ಆಗಿ ಆ ಕೆಲಸಗಳು ಆಗುವುದು ಬಹಳ ನಿಧಾನವಾಗಿದೆ. ಪ್ರೊಸೀಜರ್ ಕೂಡ ಅಷ್ಟಾಗಿ ಸರಿಯಾಗಿಲ್ಲ.

ಇನ್ನು ಈ ರೆವಿನ್ಯೂ ಇಲಾಖೆಯಲ್ಲಿ ಕಂಟ್ರಾಕ್ಟ್ ಕೆಲಸ ಮಾಡಿದವರಿಗೆ ಬೇಗ ದುಡ್ಡು ಬೇರೆ ಬರುತ್ತಿಲ್ಲ. ಕೆಲಸಗಳು ಮುಗಿದು 4-5 ವರ್ಷಗಳಾದರೂ ಹಣವನ್ನು ಪಾವತಿಯಾಗಿಯೇ ಇಲ್ಲ. ಬಹುಶಃ ಇದು ಆತನತ್ತ ಹೋದಮೇಲೆ ಏನಾದರೂ ಬಂದೀತೋ ಹೆಗೋ! ಹೀಗಾಗಿ ಈ ದಿವಸ ಯಾವ ಕಂಟ್ರಾಕ್ಟರೂ ಕೂಡ ಈ ರೆವಿನ್ಯೂ ಇಲಾಖೆಯ ಬದುಕು ಅಂದರೆ ಬರುವುದಿಲ್ಲ. ಅಷ್ಟು ಜನ ಬೇಜಾರಾಗಿದ್ದಾರೆ. ಅನೇಕರು ಈ ರೆವಿನ್ಯೂ ಇಲಾಖೆಯವರು ಕೆಲಸಮಾಡಿಸಿಕೊಂಡನಂತರ ದುಡ್ಡು ಕೊಡುತ್ತಾರೆಯೇ ಅನ್ನುವ ವಿಚಾರದಲ್ಲಿ—ಈ ಇಲಾಖೆಯಮೇಲೆ ನಂಬಿಕೆಯೇ ಇಲ್ಲವೆಂದು ಅವರು ಹೇಳುತ್ತಿದ್ದಾರೆ. ಇದರಿಂದಲೂ ಕೂಡ ಈ ಕೆಲಸ ಕಾರ್ಯಗಳು ಹಿಂದೆಬೀಳಲು ಕಾರಣವಾಗಿದೆ.

ಇನ್ನೊಂದು ವಿಷಯವೇನೆಂದರೆ, ಈ ಹಿಂದೆ ಈ ರಸ್ತೆಗಳನ್ನು ಕ್ಲಾಸಿಫಿಕೇಷನ್ ಎಂದು ಹೇಳಿ ವಿಭಾಗ ಮಾಡಿದ್ದರು. ಒಂದು ಪಿ. ಡಬ್ಲ್ಯು. ರಸ್ತೆಯೆಂದೂ ಮತ್ತೊಂದು I.V.C. ರಸ್ತೆಯೆಂದೂ ವಿಭಾಗ ಮಾಡಿದ್ದರು. ಈ ದಿವಸ ಆ I.V.C. ರೋಡ್ಡುಗಳನ್ನು ಜಿಲ್ಲಾ ಬೋರ್ಡಿಗೆ ಸೇರಿಸಿದ್ದಾರೆ. ಇದೇನೋ ಒಳ್ಳೆಯದು. ಅಲ್ಲಿಯೂ ಕೂಡ ಇಂಜನಿಯರುಗಳು, ಓವರ್‌ಸೀಯರುಗಳೂ ಇದ್ದಾರೆ. ಈಗಾಗಲೇ ಕೆಲವು I.V.C. ರಸ್ತೆಗಳನ್ನು ಹೀಗೆ ಸೇರಿಸಲಾಗಿದೆ. ಹೀಗೆ ಮಾಡಿದಮೇಲೆ ಆ ಹಳ್ಳಿಗಳಿಗೆಲ್ಲಾ ಕೊಂಚ ಸೌಲಭ್ಯಗಳು ದೊರೆತಂತಾಗಿದೆ ಎಂದು ನಾನು ಭಾವಿಸುತ್ತೇನೆ. ಹೀಗಾದರೂ ಮಾಡಿದರೆ ಒಳ್ಳೆಯದು.

ಇನ್ನು ಸರ್ಕಾರದವರು ಈ ಬಾಬುಗಳಿಗೆ ಹಣವನ್ನು ಮಂಜೂರು ಮಾಡತಕ್ಕ ಬಗ್ಗೆ ಅವುಗಳನ್ನು ವರ್ಷಾ ಖ್ಯೆರಿನಲ್ಲಿ ಮಂಜೂರು ಮಾಡುತ್ತಾರೆ. ಇನ್ನೆನು ವರ್ಷ ಆಖ್ಯೆರಾಗುವುದಕ್ಕೆ 1-2 ತಿಂಗಳುಗಳಿದೆ ಅನ್ನುವಾಗ ಮಂಜೂರು ಮಾಡುತ್ತಾರೆ, ಇದು ಸರಿಯಾದುದಲ್ಲ. ಈ ಹಣವನ್ನು ವರ್ಷದ ಪ್ರಾರಂಭದಲ್ಲೇ ಮಂಜೂರು ಮಾಡಬೇಕು ಎಂಬುದಾಗಿ ತಿಳಿಸುತ್ತೇನೆ.

Rural Water Supply for Scheduled Castes.

ಶ್ರೀ ಟಿ. ಹನುಮಯ್ಯ (ಹಿರಿಯೂರು ಅನುಸೂಚಿತ ಜಾತಿಗಳು).—ಸ್ವಾಮಿ, ಈ ಗ್ರಾಮಾಭಿವೃದ್ಧಿಯನ್ನು ಸಾಧನೆ ಮಾಡುವುದಕ್ಕಾಗಿ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ನಿಮ್ನವರ್ಗದ ಜನಾಂಗದವರಿಗೆ ಕುಡಿಯುವ ನೀರಿನ ತೊಂದರೆಯನ್ನು ತಪ್ಪಿಸುವುದಕ್ಕೋಸ್ಕರವಾಗಿ ಈ ಹಿಂದೆ ರೂರಲ್ ವಾಟರ್ ಸಪ್ಲೈ ಸ್ಕೀಂ ಎಂದು ಒಂದು ಯೋಜನೆಯನ್ನು ತಯಾರಿಸಿ ಅದಕ್ಕೆ ಮೊಬಲಗನ್ನೂ ಕೂಡ ಮೊಸಲಾಗಿ ತೆಗೆದಿಟ್ಟರು. ಈ ದಿವಸ ಆ ಕೆಲಸ ಕಾರ್ಯಗಳೊಂದು ಆಗುತ್ತಿಲ್ಲ. ಈ ದಿವಸ ತಾವು ಒಂದೊಂದು ಜಿಲ್ಲೆಗೆ 10-15 ಸಾವಿರ ರೂಪಾಯಿಗಳನ್ನು ಕೊಟ್ಟರೆ ಅಲ್ಲಿ 4-5 ಬಾವಿಗಳನ್ನು ತೆಗೆಸಿದರೆ ಅಲ್ಲಿಗೆ ಹಣವೆಲ್ಲಾ ಖರ್ಚಾಗಿ ಹೋಗುತ್ತದೆ. ಹೀಗಾಗಿ ಈ ದಿವಸ ಪ್ರಜಾ ಸರ್ಕಾರ ಬಂದಿದ್ದರೂ ಗ್ರಾಮಾಂತರ ಪ್ರದೇಶಗಳಲ್ಲರ ತಕ್ಕ ಪ್ರಜೆಗಳಿಗೆ ಈ ಪ್ರಜಾಪ್ರಭುತ್ವ ಯುಗದಲ್ಲಿ ಕುಡಿಯುವ ನೀರಿಗೆ ಅನುಕೂಲತೆಗಳಿಲ್ಲದೆ—ನೀರನ್ನು ಇನ್ನೂ ಎತ್ತಿಹಾಕಿಸಿಕೊಂಡು ಬರುವಂಥ ಪ್ರಸಂಗಗಳೂ ಅನೇಕ ಕಡೆಗಳಲ್ಲಿ ಇದ್ದೇ ಇದೆ. ಹೀಗಾಗಿ ಈ ದಿವಸ ಆ ಹರಿಜನರು ಗ್ರಾಮಾಂತರ ಪ್ರದೇಶದಲ್ಲಿ ಕುಡಿಯುವ ನೀರಿಗಾಗಿ ಬಹಳ ತೊಂದರೆ ಪಡುತ್ತಿದ್ದಾರೆ—ಮೈಲಿಗಳ ಗಟ್ಟಲೆ ಹೋಗಿ ನೀರನ್ನು ಹೊತ್ತುಕೊಂಡು ಬರಬೇಕಾಗಿದೆ. ಆದುದರಿಂದ ಈ ತೊಂದರೆಯನ್ನು ನಿವಾರಣೆ ಮಾಡತಕ್ಕ ಬಗ್ಗೆ ಸರ್ಕಾರದವರು ಕೂಡಲೆ ಸೂಕ್ತ ಕಾರ್ಯ ಕ್ರಮಗಳನ್ನು ಕೈಗೊಳ್ಳಬೇಕಾದುದು ತೀರ ಅಗತ್ಯ ಎಂಬುದನ್ನು ತಿಳಿಸಲು ನಾನು ಈಗ ಈ ಖೋತಾ ಸೂಚನೆಯನ್ನು ಮಂಡಿಸಬೇಕಾಯಿತು.

Road from Yelahanka to Hessarghatta.

*ಶ್ರೀ ಕೆ. ವಿ. ಬೈರೇಗೌಡ (ಬೆಂಗಳೂರು ಉತ್ತರ ತಾಲ್ಲೂಕು).—ಸ್ವಾಮಿ, ನನ್ನ ಖೋತಾ ನಿರ್ಣಯದ ಬಗ್ಗೆ ನಾನು ಕೇವಲ ಒಂದೆರಡು ಮಾತುಗಳನ್ನು ಮಾತ್ರ ಆಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಈಗ ಯಲಹಂಕದಿಂದ ಹೆಸರಘಟ್ಟಕ್ಕೆ ಯಾವ ರಸ್ತೆಯೂ ಇಲ್ಲ. ಈ ಮಧ್ಯೆ ಇರತಕ್ಕಂಥ ಗ್ರಾಮದ ಜನರಿಗಂತೂ ತುಂಬಾ ತೊಂದರೆಯಾಗಿದೆ. ಅವರಿಗೆ ಎತ್ತಕಡೆ ಹೋಗುವುದಕ್ಕೂ ದಾರಿಯೇ ಇಲ್ಲದಂತಾಗಿದೆ. ಜಿಲ್ಲಾ ಬೋರ್ಡಿನವರಿಗೆ ಹೇಳಿದರೆ ಅವರು ಇದನ್ನು ಮನಸ್ಸಿಗೆ ಹಾಕಿಕೊಳ್ಳುತ್ತಿಲ್ಲ. ಆದ್ದರಿಂದ ಜಿಲ್ಲಾ ಬೋರ್ಡಿನವರಿಂದ ಜಾಗ್ರತೆಯಾಗಿ ಒಂದು ರಸ್ತೆಯನ್ನು ಯಲಹಂಕದಿಂದ ರಾಮಗೊಂಡನಹಳ್ಳಿ ಮಾರ್ಗವಾಗಿ ಹೆಸರಘಟ್ಟಕ್ಕೆ ಮಾಡಿ ಕೊಡಬೇಕೆಂದು ಸರ್ಕಾರದವರನ್ನು ಒತ್ತಾಯಪಡಿಸುತ್ತೇನೆ. ಈಗಾಗಲೆ ಯಲಹಂಕದಲ್ಲಿ ಆಸ್ಪತ್ರೆ, ವ್ಯವಸಾಯದ ಇಕ್ಕೆಸ್ಕ್ಟರ ಆಫೀಸು ಇತ್ಯಾದಿಗಳೆಲ್ಲಾ ಕೆಲಸ ಮಾಡುತ್ತಿವೆ. ಆದುದರಿಂದ ಈ ರಸ್ತೆಯನ್ನು ಜಾಗ್ರತೆಯಾಗಿ ಮಾಡಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

Mr. SPEAKER.—I want the House to consider this point. There is one more Demand, that is Veterinary. If they do not take up or discuss that Demand, I have no objection to the whole time being spent over this Demand. Veterinary Department is also an important department. I would request the Hon'ble Minister to reply now.

Sri T. CHANNIAH (Minister for Local Self-Government and Public Health).—Mr. Speaker, Sir, the Hon'ble members of this House must have gone through the brief report presented to them in regard to the several works undertaken by the Rural Development Department and I do not wish to repeat what has been mentioned in that report. But with regard to the specific points raised by several members, I wish to reply to them in brief. Sri S. Kariyappa wanted that a road connecting Anekal and Kanakapura which would be about 18 miles long to be taken up. The existing road from Anekal to Kanakapura is about 65 miles. I agree that a shorter road would be a great convenience. This suggestion will be examined and the work will be taken if possible.

My friend Sri M. Madiah said that the allotment under the "Depressed Class Amelioration" is not fully spent and that a portion of the amount is allowed to lapse. I might state that the amount that has been allotted for acquisition of land for formation of house sites and for the construction of houses, has been fully spent. But in regard to the amount allotted for construction of depressed class hostels, the entire amount is not spent. Some amount is yet unspent and we are considering how best the same could be funded. No decision has yet been taken in the matter.

Sri Madiah also said that four candidates recommended by the Public Service Commission for appointment as Special Officers for Depressed Classes have not been appointed by the Government. I assure the Hon'ble Member that early decision will be taken in the matter. Regarding the proposed Seminar, he wanted that it should deal with certain items of work. I may assure him that when the Seminar meets Government will see that the Seminar deals with the work relating to the amelioration of the Depressed Classes also.

4-30 P.M.

ಶ್ರೀ ಎಂ. ಮಾದಯ್ಯ.—ಸೆಮಿನಾರ್ ಮಾಡಬೇಕಾದರೆ ಈ ಅಧಿವೇಶನವಿರುವುದರಿಂದ ಸದಸ್ಯರು ಹೋಗಲು ತೊಂದರೆಯಾಗ ತ್ತದೆ. ಆದ್ದರಿಂದ ಅದನ್ನು ಅಧಿವೇಶನ ಮುಗಿದನಂತರ ಮಾಡಬೇಕೆಂದು ನನ್ನ ನಲಹೆ.

Sri T. CHANNIAH.—Yes. That will be done. With regard to the acquisition of lands for pending house sites for Depressed Class people in the villages, he said that there has been much delay. I assure the Hon'ble Member that acquisition proceedings are pushed through expeditiously. But in cases where there is serious objection there will be some delay which cannot be avoided.

My friend Sri Shivarudrappa has stated that the scheme for drinking water supply to Hangala village has not been taken up though an estimate has been prepared. The estimated cost of the scheme is Rs. 16,600 or so. It is a costly scheme. The difficulty is not so much as to how to meet this cost, but the question has arisen as to who should bear the maintenance charges. The place is not electrified. The maintenance charges will get reduced if the village is electrified and if the electric pump is installed. Who is to meet the maintenance charges? The villagers are unable to contribute any portion of these charges. On account of this difficulty, Government have not been able to take up the work so far. However, I assure the Hon'ble Member that Hangala Water Works scheme will be given due consideration.

My friend Mr. G. A. Thimmappa Gowda drew the attention of Government to the insufficient number of drinking water wells in Arkalgud Taluk. With regard to drinking water wells, many of my friends have stated—I do not wish to mention all their names—that the amount provided in the Budget, *i.e.*, ten lakhs, is not enough for having drinking water wells in rural areas. Last year we provided ten lakhs. In addition, we had provided about seven to eight lakhs of rupees out of Land Revenue Assignment.

Sri T. HANUMIAH.—What is the amount allotted last year?

Sri T. CHANNIAH.—Under the local development works scheme about eight lakhs had been provided. All told we had assigned nearly thirty lakhs for drinking water wells during the current year. Government are seriously considering to see—just as Government have undertaken the schemes for water supply to towns and city municipalities—that all villages which have no drinking water facilities should be provided with drinking water wells. My friend Sri Manjappa has stated that within the next two years, almost all the villages where there are no drinking water wells would be given priority in providing wells.

ಶ್ರೀ ಬಿ. ರಾಚಯ್ಯ.—ವರ್ಷದ ಕೊನೆಯಾದರೂ ಒಂದಾದರೂ ಅಂದಾಜು ತಯಾರಾಗದೇ ಇರುವುದಕ್ಕೆ ಕಾರಣವೇನು? ವಿಲೇಜ್ ಪಂಚಾಯತಿಗಳ ಅಸ್ಸೆಟ್ ಮೆಂಟಿನಿಂದ, ರೂರಲ್ ವಾಟರ್ ಸಪ್ಲೈ ಹಣದಿಂದ ಕೊಟ್ಟಿದ್ದಾರೆ, ಪ್ಲಾನಿಂಗ್ ಕಮಿಷನ್ ಕೆಲಸ ಮಾಡಿದ್ದಾರೆ, ಆದರೆ ಹಣ ಕೊಟ್ಟಿಲ್ಲ. ವಿಲೇಜ್ ಪಂಚಾಯತಿ ಅಸ್ಸೆಟ್ಮೆಂಟಿನಿಂದ ಇನ್ನೂ ಹಣ ಬಂದಿಲ್ಲವೆಂದು ಹೇಳುತ್ತಿದ್ದಾರೆ.

ಶ್ರೀ ಟಿ. ಚನ್ನಯ್ಯ.—ಕೊನೆಯಲ್ಲಿ ಅವರು ಕೊಟ್ಟಿದ್ದಾರೆ. ನಾವು ನವೆಂಬರ್ ಅಥವಾ ಡಿಸೆಂಬರ್‌ನಲ್ಲಿ ಕಳುಹಿಸಿದ್ದೇವೆ. Therefore, there was some delay. Unless the allotments are made, the State Government cannot immediately allot these sums to various places.

Sri J. MOHAMED IMAM.—Have you prepared a list of villages that are in need of drinking water wells?

Sri T. CHANNIAH.—Under the Five-Year Plan, nearly 10,000 wells have been programmed. Out of this, as many as 8,000 and odd wells have been undertaken and completed. 2,000 wells are yet to be completed. They are under various stages of progress. But we have not made a survey of the villages where drinking water wells are required. Wherever representations or proposals have come for well works to be taken up they are being given top priority.

Sri J. MOHAMED IMAM.—I would suggest that Government may make a survey and find out the number of villages that are actually in need of drinking water wells.

Sri T. CHANNIAH.—Even when you were the Minister, you had not completed the survey. It takes some time. Such survey cannot be finished within a short time.

Sri J. MOHAMED IMAM.—Government were pleased to state more than once that they would see that every village gets a drinking water well.

Sri T. CHANNIAH.—As far as possible.

Sri J. MOHAMED IMAM.—To implement that laudable object it is necessary that Government should have a clear picture as to how many wells have to be undertaken.

Sri B. HUTCHE GOWDA.—Are we to understand that the Minister will be guided by the actions of the previous Ministry?

Sri T. CHANNIAH.—Not that. But when compared to the number of well-works undertaken, the progress now made is considerable and much more than what was done during that Ministry.

Sri J. MOHAMED IMAM.—As District Board President, I sanctioned 363 wells and completed them.

Sri T. CHANNIAH.—If we take up the progress of well works that are completed, the number is huge. For the year 1955-56, we have provided ten lakhs of rupees and the grant under the local development works will be about eight lakhs of rupees, and you may add to this the land revenue assignment. This will be a substantial amount for well works in rural areas. Government are as much interested in providing drinking water wells as any one else. Just as we have sponsored a scheme in town and city municipalities. . . .

Sri Mulka GOVINDA REDDY.—That is the reason why he asked whether you have made a survey.

Sri T. CHANNIAH.—Even if a survey is made, we cannot complete all the works programmed. Where is the finance? We do not want to give false hopes. We straightaway say that so much work will be done.

Sri G. A. Thimmappa Gowda said that the Hassan District Board and the Government have not bestowed enough care towards repair of roads in Arkalgud Taluk, We instructed the Deputy Commissioner, Hassan to arrange for repairs of the roads that are in need of repair. Three or four roads which my

(SRI T. CHANNIAH.)

friend referred to will be taken up shortly under the Village Road Development Scheme and under the Local Development Works Scheme.

Srimathi Subbamma has referred to the I.V.C. roads in Malnad and said that these should be taken up and completed. It is under the consideration of Government that as far as possible top priority should be given to rural communications and well works in Malnad We have spent huge sums of money on communications—to the extent of thirty lakhs or so. We are at it to see that rural communications are improved in Malnad to a great extent.

Sri B. Madhavachar, referred to the construction of steps to Tungabhadra river at Anweri and other villages. He stated that the work has not been taken up through any agency as yet. He wanted the work to be taken up as this would be a great facility to the villagers. The matter will be examined and suitable action taken.

Sri T. C. Basappa referred to the mal-administration in certain municipalities. Perhaps he might be referring to Tarikere Municipality.

Sri T. C. BASAPPA.—I meant generally the administration of all municipalities; not only of the Tarikere Municipality, but in all the municipalities in the State.

Sri T. CHANNIAH.— Perhaps that municipality is in his view. I know definitely. I admit that there are lapses here and there in the adn inistration, of some municipalities. The Commissioner for Local Self-Government inspects municipalities. After his appointment, matters have definitely improved. Administration has improved. Shortcomings have been set right. There may be some municipalities where the Municipal Councils may not have conducted the Municipal affairs properly. The entire responsibility of the municipal administration rests with the members of the Municipal Council or such local bodies. Whatever shortcomings occur, they are solely responsible. These Municipal Councils enjoy certain statutory powers. Many a time Government cannot interfere. Wherever lapses and omissions are brought to the notice of the Government, Government have promptl yissued instructions to see that. . . .

Sri T. C. B SAPPA.—What about the appeals pending before Government from a long time?

Sri T. CHANNIAH.—No appeal with the Local Self-Government Minister will remain undisposed of for more than eight days.

Sri Nagappa Setty moved that certa n road works should be taken up in Shimoga District. My friend Sri Srinivasa Iyengar referred to tool and plant charges and said that these charges should be reduced from 12½ per cent to a minimum. We have already reduced the same from 12½ to 10 per cent now. Regarding the appointment of a separate engineering section to look after the local development works, those proposals are before Government which envisage that all local development works, district board works, village panchayet works and works of municipalities, would be taken up by a separate section, as the Public Works Department is already saddled with many works of their own to be executed. That proposal is before the Government and is being considered.

If free labour is contributed by the village people, the Government have no objection, Sir, to take up some of the road works. In fact, we intend taking up some road works in T.-Narasipur Taluk also. Sri B. Hutche Gowda referred to the provision of Rs. 4 lakhs for Rural Communications and the provision of Rs. 10 lakhs for providing drinking water facilities in villages and said that they were insufficient. As I said, we have provided more funds than what was provided last year. The amount of Rs. 4 lakhs is the maximum that we could provide. I think, when we pool all our resources, that is, the grants from the Government of India and the grants that are made available for the purpose by the Government of Mysore, a total sum of about Rs. 50 lakhs will be available for drinking woter warks in the State. My friend Sri Boranna Gowda also referred to the same points regarding water supply and rural communications.

As regards the road from Arsikere to Kuruvanka referred to by Sri Panchakshariah, I wish to point out that this road has already been formed. Extension of this road to Kyathanahalli at a distance of 3½ miles at a cost of Rs. 4,000 has been sanctioned under the Local Development Works programme in August 1954. This will also be taken up shortly. Sri T. G. Thimme Gowda wanted certain roads to be constructed in Tiptur Taluk. Sir, these I.V.C. roads are the primary responsib lity of the District Boards and unless the District Boards meet at least a portion of the cost of construction of the roads, the Government cannot render assistance to them. Sri H. C. Linga Reddy wanted man-power to be conscripted for carrying out rural development works. This suggestion offends the provisions of article 23 of the Constitution of India. We cannot force people to contribute labour in the manner suggested.

Sri K. PATTABHIRAMAN (Kolar).—What he said was that you should give sufficient inducement to the people to come forward.

Sri T. CHANNIAH.—We will be too glad if people come forward to contribute free labour so that we may make the best use of it. Sri U. M. Madappa wanted some road works to be taken up in his Taluk. He pointed out that there was considerable delay in the taluk offices and sub-division offices and that the contractors' claims were not settled promptly. I will see that such delays are minimised and the claims are settled promptly. My friend Sri T. Hanumiah said that separate drinking water wells should be provided for Harijans. It is now the policy to provide common drinking water wells in the rural areas as far as possible.

ಶ್ರೀ ಟಿ. ಹನುಮಯ್ಯ.—ಮಂತ್ರಿಗಳು tour ಮಾಡಿದಾಗ ಹರಿಜನರನ್ನು ಕರೆದುಕೊಂಡು ಹೋಗಿ ಸವರ್ಣ ಹಿಂದುಗಳ ಭಾವಿಯ ನೀರನ್ನು ತೆಗೆಸಿದ್ದಾರೆಯೇ ?

Sri T. CHANNIAH.—In actual practice, separate dug wells are being provided for Harijans. When people become more and more educated, the problem will solve itself. Sri Narasimha Reddy urged that Nagavarthanisandra Road which is under the control of three departments should be vested in one department only. Regarding the road from Yelahanka to Hessarghatta *via* Ramagondanahlli to which my friend Sri Byre Gowda referred, I will examine his request and see what could be done.

Sri A. BHEEMAPPA NAIK.—He has taken all the time and we have no time to discuss the other Demand.

Sri T. CHANNIAH.—I have to reply to the points raised by all the Members.

Mr. SPEAKER.—He has consumed time only for replying to the various points.

The question is :

"That a sum not exceeding Rs. 55,26,000 be granted to the Government to defray the charges which will come in course of payment during the year ending 31st day of March 1956, in respect of 'Rural Development'."

The motion was adopted.

DEMAND No. 24—VETERINARY

41. VETERINARY.

Mr. SPEAKER.—Motion moved :

"That a sum not exceeding Rs. 32,42,065 be granted to the Government to defray the charges which will come in course of payment during the year ending 31st of March 1956, in respect of 'Veterinary'."

There are hardly 10 minutes. The Members will move only one or two cut motions.

Sri L. SIDDAPPA (Channagiri).—What they have done and what they proposed to do during the next year may be stated by the Minister.

Mr. SPEAKER.—The Minister will speak on the Demand.

Dr. R. NAGAN GOWDA (Minister for Agriculture).—I wish to say that the many points that have been raised by the Hon'ble Members in the cut motions come under three or four important categories. One is provision of more hospitals and dispensaries in the countryside ; second is increasing

(DR. R. NAGAN GOWDA.)

the number of artificial insemination centres and the third is releasing kavals for grazing purposes and fourth and last among the important ones is increasing dairy cattle and milk supply for the State in general. With regard to the first, I wish to state that we are here in the most enviable position of having the largest number of dispensaries per 100,000 population of cattle, than anywhere else in India. The Royal Commission on Agriculture suggested that we should have a dispensary for every 25,000 cattle. We have almost reached that limit. At present we are providing a dispensary or hospital for every 27,000 cattle. This year though we are not providing for any new dispensaries or hospitals, we are thinking of improving and upgrading some of the present dispensaries to a higher level. We expect, Sir, in the course of next year that we will be able to give more dispensaries to places where they are not available at present. The next question is about artificial insemination centres. This is a matter in which the State is very much interested because this is one of the ways by which cattle could be upgraded in the shortest time possible. We have already a number of artificial insemination centres. It is our desire to have one at each district headquarters and later on at each taluk headquarters.

Sri J. MOHAMED IMAM (Jagalur).—What about Jagalur ?

Dr. R. NAGAN GOWDA.—We are now thinking also of having artificial insemination centres at each one of the National Extension Service Blocks. We expect, Sir, by the end of the Second Five-Year Plan, we will be able to have 50 more artificial insemination centres and so in this way we are going to improve the cattle breed. Now, the fourth item is about improving the milk quality. Artificial insemination work is directly connected with improving the milk quality of the cattle. So far as Bangalore and Mysore are concerned, we are having some bulls which can produce cows of very high milking capacity and we are using them here. Later on, we wil be able to make use of the imported animals by the Indian Dairy Institute which belongs to the Government of India. The same thing we are doing by using our own well-known Sindhi Bulls. We have got a number of Sindhi Bulls in different places in the State. This helps also to improve the malnad Gidda. The malnad Gidda is very useful in malnad areas especially for paddy cultivation. Though it is small, it is very effective and useful. We are trying to improve them by using Sindhi Bulls on these animals.

There is one more point in which a few of the Hon'ble Members are interested and that is about the release of kavals. Now, we are considering the question and I think we will be able to release a few kavals for grazing purposes to the villagers.

Sri Mulka GOVINDA REDDY (Chitaldrug).—Please say something with regard to milk supply.

Dr. R. NAGAN GOWDA.—We had a Committee appointed two years ago regarding the supply of better and good milk in places like Bangalore and Mysore and the Committee has recommended that we should go ahead with the formation of Dairy Co-operative Unions and that matter we are considering and that is the only way it can be done, for, as you all know, dairy unions in different places like Madras are doing very good work. With these words, I recommend the Demand to the House.

Mr. SPEAKER.—The question is :

"That a sum not exceeding Rs. 32,42,035 be granted to the Government to defray the charges which will come in course of payment during the year ending 31st of March 1956, in respect of 'Veterinary'."

The motion was adopted.

Mr. SPEAKER.—The House will now rise for the day and meet tomorrow at 12 NOON.

The House adjourned for the day at Five of the Clock to meet again at Twelve of the Clock on Thursday, the 17th March 1955.

WD 4508—GPB—550—4-6-55